ನಮ್ಮ ಮಾನಸ

ಸಂಪುಟ : 1 ಆಗಸ್ಟ್ 2007 ಸಂಚಿಕೆ : 4



ಸ್ವಾತಂತ್ರ್ಯೋತ್ಸವದ ವಿಶೇಷ ಸಂಚಿಕೆ

ನಮ್ಮ ಮಾನಸ

ಆಗಸ್ಟ್ 2007

ಸಂಪುಟ : 1 ಸಂಚಿಕೆ : 4

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road,
Raghavanagara
New Timberyard Layout
Bangalore - 560 026.
✆ : 26757159 / 32715773

•

ಚಂದಾ ವಿವರ

ಬಿಡಿಪ್ರತಿ	8–00 ರೂ.
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	100–00 ರೂ.
ಸಂಸ್ಥೆಗಳಿಗೆ	150–00 ರೂ.

ಪರಿವಿಡಿ

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ,
ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ
ಡಿ.ಡಿ. ಮೂಲಕ ಕಳಿಸಬಹುದು

ಸಂಪಾದಕೀಯ

ಭಾರತಕ್ಕೆ ಸ್ವಾತಂತ್ರ್ಯ – ೬೦; ಮಹಿಳೆಗೆ ಸ್ವಾತಂತ್ರ್ಯ !

ಭಾರತ ೬೦ನೇ ವರ್ಷದ ಸ್ವಾತಂತ್ರ್ಯೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷೆಯಾಗಿ ಶ್ರೀಮತಿ ಪ್ರತಿಭಾತಾಯಿ ಪಾಟೀಲ್ ಆಯ್ಕೆಯಾಗಿರುವುದು ಮಹತ್ವದ ಸಂಗತಿಯೇ ಆಗಿದೆ. ಸಾಂಕೇತಿಕವಾಗಿ ಭಾರತದ ಮಹಿಳೆಯೊಬ್ಬರು ದೇಶದ ಅತ್ಯುನ್ನತ ಸ್ಥಾನ ಪಡೆದಿರುವುದು ಚಾರಿತ್ರಿಕವಾಗಿ ಬಹುಮುಖ್ಯವಾದ ವಿಚಾರವಾಗಿದೆ.

ಮಹಿಳೆಯೊಬ್ಬರಿಗೆ ಈ ಸ್ಥಾನವನ್ನು ನೀಡಬೇಕೆಂಬ ಉದ್ದೇಶದಿಂದ ಶ್ರೀಮತಿ ಪ್ರತಿಭಾತಾಯಿ ಪಾಟೀಲರನ್ನು ಕಾಂಗ್ರೆಸ್ ಪಕ್ಷ ಆಯ್ಕೆ ಮಾಡಲಿಲ್ಲ. ಯು.ಪಿ.ಎ.ನಲ್ಲಿ ಅಭ್ಯರ್ಥಿಯ ವಿಚಾರದಲ್ಲಿ ಒಮ್ಮತ ಮೂಡದ ಕಾರಣ ಅಚಾನಕ್ ಆಗಿ ಮಹಿಳಾ ಅಭ್ಯರ್ಥಿಯಾಗಿ ಪ್ರತಿಭಾ ಪಾಟೀಲರನ್ನು ಕಣಕ್ಕೆ ನಿಲ್ಲಿಸಲಾಯಿತು. ರಾಷ್ಟ್ರಾಧ್ಯಕ್ಷರ ಚುನಾವಣಾ ಪ್ರಕ್ರಿಯೆಯ ಹಿಂದಿರುವ ರಾಜಕಾರಣವನ್ನು, ಆರೋಪ, ಪ್ರತ್ಯಾರೋಪಗಳನ್ನು ಗಮನಿಸಿದರೆ, ದೇಶದ ಹಿತಾಸಕ್ತಿಗಿಂತ ರಾಜಕೀಯ ಪಕ್ಷಗಳ ಹಿತಾಸಕ್ತಿಗಳೆ ಆದ್ಯತೆ ಪಡೆದಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ.

ದೇಶಕ್ಕೆ ಸ್ವತಂತ್ರ ಬಂದು ಅರವತ್ತು ವರ್ಷಗಳ ಅನಂತರ ಮಹಿಳೆಯೊಬ್ಬರು ರಾಷ್ಟ್ರಾಧ್ಯಕ್ಷೆಯ ಹುದ್ದೆಗೆ ಆಯ್ಕೆಯಾದ ವಿಚಾರವನ್ನು ನಮ್ಮ ದೇಶದ ಮಹಿಳೆಯರು ಹೇಗೆ ಸ್ವೀಕರಿಸಬೇಕು? ಇದು ಸಾಮಾನ್ಯ ಮಹಿಳೆಯರ ಬದುಕಿನಲ್ಲಿ ಯಾವ ಪರಿಣಾಮವನ್ನು ಬೀರುತ್ತದೆ? ಪ್ರತಿಭಾ ಪಾಟೀಲ್ ಅವರು ಆಯ್ಕೆಯಾಗಿರುವುದು ಒಂದು ಅರ್ಥದಲ್ಲಿ ಸಾಂಕೇತಿಕ ಪ್ರತಿನಿಧಿತ್ವ, ಇದಕ್ಕೆ ನಾವು ಅರವತ್ತು ವರ್ಷ ಕಾಯಬೇಕಾಗಿತ್ತೆ? ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಮಹತ್ವದ ಪಾತ್ರ ವಹಿಸಿರಲಿಲ್ಲವೆ? ಸ್ವತಂತ್ರ ಸಂಗ್ರಾಮದಲ್ಲಿ ಭಾಗವಹಿಸುತ್ತಿದ್ದ, ಅಸಾಮಾನ್ಯ ಹಾಗೂ ಸಾಮಾನ್ಯ ಮಹಿಳೆಯರು ಸ್ವಾತಂತ್ರ್ಯಾನಂತರ ಪುರುಷಕೇಂದ್ರಿತ ರಾಜಕಾರಣದಲ್ಲಿ ಮೂಲೆಗುಂಪಾಗಿರುವುದು ಈಗಾಗಲೇ ದಾಖಲಾಗಿದೆ. ಸ್ವತಂತ್ರ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ್ದ ಸರೋಜಿನಿ ನಾಯ್ಡು, ಸುಚೇತನಾ ಕೃಪಲಾನಿಯಂತಹ ಮಹಿಳೆಯರಿದ್ದರೂ ಅಂತಹ ಪರಂಪರೆಯ ಬೇರು ಹರಿದು ಹೋದದ್ದರ ಹಿನ್ನೆಲೆಯೇನು ಎಂಬುದು ಈಗಲೂ ಜೀವಂತ ಪ್ರಶ್ನೆಯೆ ಆಗಿದೆ.

ರಾಜಕೀಯ ಅಧಿಕಾರ ಹಂಚಿಕೆಯ ಪ್ರಶ್ನೆಯನ್ನೆ ತೆಗೆದುಕೊಳ್ಳಿ. ಮಹಿಳೆಯರಿಗೆ ರಾಜಕೀಯ ಮೀಸಲಾತಿಯನ್ನು ನೀಡಲು ಎಲ್ಲಾ ರಾಜಕೀಯ ಪಕ್ಷಗಳೂ ಹಿಂಜರಿಯುತ್ತಿರುವುದರಿಂದಲೇ ಮಹಿಳೆಯರ ಮೀಸಲಾತಿ ಮಸೂದೆಯು ಸಂಸತ್ತಿನಲ್ಲಿ ಪಾಸಾಗದೆ ನೆನಗುದಿಗೆ ಬಿದ್ದಿದೆ. ಮೀಸಲಾತಿಯ ಮಿತಿಗಳ ಬಗ್ಗೆ ಏನೇ ವಾದವಿವಾದಗಳಿದ್ದರೂ ಅದು ದೇಶದ ಅತ್ಯುನ್ನತ ಸ್ಥಾನಕ್ಕೇರಲು ಹಾಗೂ ರಾಜಕೀಯ ಅಧಿಕಾರ ಹಂಚಿಕೊಳ್ಳಲು ಮಹಿಳೆಯರಿಗೆ ಹೆಚ್ಚು ಅವಕಾಶಗಳನ್ನು ನೀಡುತ್ತದೆ. ಗ್ರಾಮಪಂಚಾಯತಿ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಅಧಿಕಾರ ಹಂಚಿಕೊಳ್ಳಲು ತಯಾರಿರುವ ಪುರುಷ ರಾಜಕಾರಣ, ಮಹಿಳೆಯರೊಂದಿಗೆ ಉನ್ನತ ಅಧಿಕಾರವನ್ನು ಹಂಚಿಕೊಳ್ಳಲು ಸಿದ್ಧರಿಲ್ಲದಿರುವುದಕ್ಕೆ ಮಸೂದೆಯು ಪಾಸಾಗದಿರುವುದೇ ಸ್ಪಷ್ಟವಾದ ನಿದರ್ಶನ.

ಮಹಿಳೆಯರ ಸ್ಥಾನಮಾನದ ವಿಚಾರ ಚರ್ಚೆಯಾದಾಗಲೆಲ್ಲಾ ರಾಜಕಾರಣದಲ್ಲಿ ಉನ್ನತಸ್ಥಾನ ಪಡೆದ ಕೆಲವು ಮಹಿಳೆಯರ ಹೆಸರನ್ನು ಹೇಳಿ ಸಾಮಾನ್ಯೀಕರಿಸುವುದನ್ನು ನಾವು ನೋಡುತ್ತೇವೆ. ಇಂದಿರಾಗಾಂಧಿ, ಸೋನಿಯಾಗಾಂಧಿ, ಈಗ ಮಾಯಾವತಿ ದೇಶ, ಪಕ್ಷ ಹಾಗೂ ಆಡಳಿತದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದರೂ, ಇವರು ಜನಸಾಮಾನ್ಯ ಮಹಿಳೆಯರನ್ನು ಪ್ರತಿನಿಧಿಸುತ್ತಾರೆಯೆ? ಚರಿತ್ರೆಯಲ್ಲಿ ಹಾಗೂ ಪ್ರಸ್ತುತ ಸನ್ನಿವೇಶದಲ್ಲಿ ವಿವಿಧ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯರನ್ನು ಕಾಣಬಹುದು. ಈ ಸಾಂಕೇತಿಕ ಪ್ರತಿನಿಧಿತ್ವ ಜನಸಾಮಾನ್ಯ ಮಹಿಳೆಯರ ವಾಸ್ತವ ಜೀವನವನ್ನು ಎಷ್ಟರಮಟ್ಟಿಗೆ ಪ್ರತಿಬಿಂಬಿಸುತ್ತದೆ ಎಂಬುದು ಮುಖ್ಯವಾದ ಪ್ರಶ್ನೆ. ಇಂತಹ ಸಾಂಕೇತಿಕತೆಯನ್ನು ಮೀರುವುದು ಮುಖ್ಯವಾಗುತ್ತದೆ. ಮಹಿಳೆಯರ ಸ್ಥಿತಿ-ಗತಿಯನ್ನು ಸುಧಾರಿಸುವ ಪ್ರಾಮಾಣಿಕ ಪ್ರಯತ್ನ, ಹೋರಾಟ ನಡೆದಾಗ ಮಾತ್ರ ಬದಲಾವಣೆಯನ್ನು ತರಲು ಸಾಧ್ಯವಾಗುತ್ತದೆ. ಹಾಗಿಲ್ಲದೆ ಹೋದಲ್ಲಿ ಅವರು ಕೇವಲ ಟೊಳ್ಳು ಸಂಕೇತಗಳಾಗಿ ನಮ್ಮ ಮುಂದಿರುತ್ತಾರೆ.

ಸ್ವಾತಂತ್ರ್ಯ ಬಂದು ೬೦ ವರ್ಷದ ಅವಧಿಯಲ್ಲಿ ಮಹಿಳೆಯರ ಬದುಕಿನಲ್ಲಿ ಬದಲಾವಣೆಯಾಗಿದೆ. ಮಹಿಳೆಯರು ವಿದ್ಯಾವಂತೆಯರಾಗಿದ್ದಾರೆ. ಉನ್ನತ ಹುದ್ದೆಯನ್ನು ಪಡೆದು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ಆರ್ಥಿಕ ಸ್ವಾತಂತ್ರ್ಯವನ್ನು ಪಡೆದಿದ್ದಾರೆ. ತಮಗೆ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳಬಹುದಾದ ಸಾಮರ್ಥ್ಯ ಹಾಗೂ ಅವಕಾಶವನ್ನು ಅವರು ಪಡೆದಿದ್ದಾರೆ. ಉದ್ಯೋಗ

ನೈಪುಣ್ಯವನ್ನು ಅವರು ಪಡೆದಿದ್ದಾರೆ. ಅವರ ತಾಯಂದಿರು ಕನಸಿನಲ್ಲಿಯೂ ಕಾಣಲಾಗದ ಸ್ಥಾನಮಾನವನ್ನು ಹೆಣ್ಣುಮಕ್ಕಳು ಪಡೆದಿದ್ದಾರೆ.

ಆದರೆ ಇದಕ್ಕೆ ಇನ್ನೊಂದು ಮುಖವಿದೆ. ಕೋಟ್ಯಂತರ ಹೆಣ್ಣುಮಕ್ಕಳು ಇನ್ನೂ ಅನಕ್ಷರತೆಯ ಕೂಪದಲ್ಲಿ ಬಂಧಿತರಾಗಿದ್ದಾರೆ. ಬಡತನವೇ ಅವರ ಉಸಿರಾಗಿದೆ. ಹಸಿವಿನಿಂದ ಮಕ್ಕಳನ್ನು ಮಾರುವ ತಾಯಂದಿರಿದ್ದಾರೆ. ದೇಹವನ್ನು ಮಾರುವ ಹೆಣ್ಣುಮಕ್ಕಳಿದ್ದಾರೆ. ಆರೋಗ್ಯ ರಕ್ಷಣೆಯ ಭರವಸೆ ಅವರಿಗಿಲ್ಲ. ಎಲ್ಲ ಅವಕಾಶಗಳಿಂದ ವಂಚಿತರಾದ ಗ್ರಾಮಾಂತರ ಹೆಣ್ಣುಮಕ್ಕಳಿದ್ದಾರೆ. ಸಮಾಜದ ಕಟ್ಟಕಡೆಯ ಮಹಿಳೆ ಬದುಕುವ ಹಕ್ಕಿಗಾಗಿ ಹೋರಾಡುತ್ತಿದ್ದಾಳೆ. ಜಾತಿ ಕಾರಣದಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುವ ದಲಿತ ಮಹಿಳೆಯರಿದ್ದಾರೆ. ಕನಿಷ್ಠ ಕೂಲಿಗಾಗಿ ದುಡಿಯುವ ಸಾವಿರಾರು ಮಹಿಳೆಯರಿದ್ದಾರೆ. ಅವರಿಗೆ ಆರ್ಥಿಕ ಭದ್ರತೆಯಿಲ್ಲ.

ನಮ್ಮ ದೇಶ ರಾಜಕೀಯವಾಗಿ ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಪಡೆದಿದ್ದರೂ, ಪುರುಷರ ಫ್ಯೂಡಲ್ ಮನೋಭಾವನೆ ಗಟ್ಟಿಯಾಗಿ ತಳವೂರಿದೆ. ಜಾಗತೀಕರಣ, ಖಾಸಗೀಕರಣ, ಕೋಮುವಾದದ ಹಿನ್ನೆಲೆಯಲ್ಲಿ ಪುರುಷಪ್ರಧಾನ ಮನೋಭಾವನೆ ಕೇಂದ್ರೀಕೃತಗೊಳ್ಳುತ್ತಿದೆ. ಹಾಗಾಗಿಯೇ ಮಹಿಳೆಯರ ಮೇಲೆ ನಡೆಯುವ ಹಿಂಸೆ, ದೌರ್ಜನ್ಯಗಳ ಸ್ವರೂಪ ಸಂಕೀರ್ಣಗೊಳ್ಳುತ್ತಿದೆ. ಸ್ವಾತಂತ್ರ್ಯಾನಂತರ ಮಹಿಳೆಯರ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿ ಹಲವಾರು ಕಾಯಿದೆಗಳು ಜಾರಿಗೆ ಬಂದಿರುವುದು ಅವಳಿಗೆ ಧ್ವನಿ ನೀಡಿದೆ. ಅತ್ಯಾಚಾರ, ವರದಕ್ಷಿಣೆ, ಆಸ್ತಿ ಹಕ್ಕು, ಕೌಟುಂಬಿಕ ದೌರ್ಜನ್ಯ ಮುಂತಾದವುಗಳಿಗೆ ಸಂಬಂಧಪಟ್ಟ ಕಾಯಿದೆಗಳು ಅವಳ ರಕ್ಷಣೆಗೆ ಅವಕಾಶ ನೀಡಿದ್ದರೂ ಕಾನೂನಿನಲ್ಲಿನ ಮಿತಿಗಳು, ಅಧಿಕಾರಶಾಹಿ ಹಾಗೂ ನೌಕರಶಾಹಿಯಲ್ಲಿನ ಭ್ರಷ್ಟಾಚಾರದಿಂದಾಗಿ ಆಕೆ ನ್ಯಾಯಾಲಯದ ಬಾಗಿಲನ್ನು ಬಡಿಯುತ್ತಲೇ ಇರಬೇಕಾದ ಸನ್ನಿವೇಶವನ್ನು ಸೃಷ್ಟಿಸಿವೆ.

ಇಂದು ಬದಲಾಗುತ್ತಿರುವ ರಾಜಕೀಯ ಸನ್ನಿವೇಶದಲ್ಲಿ ಪ್ರತಿಯೊಂದು ರಾಜ್ಯದಲ್ಲೂ ಮಹಿಳೆಯರು ವಿಶಿಷ್ಟವಾದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಜಮ್ಮು-ಕಾಶ್ಮೀರದಲ್ಲಿ ಉಗ್ರವಾದದ ಪರಿಣಾಮವಾಗಿ ತಮ್ಮ ಮಕ್ಕಳನ್ನು ಕಾಣೆಯಾದ / ಕಳೆದುಕೊಂಡ ತಾಯಂದಿರ ರೋದನ ಮುಗಿಲು ಮುಟ್ಟುತ್ತಿದೆ. ಮಣಿಪುರದಲ್ಲಿ ಮಿಲಿಟರಿ ಸೈನ್ಯದ ದೌರ್ಜನ್ಯಕ್ಕೆ ಅಮಾಯಕ ಹೆಣ್ಣು ಮಕ್ಕಳು ಬಲಿಯಾಗುತ್ತಿದ್ದಾರೆ. ಜೋಪಡಿಗಳಲ್ಲಿ ಬದುಕುವ ಹೆಣ್ಣುಮಕ್ಕಳ ಜೀವನ ಮಳೆಗಾಲದಲ್ಲಿ ನರಕ ಸದೃಶವಾಗುತ್ತಿದೆ. ಮುಂಬಯಿ ಮೊದಲಾದ ಕೆಲವೆಡೆ ಇದರ ಪ್ರಮಾಣ ಇನ್ನೂ ಅಧಿಕ. ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳು ನಿರ್ಗತಿಕವಾಗುತ್ತಿವೆ. ಇಂತಹ ಹೆಣ್ಣುಮಕ್ಕಳಿಗೆ ಭಾರತದಲ್ಲಿ ಮಹಿಳೆಯೊಬ್ಬರು ರಾಷ್ಟ್ರಪತಿಯಾಗಿರುವುದು ಏನನಿಸುತ್ತಿದೆ? ಏನಾದರೂ ಅರ್ಥ ಪಡೆಯುತ್ತದೆಯೆ?

ರಾಜಕೀಯ ಕ್ಷೇತ್ರದಲ್ಲು ಎಷ್ಟು ಮಹಿಳೆಯರು ಪ್ರಮುಖ ಸ್ಥಾನದಲ್ಲಿದ್ದಾರೆ, ಕೇವಲ ಬೆರಳೆಣಿಕೆಯಷ್ಟು. ಆಲಂಕಾರಿಕವಾಗಿ ಕೆಲವು ಖಾತೆಗಳನ್ನು ಅವರಿಗೆ ನೀಡಲಾಗುತ್ತದೆ. ಕಾರ್ಪೊರೇಟ್ ಹಾಗೂ ಖಾಸಗಿ ಕ್ಷೇತ್ರವನ್ನು ಮಹಿಳೆಯರು ಶಕ್ತವಾಗಿ ನಿಭಾಯಿಸಬಲ್ಲವರಾದರೆ ಅರ್ಥ, ಗೃಹ, ಕೃಷಿ, ರಕ್ಷಣೆ ಮುಂತಾದ ಖಾತೆಗಳನ್ನು ಅವರು ನಿರ್ವಹಿಸಲಾರರೆ? ದಲಿತ, ಮುಸ್ಲಿಂ, ಮಹಿಳೆ ಹೀಗೆ ಸಾಂಕೇತಿಕವಾಗಿ ಆಯ್ಕೆ ಮಾಡಿ 'ಬಾಯಿ' ಮುಚ್ಚಿಸುವ ರಾಜಕಾರಣವನ್ನು ಮೀರಿ ನಿಜವಾದ ಬದಲಾವಣೆ ತರಬಲ್ಲ ಚೈತನ್ಯವುಳ್ಳ, ಅಂಚಿಗೆ ತಳ್ಳಲಾದ ತಳಸಮುದಾಯ ಹಾಗೂ ಮಹಿಳೆಯರೊಂದಿಗೆ ಅಧಿಕಾರ ಹಂಚಿಕೊಳ್ಳುವ ರಾಜಕಾರಣದ ಅಗತ್ಯ ನಮಗಿದೆ.

* * *

ತಲೆಯ ತುಂಬಾ ಸೆರಗು ಹೊದ್ದು, ವಿನಯ, ನಮ್ರತೆ, ನಿಷ್ಠೆಯ ಪ್ರತಿರೂಪದಂತಿರುವ ಶ್ರೀಮತಿ ಪ್ರತಿಭಾತಾಯಿ ಪಾಟೀಲ ಪ್ರಥಮ ಮಹಿಳಾ ರಾಷ್ಟ್ರಾಧ್ಯಕ್ಷೆಯಾಗಿ ಅಧಿಕಾರ ಸ್ವೀಕರಿಸುತ್ತಿರುವ ಹಿನ್ನಲೆಯಲ್ಲಿಯೇ ರಾಷ್ಟ್ರದ ಪ್ರಥಮ ಐ.ಪಿ.ಎಸ್. ಅಧಿಕಾರಿಯಾದ ಕಿರಣ್‌ಬೇಡಿ ತಾರತಮ್ಯಕ್ಕೆ ಒಳಗಾದ ಘಟನೆ ಎಷ್ಟು ವಿಪರ್ಯಾಸ! ಮ್ಯಾಗ್ಸೇಸೆ ಪುರಸ್ಕೃತ ಕಿರಣ್‌ಬೇಡಿಯ ವ್ಯಕ್ತಿತ್ವ ಭಿನ್ನವಾದುದು. ಆಕೆಯ ಧೈರ್ಯ, ಸಾಹಸ ಪ್ರವೃತ್ತಿ ವಿಶಿಷ್ಟವಾದುದು. ಯಾವ ಜವಾಬ್ದಾರಿ ನೀಡಿದರೂ ಅಲ್ಲಿ ತನ್ನ ಛಾಪನ್ನು ಮೂಡಿಸುತ್ತಾಳೆ. ಆಕೆ ದೆಹಲಿಯ ಪೊಲೀಸ್ ಕಮಿಷನರ್ ಹುದ್ದೆಗೆ ಆಯ್ಕೆಯಾಗುವ ಸಂಪೂರ್ಣ ಅರ್ಹತೆ, ಸಾಮರ್ಥ್ಯ ಹೊಂದಿದ್ದರೂ ಆಕೆಯನ್ನು ಕಡೆಗಣಿಸಲಾಗಿದೆ. ಧೈರ್ಯ, ದಿಟ್ಟತನ, ನಿರ್ಭಿಡೆ, ಸ್ವಂತಿಕೆ ಇರುವ ಮಹಿಳೆಯರು ಯಾವುದೇ ಕ್ಷೇತ್ರದಲ್ಲಿದ್ದರೂ ಅವರ ಧ್ವನಿಯನ್ನು ಅಡಗಿಸಲಾಗುವುದು. ಅಂತಹ ಮಹಿಳೆಯರ ಸೇವೆ ಈ ವ್ಯವಸ್ಥೆಗೆ ಬೇಕಿಲ್ಲ. ನಿಷ್ಠೆ, ವಿನಮ್ರತೆ, ಆಜ್ಞಾನುವರ್ತಿಗಳು ಆಲಂಕಾರಿಕವಾಗಿದ್ದರೆ ವ್ಯವಸ್ಥೆ ಅವರನ್ನು ಸುಲಭವಾಗಿ ಒಪ್ಪಿಕೊಳ್ಳುತ್ತದೆ. ಪ್ರಥಮ ಮಹಿಳಾ ರಾಷ್ಟ್ರಾಧ್ಯಕ್ಷೆ ಹೀಗಾಗಲಾರರೆಂದು ಆಶಿಸಬಹುದೆ? ಯಾವ ಕಾರಣದಿಂದಲಾದರೂ ಅವಕಾಶ ಸಿಕ್ಕಿರಲಿ, ಒಂದು ಹೆಣ್ಣಾಗಿ ಅನಗತ್ಯ ವಿಧೇಯತೆ, ಕೃತಜ್ಞತೆಗಳ ಭಾರದಿಂದ ಅಸ್ಮಿತೆ ಕಳೆದುಕೊಳ್ಳದೆ ಸ್ತ್ರೀ ಸಮುದಾಯ ಹೆಮ್ಮೆ ಪಡುವಂತೆ ರಾಷ್ಟ್ರದ ಪ್ರಥಮ ಪ್ರಜೆ ವರ್ತಿಸಲಿ ಎಂಬುದು ನಮ್ಮ ಆಶಯ.

* * *

ಸ್ವಾತಂತ್ರ್ಯಾನಂತರ ಭಾರತದ ಸಂವಿಧಾನ ರಚಿಸುವ ಸಂದರ್ಭದಲ್ಲಿ 'ಭಾಷಾ ಉಪಸಮಿತಿ'ಯೊಂದನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ನಮ್ಮ ತೀ.ನಂ. ಶ್ರೀಕಂಠಯ್ಯನವರು ಸದಸ್ಯರಾಗಿದ್ದರು. ರಾಷ್ಟ್ರದ ಪ್ರಥಮ ಪ್ರಜೆಯನ್ನು 'ಪ್ರೆಸಿಡೆಂಟ್' ಎಂದುದರ ಹಿನ್ನೆಲೆಯಲ್ಲಿ ತೀ.ನಂ.ಶ್ರೀ. ಅವರು ಟಂಕಿಸಿದ ಪದ 'ರಾಷ್ಟ್ರಪತಿ'. ಆ ಕಾಲಕ್ಕೆ ಇದೊಂದು ಅಪರೂಪದ, ಸೊಗಸಾದ ಪದವಾಗಿ ಸ್ವೀಕೃತವಾಯಿತು. ಸಾಂವಿಧಾನಿಕ ಸಮ್ಮತಿಯೂ ದೊರೆತಿತು. ಮುಂದೆ ಎಂದಾದರೂ ಮಹಿಳೆಯೊಬ್ಬರು ಇಂಥ ಉನ್ನತ ಪದವಿಗೆ ಬರಬಹುದೆಂಬ ಕಲ್ಪನೆಯೂ ತೀ.ನಂ.ಶ್ರೀ. ಅಥವಾ ಸಮಿತಿಯ ಮತ್ತಾರಿಗೂ ಬಂದಿರಲಾರದು.

ಮುಖ್ಯವಾದ ಎಲ್ಲ ಕೆಲಸಗಳೂ ಗಂಡಸರೇ ನಿರ್ವಹಿಸುತ್ತಿದ್ದುದರಿಂದ ಈ ಪದನಿಮಿತ್ತ ನಾಮಗಳೂ ಅವರಿಂದಲೇ ಸೂಚಿತವಾದವು. ಅಂತೆಯೇ ಇವತ್ತಿಗೂ ಸಭಾಪತಿ ಮೊದಲಾದ ಪದಗಳೇ ಚಾಲ್ತಿಯಲ್ಲಿವೆ. ಆ ಸ್ಥಳಗಳಲ್ಲಿ ಮಹಿಳೆ ಅಧಿಕಾರ ಸ್ವೀಕಾರ ಮಾಡಿದಾಗ ಫಜೀತಿಗಿಟ್ಟುಕೊಳ್ಳುತ್ತದೆ. 'ರಾಷ್ಟ್ರಪತಿ' ಶಬ್ದವನ್ನು ಎಲ್ಲರೂ – ಮಹಿಳೆಯರೂ ಸೇರಿದಂತೆ – ಒಪ್ಪಿಕೊಂಡರು. ಈಗ 'ರಾಷ್ಟ್ರಸತಿ' ಎನ್ನಲಾದೀತೆ? ಅದೊಂದು ಅಪಭ್ರಂಶವಾಗಿಬಿಡಬಹುದು. ಸಂವಿಧಾನದ ಒಪ್ಪಿಗೆ ಪಡೆದ ಪದವಾದ್ದರಿಂದ ಮಾಧ್ಯಮಗಳಾದಿಯಾಗಿ ಎಲ್ಲರೂ ಮಹಿಳೆಯನ್ನು 'ರಾಷ್ಟ್ರಪತಿ' ಎಂದೇ ಹೇಳುತ್ತಿದ್ದಾರೆ.

'ಪತಿ' ಪದಕ್ಕೆ ಸೀಮಿತವಾದ ಅರ್ಥವಿಲ್ಲ. ಅದು ಒಡೆತನ, ಒಡೆಯ ಎಂಬ ಅರ್ಥವನ್ನು ಧರಿಸಬೇಕು. ಒಡೆತನ ಅವನದ್ದು, ಅವನೇ ಒಡೆಯ ಆದ್ದರಿಂದ ಒಡತಿಯೊಬ್ಬಳು ಒಡೆತನ ನಿರ್ವಹಿಸುವಾಗ ಏನೆಂದು ಹೇಳಬೇಕು? ಇನ್ನಾದರೂ ಹೊಸ ಸೂಕ್ತ ಶಬ್ದಗಳನ್ನು ಟಂಕಿಸಿ, ಬಳಕೆಗೆ ತರುವ ಪ್ರಯತ್ನಗಳಾಗಬೇಡವೆ? 'ರಾಷ್ಟ್ರಪತಿ' ಬದಲಿಗೆ ರಾಷ್ಟ್ರಾಧ್ಯಕ್ಷೆ ಎಂದರೆ ತಪ್ಪೇನಿಲ್ಲ. ಹಲವರು ಹೀಗೆ ಬಳಸಲಾರಂಭಿಸಿದ್ದಾರೆ.

ಯಾವುದೇ ಪದವನ್ನು ಜನತೆ ಒಪ್ಪಿ ಬಳಕೆಗೆ ತಂದರೆ ಯಾವ ನಿಯಮ–ಕಟ್ಟಳೆಗಳೂ ತಲೆಬಾಗಲೇಬೇಕು. ಜನತೆಯದೇ ನಿಜವಾದ ಒಡೆತನ, ಒಪ್ಪಿಗೆ. ಆದ್ದರಿಂದ 'ರಾಷ್ಟ್ರಾಧ್ಯಕ್ಷೆ' ಪದ ಬಳಕೆ ಸಂವಿಧಾನದಲ್ಲಿ ಇಲ್ಲವೆಂಬ ತಳ್ಳಂಕವಿಲ್ಲದೆ ಅದನ್ನೇ ಬಳಸಿದರೆ ಮುಂದೆ ಸಂವಿಧಾನವೂ ಅಂಥ ಪದಗಳಿಗೆ ಅನುಮೋದನೆ ನೀಡುತ್ತದೆ. ಅಂತಾಗಿಸುವುದು ಜನತೆ, ಮಾಧ್ಯಮಗಳ ಹೊಣೆ.

ಹೆಣ್ಣು–ಭಾಷೆ ಕುರಿತು ಪದೇಪದೇ ಚರ್ಚೆ, ಅಧ್ಯಯನಾದಿಗಳು ನಡೆಯುತ್ತಿವೆ. ಆದರೆ ಈ ಲಿಂಗಾದರಿತ ಸಮಾಜ ವ್ಯವಸ್ಥೆಯ ತರತಮಗಳ ಮಧ್ಯೆ ಹೊಸ ಶಬ್ದಗಳನ್ನು ಟಂಕಿಸಿ, ಇದೇ ಜಾರಿಗೆ ಬರಬೇಕೆಂದು ಅಧಿಕಾರಯುತವಾಗಿಯೇ ಹೇಳುವ ಅಗತ್ಯ ಈಗ ಹೆಚ್ಚಾಗಿದೆ. ನಾಳೆಗಳು ಮತ್ತೆಮತ್ತೆ ಇಂಥ ಸಮಸ್ಯೆಗಳಲ್ಲಿ ಸಿಲುಕಬಾರದು.

* * *

ಸ್ವಾತಂತ್ರ್ಯ ಬಂದ ೬೦ ವರ್ಷಗಳ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಸ್ಥಾನಮಾನ ಕುರಿತಂತೆ ವಿಶ್ಲೇಷಣಾತ್ಮಕ ಲೇಖನಗಳುಳ್ಳ ವಿಶೇಷ ಸಂಚಿಕೆಯನ್ನು 'ನಮ್ಮ ಮಾನಸ' ಆಯೋಜಿಸಿತು. ಅದರ ಫಲವಾಗಿ ನಿಮ್ಮ ಕೈಯಲ್ಲಿ ಈ ವಿಶೇಷಾಂಕ ಕುಳಿತಿದೆ. ತುಂಬ ಕಡಮೆ ಅವಧಿಯಲ್ಲಿಯಾದರೂ ಲೇಖನಗಳನ್ನು ಒದಗಿಸಿದ ಆತ್ಮೀಯ ಬರಹಗಾರ ಬಳಗಕ್ಕೆ ನಾವು ಕೃತಜ್ಞರು. ಲಿಂಗಭೇದವಿಲ್ಲದೆ ಆಯಾ ಕ್ಷೇತ್ರದ ತಜ್ಞರು, ಪ್ರಗತಿಪರ ಚಿಂತಕರನ್ನು ಸಂಪರ್ಕಿಸಿದೆವು. ಲೇಖನದ ಸ್ವರೂಪ ಹೇಗಿರಬೇಕೆಂಬುದನ್ನು ಲೇಖಕಿಯರು ಗ್ರಹಿಸಿದಷ್ಟು ಸುಲಭವಾಗಿ ಲೇಖಕರು ಗ್ರಹಿಸಲಿಲ್ಲ (ಒಂದೆರಡು ಅಪವಾದವನ್ನುಳಿದು). ಆದರೂ ಅವರುಗಳ ಮುಕ್ತ ಚಿಂತನೆಗಳು, ಆಸಕ್ತಿ–ಆಶಯಗಳು ನಮಗೆ ಮತ್ತಷ್ಟು ಕೆಲಸ ಮಾಡಲು ಬೆಂಬಲಿಸಿವೆ. ಈ ಸಂಚಿಕೆಯ ಪುಟಗಳನ್ನು ಹೆಚ್ಚಿಸಲು ಅಂಚೆ ಇಲಾಖೆಯ ಸಮ್ಮತಿ ಪಡೆದುಕೊಂಡರೂ ಪುಟಮಿತಿಗಳಿದ್ದವು. ಆ ಕಾರಣದಿಂದಾಗಿ ನಮಗೆ ಬಂದಿರುವ ಎಲ್ಲ ಲೇಖನಗಳನ್ನೂ ಈ ಸಂಚಿಕೆಯಲ್ಲಿ ಪ್ರಕಟಿಸಲು ಆಗಲಿಲ್ಲ. ಮುಂದಿನ ಸಂಚಿಕೆಯಲ್ಲಿ ಅವು ಪ್ರಕಟವಾಗುತ್ತವೆ. ಆ ಮಟ್ಟಿಗೆ ಬರುವ ಸಂಚಿಕೆಯೂ ವಿಶೇಷ ಸಂಚಿಕೆಯೇ ಅಂದುಕೊಳ್ಳಬಹುದು. ಸಂಚಿಕೆಯಲ್ಲಿ ಪ್ರಕಟಿಸಿರುವ ಲೇಖನಗಳ ಲೇಖಕರಿಗೆ ನಮ್ಮ ವಂದನೆಗಳು. ಮುಂಬರುವ ಸಂಚಿಕೆಯಲ್ಲಿ ಪ್ರಕಟವಾಗಲಿರುವ ಲೇಖನಗಳ ಕರ್ತೃಗಳಾದ ಚಿರಂಜೀವಿ ಸಿಂಗ್, ಕೆ. ಸತ್ಯನಾರಾಯಣ, ಆರ್. ಪೂರ್ಣಿಮಾ, ಸುಗ್ಗನಹಳ್ಳಿ ಷಡಕ್ಷರಿ, ಡಾ. ಗಿರಿಜಮ್ಮ ಮೊದಲಾದವರಿಗೂ ನಾವು ಕೃತಜ್ಞರಾಗಿದ್ದೇವೆ. ಪ್ರತಿ ತಿಂಗಳೂ ಪ್ರಕಟವಾಗುತ್ತಿದ್ದ ವೆಂ. ವನಜ ಅವರು ಅನುವಾದಿಸಿರುವ 'ಲಿಂಗತ್ವ ಎಂದರೇನು?' ಲೇಖನವೂ ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗುತ್ತದೆ. ಚಿತ್ರ ಕಲಾವಿದೆಯರಲ್ಲಿ ಸ್ತ್ರೀ ಸಂವೇದನೆಯ ಅಭಿವ್ಯಕ್ತಿ ಕುರಿತ ಲೇಖನಮಾಲೆಯೊಂದನ್ನು 'ನಮ್ಮ ಮಾನಸ'ಕ್ಕಾಗಿ ಪ್ರೊ. ಎಂ.ಎಚ್. ಕೃಷ್ಣಯ್ಯನವರು ಸಿದ್ಧಪಡಿಸುತ್ತಿದ್ದಾರೆ. ಮೊದಲ ಕಂತು ಈ ಸಂಚಿಕೆಯಲ್ಲಿದೆ.

ಈ ಸಂಚಿಕೆಯನ್ನು ಪ್ರಕಟಿಸಲು ಜಾಹಿರಾತು ನೀಡಿ ಸಹಕರಿಸಿದ ವಾರ್ತಾ ಇಲಾಖೆ, ಕೆ.ಪಿ.ಸಿ.ಎಲ್., ನಾಕುತಂತಿ ಧಾರಾವಾಹಿಯ ನಿರ್ಮಾಪಕರಿಗೆ ನಾವು ಆಭಾರಿಗಳಾಗಿದ್ದೇವೆ. ವಿವಿಧ ರೀತಿಯಲ್ಲಿ ಸಂಚಿಕೆ ಹೊರಬರಲು ನೆರವಾದ ಎಲ್ಲರಿಗೆ ನಮನಗಳಿರಲಿ.

ಈ ಸಂಚಿಕೆಯಲ್ಲಿ ಬಳಸಿರುವ ಕೆಲವು ಚಿತ್ರಗಳನ್ನು ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ರಚಿತವಾದ ನಿವೃತ್ತ ನ್ಯಾಯಮೂರ್ತಿ ಕೊ. ಚೆನ್ನಬಸಪ್ಪನವರ 'ಬೇಡಿ ಕಳಚಿತು; ದೇಶ ಒಡೆಯಿತು' ಕಾದಂಬರಿಯಿಂದ ಆಯ್ದಿದ್ದೇವೆ. ಕಲಾವಿದ ಪ.ಸ. ಕುಮಾರ್ ಅವರು ರಚಿಸಿದ ಈ ಚಿತ್ರಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿದ ನವಕರ್ನಾಟಕ ಪ್ರಕಾಶನ ಸಂಸ್ಥೆಗೆ ವಿಶೇಷವಾಗಿ ಕೃತಜ್ಞತೆ ಸಲ್ಲಿಸುತ್ತೇವೆ. ಲೇಖನಗಳ ಮೂಲಕ ಮತ್ತು ಚಂದಾದಾರರಾಗುವ, ಚಂದಾದಾರರನ್ನು ಮಾಡುವ ಮೂಲಕ, ಆರ್ಥಿಕ ನೆರವು ಒದಗಿಸುವ ಮೂಲಕ, ಮುಖ್ಯವಾಗಿ 'ನಮ್ಮ ಮಾನಸ'ವನ್ನು ಮೆಚ್ಚಿ 'ನಿಲ್ಲಿಸದೆ ಪ್ರಕಟಿಸಿರಿ, ನಾವು ನಿಮ್ಮ ಬೆನ್ನಿಗಿದ್ದೇವೆ' ಎಂದು ಹುರಿದುಂಬಿಸುತ್ತಿರುವ ಓದುಗ ಬಳಗದ ಸೌಜನ್ಯದಿಂದಾಗಿ ನಮ್ಮ ಹೃದಯ ತುಂಬಿ ಬಂದಿದೆ. ಈ ಭರವಸೆಯೇ ನಮ್ಮ ಬಂಡವಾಳ. ನಿಮ್ಮ ಪ್ರತಿಕ್ರಿಯೆಗೆ, ಸಲಹೆಗೆ 'ನಮ್ಮ ಮಾನಸ'ದ ಕದ ಸದಾ ತೆರೆದಿದೆ.

ನಮಸ್ಕಾರ

ಮಾನಸ ಬಳಗ



ಸ್ವಾತಂತ್ರ್ಯದ ಹಾಡುಗಳು

ನೀಲಾಂಜನ ಬಿಸ್ವಾಸ್

ಕಳೆದ ಒಂದು ವರುಷದಿಂದ ಪ್ರತಿವಾರದ ಒಂದು ಮಧ್ಯಾಹ್ನ ನೆರೆಯ ಶಾಲೆಯ ಮಕ್ಕಳೊಡನೆ ನಾನು ಹಾಡುತ್ತೇನೆ. ನಾವು ಒಂದು ತಂಡ ಕಟ್ಟಿಕೊಂಡಿದ್ದೇವೆ. ಹೋರಾಟ, ಕ್ರಾಂತಿ, ಪ್ರತಿಭಟನೆಯ ಹಾಡುಗಳು, ಮಕ್ಕಳಲ್ಲಿ ನಗೆ ಮೂಡಿಸುವಂತೆ ಮಾಡುವ ಬಂಧ ಹೊಂದಿರುವ ಅರ್ಥವಿರದ ಹಾಡುಗಳು, ಸುಗ್ಗಿ ಕಾಲದ ಸಂಭ್ರಮದ ಹಾಡುಗಳು, ಮಳೆ ಹುಣ್ಣಿಮೆ ಚಂದ್ರನ ಕುರಿತ ಹಾಡುಗಳು ಹೀಗೆ ಅನೇಕ ಹಾಡುಗಳನ್ನು ಹಾಡುತ್ತೇವೆ. ಈಗ ಆಗಸ್ಟ್ 15, 2007 ಹತ್ತಿರವಿದೆ. ದೇಶಭಕ್ತಿ ಗೀತೆಗಳನ್ನು ಹೇಳಿಕೊಡುವಂತೆ ಹಲವಾರು ಮಕ್ಕಳು ನನ್ನನ್ನು ಕೇಳುತ್ತಿದ್ದಾರೆ.

ನಮ್ಮ ಜೀವನದ ಪ್ರಯಾಣಗಳು ನಮ್ಮ ಭಾವನೆ, ತುಡಿತಗಳನ್ನು ರೂಪಿಸುತ್ತವೆ. ಈಗ ಕಲಿಸುತ್ತಿರುವ ಮಕ್ಕಳಷ್ಟು ನಾನು ಚಿಕ್ಕವಳಿರುವಾಗ ಹಾರುವ ಬಾವುಟ ಅಥವಾ 'ಸಾರೆ ಜಹಾನ್ ಸೆ ಅಚ್ಚಾ'ದ ಪದಗಳು ಭಾವನಾತ್ಮಕವಾಗಿ ಹೆಮ್ಮೆಯಿಂದ ಹಾಗೂ ಒಂದು ತೀರ್ಮಾನದಿಂದ ನನ್ನನ್ನು ನಡುಗುವಂತೆ ಮಾಡುತ್ತಿದ್ದವು. ಅವುಗಳೇ ಇಂದು ನನ್ನನ್ನು ಹುಚ್ಚಳನ್ನಾಗಿಸುತ್ತಿವೆ. ಏಕೆಂದರೆ ಆಗಸ್ಟ್ 15, 2007ರಂದು ಅನೇಕ ಸ್ಥಳಗಳಲ್ಲಿ - ರಾಜ್ಯಗಳೆನ್ನುವ ಆದರೆ ಬಹುಮಂದಿ ಭಾರತೀಯರು ಭೂಪಟದಲ್ಲಿ ಭರವಸೆಯಿಂದ ಗುರುತಿಸಲಾಗದ ಸ್ಥಳಗಳಾದ ಶ್ರೀನಗರ, ಇಟಿನ್ ನಗರ, ಇಂಫಾಲ, ಕೊಹಿಮ, ಎಜಾವಲ್‌ಗಳಲ್ಲಿ ಸೈನಿಕರ ಬೆಟಾಲಿಯನ್‌ಗಳಿಂದ ರಕ್ಷಿಸಲ್ಪಟ್ಟ ಸೈನ್ಯಾಧಿಕಾರಿಗಳು ಭಾರತದ ಬಾವುಟವನ್ನು ಖಾಲಿತಾಣದ ಸಂತೆಯ ಚೌಕದಲ್ಲಿ ಹಾರಿಸುತ್ತಾರೆ. ಆದರೆ ಸುತ್ತಮುತ್ತಲ ಹಳ್ಳಿ-ಪಟ್ಟಣದ ಬೀದಿಗಳಲ್ಲಿ ಸಾಮಾನ್ಯ ಜನರು ಆ ಮೂರು ಬಣ್ಣಗಳನ್ನು ಸುಡುತ್ತಾರೆ, ಅದರ ಮೇಲೆ ಉಗುಳುತ್ತಾರೆ, ಭಾರತದ ಯುದ್ಧದಲ್ಲಿ ಕಳೆದುಕೊಂಡ ತಮ್ಮ ಹೆಣ್ಣು ಹಾಗೂ ಗಂಡುಮಕ್ಕಳಿಗಾಗಿ ಶೋಕಿಸುತ್ತಾರೆ.

ನಮ್ಮ ಮಕ್ಕಳಿಗೆ ಇದೆಲ್ಲ ನಾವು ಹೇಗೆ ಹೇಳೋಣ? ಟೆಲಿವಿಷನ್ ವಾಹಿನಿಗಳು ಭಾರತವನ್ನು ಆರ್ಥಿಕವಾಗಿ 'ಸೂಪರ್ ಪವರ್' ಎಂದು ವಿಜೃಂಭಿಸುತ್ತಿವೆ. ಸುಂದರ ಹುಡುಗ-ಹುಡುಗಿಯರು ಎಂ.ಟಿ.ವಿ.ಯಲ್ಲಿ 'I Love India' ಎಂದು ಹಾಡುತ್ತಾರೆ. ಮುಜುಗರವೆನಿಸುವ ಈ ಸತ್ಯಗಳ ಬಗ್ಗೆ ಅವರಿಗೇನನ್ನಿಸುತ್ತದೆ? ಹಾಗಾಗಿ ಮೆಕ್‌ದೂಮ್ ಮೊಹಿದ್ದೀನ್‌ರ ಹಾಡೊಂದನ್ನು ಅವರಿಗಾಗಿ ಹಾಡಲು ನಾನು ಇಚ್ಛಿಸುತ್ತೇನೆ.

ಇದು ಹೋರಾಟ, ಹಾರುವ ಬಾವುಟದ
ಕೆಳಗೆ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ
ಹಿಂದ್ ಜನರ, ಶೋಷಿತರ, ಬಂಧಿತರ
ಸ್ವತಂತ್ರವಾಗಿ ಕುಡಿದವರ, ಶ್ರಮಿಕರ, ಕಾರ್ಮಿಕರ
ಬೆವರ ಹರಿಸುವವರ - ಹೋರಾಟ - ಸ್ವಾತಂತ್ರ್ಯದ ಹೋರಾಟ.

ನಾನು ಹಾಡು ಕಲಿಸುತ್ತಿರುವ ಮಕ್ಕಳಿಗೆ ಶ್ರಮಿಕವರ್ಗದ ಬಗ್ಗೆ, ದುಡಿತದ ಬಗ್ಗೆ ಅಥವಾ ನಿಜವಾದ ಸ್ವಾತಂತ್ರ್ಯದ ಬಗ್ಗೆ ಹೆಚ್ಚು ತಿಳಿದಿಲ್ಲ, ಸ್ವಾತಂತ್ರ್ಯದ ದಿನವೆಂದರೆ ರೆಡ್‌ಫೋರ್ಟ್‌ನಲ್ಲಿ ಬಾವುಟ ಹಾರಿಸುವುದು, ಪಾರಿವಾಳಗಳನ್ನು ಹಾರಿಬಿಡುವುದು, ಬಲೂನ್‌ಗಳನ್ನು ಊದುವುದು ಇತ್ಯಾದಿ. ಟಿ.ವಿ.ಯ ಸುದ್ದಿವಾಹಿನಿಗಳು ಭಾರತ ಸ್ವತಂತ್ರವಾಗಿದೆಯೇ ಎಂದರೆ ನೀವು ಹೌದು/ಇಲ್ಲ ಎಂದು ಎಸ್.ಎಂ.ಎಸ್. ಕಳಿಸುವುದು– ಬಹುಶಃ ವಿಶ್ವ ಬ್ಯಾಂಕಿನಿಂದ ಬಂದಿರಬಹುದಾದ - ಕೆಂಪು ಬಟ್ಟೆ ಸುತ್ತಲಾದ ಅಂತಿಮ ಭಾಷಣದ ಪ್ರತಿಯನ್ನು ಪ್ರಧಾನಮಂತ್ರಿಗಳು 45 ನಿಮಿಷದ ದೀರ್ಘಕಾಲ ಓದುವುದು, ಛೇಂಬರ್ ಆಫ್ ಕಾಮರ್ಸ್ ಭಾರತದ ಬೆಳವಣಿಗೆಯ ಬಗ್ಗೆ ಹೊಳಪಿನ ಹೇಳಿಕೆ ನೀಡುವುದು, ಸಾಫ್ಟ್‌ವೇರ್ ಇಂಜಿನಿಯರ್ಸ್ ತಮ್ಮ ಕೆಲಸದಿಂದ ಹಿಂತಿರುಗುವಾಗ ಅಂಟಿಕೊಳ್ಳುವ ಬೀದಿಮಕ್ಕಳಿಂದ ಪ್ಲಾಸ್ಟಿಕ್‌ನ ಮೂರು ಬಣ್ಣದ ಬಾವುಟಗಳನ್ನು ಗಾಳಿ ತಡೆಗಾಗಿ, ಕಂಪ್ಯೂಟರ್ ಟರ್ಮಿನಲ್ಸ್‌ಗಾಗಿ ತೆಗೆದುಕೊಳ್ಳುವುದು, ದೊಡ್ಡದೊಡ್ಡ ಶಾಪಿಂಗ್ ಮಾಲ್‌ಗಳು ಸ್ವಾತಂತ್ರ್ಯದ ದಿನದ ಮಾರಾಟ ಎಂದು ಪ್ರಚಾರ ಮಾಡುವುದು - ಇವು ಸ್ವಾತಂತ್ರ್ಯೋತ್ಸವದ ದಿನದ ಅರ್ಥವಾಗಿದೆ.

ಈ ವರ್ಷದ ಸ್ವಾತಂತ್ರ್ಯದ ದಿನ ಕೂಡಾ ವಾಲ್‌ಮಾರ್ಟ್, ರಿಲಯನ್ಸ್ ಜೊತೆಗೂಡಿ ದೇಶದಲ್ಲಿ ಒಂದು ಮಾರಾಟ ಮಳಿಗೆ ಇಡುತ್ತಾರೆ. ಆಗಸ್ಟ್ 14ರ ಮಧ್ಯರಾತ್ರಿ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಇಳಿಸಿ ಪ್ರಪಂಚದಲ್ಲಿ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಹುಟ್ಟಿದ ದಿನ. 60 ವರ್ಷದ ಅನಂತರ ಸಾಮ್ರಾಜ್ಯಶಾಹಿಯ ಹೊಸ ಮುಖಗಳು ಉದಯವಾಗಿವೆ. ಕಾರ್ಪೊರೇಟ್ ಜಾಗತೀಕರಣವು ಚಿಲ್ಲರೆ ವ್ಯಾಪಾರ ವಲಯದಲ್ಲಿ ದೊಡ್ಡಹೆಜ್ಜೆ ಇಡುವ ಮೂಲಕ ಈಗಾಗಲೇ ಜಾಗತೀಕರಣದ ಹೊಡೆತದಿಂದ ಉಂಟಾಗಿರುವ ಅಶಾಂತಿ ಹಾಗು ಅಭದ್ರತೆಯನ್ನು ಹೆಚ್ಚು ಮಾಡುತ್ತಿದೆ.

ಬಹುರಾಷ್ಟ್ರೀಯ ಕಂಪನಿಗಳಲ್ಲಿ ಅಗಾಧವಾದ ಲಾಭವನ್ನು ಪಡೆಯುವುದಕ್ಕೋಸ್ಕರ ಹಣದ ಹೂಡುವಿಕೆಯಲ್ಲಿ ರಾಚನಿಕ ಬದಲಾವಣೆಗಳಾಗುತ್ತಿರುವುದರಿಂದ ಜಾಗತೀಕರಣ ನಮ್ಮ ರಾಜಕೀಯದ ಚಿತ್ರಣಗಳನ್ನು ಬದಲುಗೊಳಿಸುತ್ತಿದೆ. ಮೊದಲ ಆದ್ಯತೆಯ ವಿಚಾರವಾಗಿರುವುದು ಬಹುರಾಷ್ಟ್ರೀಯ ಕಂಪನಿಗಳಿಗೆ ಯಾವುದೇ ನಿಯಂತ್ರಣಗಳಿಲ್ಲದಿರುವುದು. ಬಹುರಾಷ್ಟ್ರೀಯ ಕಂಪನಿಗಳು ಇವುಗಳನ್ನು 'ಶಾಟ್ಸ್' ಎಂದು ಕರೆಯುತ್ತಾರೆ. ಲಾಭ ಗಳಿಕೆಗೆ ಇರುವ ಕಾನೂನಿನ ಅಡ್ಡಿಗಳನ್ನು ತೆಗೆದುಬಿಡುವುದು. ಆಗ ಉಳಿಯುವುದೆಂದರೆ ಕಾನೂನುಬದ್ಧವಾದ ಲೂಟಿ ಮತ್ತು ದೋಚುವಿಕೆ. 1986ರ ಪರಿಸರ ರಕ್ಷಣೆಯ ಕಾನೂನು ಇಂದು ದ್ರವೀಕರಣಗೊಂಡಿರುವ ಹಿನ್ನೆಲೆಯಲ್ಲಿ ತಕ್ಷಣವೇ ಮುಗಿಸಬೇಕಾದ ಯೋಜನೆಗಳ ಒಪ್ಪಿಗೆಗಾಗಿ ಪರಿಸರದ ಮೇಲಿನ ಅಡ್ಡಪರಿಣಾಮಗಳ ಮೌಲ್ಯೀಕರಣವೇ ಬದಲಾಗುತ್ತಿದೆ. SEZ ಕಾನೂನು ದೊಡ್ಡ ಭೂಸ್ವಾಧೀನಕ್ಕೆ, ರಫ್ತು ಹೆಚ್ಚಿಸುವವರಿಗೆ, ಆದಾಯ ತೆರಿಗೆ ವಿನಾಯತಿ

ರಜೆಗಳನ್ನು ಕೊಡಮಾಡುತ್ತಿದೆ. ಇಂದು ಈಗಾಗಲೇ ಶೋಷಣೆಗೆ ಒಳಗಾಗಿರುವ ಸಮುದ್ರತೀರದಲ್ಲಿ ವಾಣಿಜ್ಯೋದ್ಯಮವನ್ನು ಬಲ ಪಡಿಸುವುದಕ್ಕೋಸ್ಕರ ಹೊಸ ಕಾನೂನುಗಳನ್ನು ತರುವ ಹುನ್ನಾರ ನಡೆಯುತ್ತಿದೆ. ಇವುಗಳೆಲ್ಲ ಕಾರ್ಪೊರೇಟ್ ದೋಚುವಿಕೆಗೆ ದಾರಿಗಳನ್ನು ಸುಲಭ ಮಾಡುವತ್ತ ಆಗುತ್ತಿರುವ ಹಣ ಹೂಡುವಿಕೆಯ ಉದಾಹರಣೆಗಳು. ಸಾಮ್ರಾಜ್ಯಶಾಹಿಯ ಎರಡನೆಯ ಅಲೆ ಇದಾಗಿದೆ.

ಇವಕ್ಕೆಲ್ಲ ಬೆಲೆ ತೆರುವವರಾರು ? ಎರಡನೆಯ ಕಾರು, ಮೆಕ್ ಡೊನಾಲ್ಡ್‌ನಲ್ಲಿ ಊಟ, ವಾರದ ಅಂತ್ಯದ ಸಂತೋಷಗಳಿಗೆ, ಏರೋಸ್ಮಿತ್ ಕನ್ಸರ್ಟ್‌ಗಳಿಗೆ, ಯೋಗ, ಧ್ಯಾನದ ತರಗತಿಗಳಿಗೆ, ಜಿಮ್ ತರಬೇತಿಗೆ ಇವುಗಳಿಗೆಲ್ಲ ವಿನಾಯತಿ ದರ ದೊರಕುವುದು ಯಾರಿಂದಲೋ?

ಸ್ವಾತಂತ್ರ್ಯ ಸಿಕ್ಕಂದಿನಿಂದಲೂ ನಮಗೆ ಹೇಳುತ್ತಿರುವುದು ಏನೆಂದರೆ ಅಣೆಕಟ್ಟುಗಳಿಗೋಸ್ಕರ, ಗಣಿ, ಹೆದ್ದಾರಿ, ಪವರ್ ಪ್ಲ್ಯಾಂಟ್, ಪಕ್ಷಿಧಾಮಗಳು, ರಾಷ್ಟ್ರೀಯ ಉದ್ಯಾನಗಳಿಗೋಸ್ಕರ ಒಂದು ಲೆಕ್ಕಾಚಾರದ ಪ್ರಕಾರ 30 ಮಿಲಿಯನ್ ಆದಿವಾಸಿಗಳನ್ನು ಸ್ಥಳಾಂತರಗೊಳಿಸಲಾಗುತ್ತಿದೆ. ಅಂದರೆ 1440 ಆದಿವಾಸಿಗಳು ಪ್ರತಿನಿತ್ಯ ಸ್ಥಳಾಂತರಗೊಳ್ಳುತ್ತಿದ್ದಾರೆ. ಹೊಸದಾಗಿ ಭೂಸ್ವಾಧೀನವಾದಾಗ ಈ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ.

'ಮಾನವೀಯತೆ ಮುಖ ಹೊಂದಿರುವ ಸುಧಾರಣೆಗಳ' ಪ್ರತಿಫಲವಾಗಿ ಸುದ್ದಿಪತ್ರಿಕೆಗಳಲ್ಲಿ 4 ತಿಂಗಳ ಅಂತರದಲ್ಲಿ 1000 ರೈತರ ಆತ್ಮಹತ್ಯೆ ವರದಿಯಾಗಿದೆ. ಈ ಸ್ವಾತಂತ್ರ್ಯದ ದಿನ ಕೂಡಾ ದೇಶದೆಲ್ಲೆಡೆ ಸಾಲ ತೀರಿಸಲಾರದೆ, ಬೆಳೆ ನಾಶ, ನೀರಿನ ಬವಣೆಯಿಂದ, ಜೈವಿಕ ತಂತ್ರಜ್ಞಾನದ ಬೆಳೆಯಿಂದಾಗಿ ರೈತರು ತಮ್ಮ ಬದುಕುಗಳನ್ನು ಕೊನೆಗಾಣಿಸುವ ಮೂಲಕ ಬಿಡುಗಡೆ ಹೊಂದುತ್ತಾರೆ ಎಂದು ನಾವು ಭಾವಿಸಬಹುದಾಗಿದೆ. ಸ್ಥಳೀಯ ಪತ್ರಿಕೆಗಳು ಆ ಸಾಲದ ಹೊಣೆಗಾರರಾದ ಅವರ ಹೆಂಡತಿಯರು-ಭಾವನಾರಹಿತರಾಗಿ-ಮಕ್ಕಳಿಂದ ಸುತ್ತುವರೆದು ಗುಡಿಸಲಿನ ಪಕ್ಕ ನಿಂತಿರುವ ಚಿತ್ರಗಳನ್ನು ಪ್ರಕಟಿಸುತ್ತಿವೆ.

ಯಾವ ಸ್ವಾತಂತ್ರ್ಯವನ್ನು ಕುರಿತು ನಾವು ಹಾಡಬೇಕಿದೆ? ರೈತರ ಸಾವಿನ ಸ್ವಾತಂತ್ರ್ಯದ ಹಾಡು? ಇಡಿಯ ಕುಟುಂಬಕ್ಕೆ ಆಹಾರ ಒದಗಿಸುವದಕ್ಕೋಸ್ಕರ ಮಗ ಅಥವಾ ಮಗಳನ್ನು ಮಾರುವ ಸ್ವಾತಂತ್ರ್ಯದ ಹಾಡು? ಕೆಲಸವಿಲ್ಲದ್ದಕ್ಕಾಗಿ ರಕ್ತದಾನ ಅಥವಾ ಕಿಡ್ನಿ ಮಾರುವ ಸ್ವಾತಂತ್ರ್ಯದ ಹಾಡು? ಹಸಿವಿನಿಂದ ಬಳಲಲಾರದೇ ಕನಿಷ್ಠ ವೇತನಕ್ಕೂ ಕಡಿಮೆ ವೇತನಕ್ಕೂ ದುಡಿಯುವ ಸ್ವಾತಂತ್ರ್ಯದ ಹಾಡು? ಹಸಿವೆಯನ್ನು ಒಂದು ಶೋಚನೀಯ ಸ್ಥಿತಿ ಎಂದೋ, ಬದುಕಿನ ರೀತಿಯೆಂದೋ ಅಪ್ಪಿಕೊಳ್ಳುವ ಸ್ವಾತಂತ್ರ್ಯದ ಹಾಡು?

'ಸ್ವಾತಂತ್ರ್ಯವು ಕಳೆದುಕೊಳ್ಳುವುದಕ್ಕೆ ಏನೂ ಇಲ್ಲದಿರುವುದಕ್ಕೆ ಇರುವ ಇನ್ನೊಂದು ಪದ ಮಾತ್ರ' ಎಂದು ಅಮೆರಿಕಾದ ರಾಕ್ ಹಾಡುಗಾರ ಹಾಗೂ ಹಾಡು ರಚನಾಕಾರ ಜಾನಿಸ್ ಜಾಪ್‌ಲಿನ್ ಹಾಡುತ್ತಾನೆ. ಕಳೆದುಕೊಳ್ಳುವುದಕ್ಕೆ ಏನೇನೂ ಇಲ್ಲದ ಶೋಷಿತರನ್ನು ನಾವು ಸ್ವತಂತ್ರರು ಎಂದು ಕರೆಯೋಣವೇ? ಹಸಿವಿನಿಂದಿರುವ ರೈತ, ಹೊಡೆತದಿಂದ ನಲುಗಿರುವ ಹೆಂಗಸು, ಯಾವ ಹಾಡು ಹಾಡುತ್ತಾರೆ? ಅತ್ಯಾಚಾರಕ್ಕೊಳಗಾದ ಹೆಣ್ಣು ಯಾವ ಹಾಡು ಹಾಡುತ್ತಾಳೆ? ಯಾರ ಕಣ್ಣುಗಳು ಬಂಧಿತ ಕೊಠಡಿಯಲ್ಲಿ ಬಿಳಿಯ ಗೋಡೆಯನ್ನು ಬಿಟ್ಟು ಬೇರೆ ಏನನ್ನೂ ನೋಡಿರುವುದಿಲ್ಲವೋ ಅವರು ಸ್ವಚ್ಛ ನೀಲಿ ಆಕಾಶದ ಬಗ್ಗೆ ಯಾವಾಗಲಾದರೂ ಹಾಡಬಲ್ಲರೇ? ಹೊವರ್ಡ್ ಫಾಸ್ಟ್ ಸ್ಪಾರ್ಟಕಸ್‌ನಲ್ಲಿ ಹೇಳುತ್ತಾನೆ : "ನೀವು ಮನುಷ್ಯರನ್ನು ಮೃಗಗಳನ್ನಾಗಿಸುತ್ತೀರಿ - ಹಾಗಾಗಿ ಅವರು ದೇವತೆಯ ತರಹ ಯೋಚನೆ ಮಾಡಲಾಗುವುದಿಲ್ಲ".

ಆರ್ಥಿಕ ಜಾಗತೀಕರಣದಲ್ಲಿ ಉಂಟಾದ ಸಾಮೂಹಿಕ ಶೋಷಿತ ಅನುಭವಕ್ಕೆ ಪ್ರತಿಕ್ರಿಯೆಯಾಗಿ ಇಂದು ಜಾಗತಿಕ ಮಟ್ಟದಲ್ಲಿ ಕೋಮುವಾದ ಬೆಳೆಯುತ್ತಿದೆ. ಬುಷ್ ಹಾಗೂ ಬಿನ್‌ಲ್ಯಾಡನ್ ಇಬ್ಬರೂ ಒಬ್ಬರನ್ನೊಬ್ಬರು ಅಮರವಾಗಿ ಅಪ್ಪಿಕೊಂಡಿದ್ದಾರೆ. ಹೀಗಾಗಿ ಇದು ಮಹಿಳೆಯರ ಮೇಲೆ ವಿಪರೀತವಾದ ಅಡ್ಡಪರಿಣಾಮಗಳನ್ನು ಉಂಟು ಮಾಡಿದೆ.

ಒಂದು ಕಡೆ ಸರ್ಕಾರ ಸಾರ್ವಜನಿಕ ವೆಚ್ಚಗಳನ್ನು ಕಡಿತಗೊಳಿಸಿ ಅಗತ್ಯ ಸೇವೆಗಳನ್ನು ಖಾಸಗೀಕರಣಗೊಳಿಸುತ್ತಿದ್ದಂತೆಯೇ, ಮಹಿಳೆಯರು ಬಡತನದ ವಿರುದ್ಧ ಹೋರಾಡಲು ಹೆಚ್ಚುಹೆಚ್ಚು ಕಷ್ಟಪಟ್ಟು ದುಡಿಯುವ ಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ. ಜಾಗತಿಕ ಆರ್ಥಿಕ ಬೇಡಿಕೆಯನ್ನು ಪೂರೈಸಲು ಅಗ್ಗದ ಹಾಗೂ ಹೇಗೆಂದರೆ ಹಾಗೆ ಬಳಸಿಕೊಳ್ಳಬಹುದಾದ ರೀತಿಯ ಕೆಲಸಗಳನ್ನು ಮಾಡುತ್ತಿರುವ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದೆ. ಬೆಂಗಳೂರಿನ ಉಡುಪು ಕಾರ್ಖಾನೆಯಲ್ಲಿ ಬೆಳೆಯುತ್ತಿರುವ ಮಹಿಳೆಯರ ಸಂಖ್ಯೆಯೇ ಇದಕ್ಕೆ ಉದಾಹರಣೆಯಾಗಿದೆ. ಅಲ್ಲಿ ಮಹಿಳೆಯರು ದುಡಿಯುತ್ತಿರುವ ಪರಿಸ್ಥಿತಿ ಶೋಚನೀಯವಾಗಿದೆ. ಲೈಂಗಿಕ ಕಿರುಕುಳ, ಜೋಡಿಸುವ ಕೆಲಸದ ಟಾರ್ಗೆಟ್, ಕನಿಷ್ಠ ವೇತನಕ್ಕಿಂತ ಕಡಿಮೆ ಸಂಬಳ, ಲಾಭವಿಲ್ಲದ, ಭದ್ರತೆಯಿಲ್ಲದ ಕೆಲಸ ಮಾಡುತ್ತಿದ್ದಾರೆ. ಇನ್ನೊಂದೆಡೆ ಬೆಳೆಯುತ್ತಿರುವ ಕೋಮುವಾದ ಹೆಂಗಸರ ಸಾಂಪ್ರದಾಯಿಕ ಪಾತ್ರದ ನಿರೀಕ್ಷೆಯನ್ನು ಹೆಚ್ಚಿಸುತ್ತಿದೆ. ಕ್ರಿಯಾಹೀನ ತಾಯಿತ್ವ ಹಾಗೂ ಮನೆ ಜವಾಬ್ದಾರಿಯ ನಿರೀಕ್ಷೆಗಳು ಹೆಚ್ಚಾಗಿವೆ. ಈ ರೀತಿಯ ಘರ್ಷಣಾತ್ಮಕ ನಿರೀಕ್ಷೆ - ಪಾತ್ರಗಳಿಂದಾಗಿ ಮಹಿಳೆಯರು ಬೆಳೆಯುತ್ತಿರುವ ಹಿಂಸೆಯ ವರ್ತುಲದಲ್ಲಿ ಸಿಕ್ಕಿ ನರಳುವಂತಾಗಿದೆ.

ಅಂಕಿ ಅಂಶಗಳನ್ನು ಲೆಕ್ಕಕ್ಕೆ ತೆಗದುಕೊಂಡರೆ 96% ಮಹಿಳಾ ಕಾರ್ಮಿಕರು ಅಸಂಘಟಿತ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾರೆ. ಕೆಳದರ್ಜೆಯ ಕೌಶಲಗಳು, ಕಡಿಮೆ ಸಂಬಳ, ಕಡಿಮೆ ಭದ್ರತೆಯ ಕೆಲಸಗಳಲ್ಲಿ ಇವರು ಕೆಲಸ ಮಾಡುತ್ತಾರೆ. ಭಾರತದ 4 ಜನರಲ್ಲಿ ಒಬ್ಬರಾದ ದಲಿತ ಮಹಿಳೆಯರು ಭೂಹೀನರಾಗಿರುತ್ತಾರೆ. ಜಾತಿ ಆಧಾರಿತ ಹಾಗೂ ಲೈಂಗಿಕ ಶೋಷಣೆಯ ಹಿಂಸೆಗೆ ಇವರು ಒಳಗಾಗುತ್ತಿರುವುದು ದಿನನಿತ್ಯದ ಮಾತಾಗಿದೆ. ಪ್ರತಿ 26 ನಿಮಿಷಕ್ಕೆ ಒಬ್ಬ ಹೆಂಗಸು ಲೈಂಗಿಕ ಕಿರುಕುಳ ಅನುಭವಿಸುತ್ತಾಳೆ, ಪ್ರತಿ 54 ನಿಮಿಷಕ್ಕೆ ಒಬ್ಬ ಹೆಂಗಸು ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ಪ್ರತಿ 102ಕ್ಕೆ ಒಬ್ಬ ಹೆಂಗಸನ್ನು ವರದಕ್ಷಿಣೆಗಾಗಿ ಸಾಯಿಸಲಾಗುತ್ತಿದೆ. ದೇಶದ 70% ವಿವಾಹಿತ ಮಹಿಳೆಯರು ಮನೆಯಲ್ಲಿ ಹಿಂಸೆಯ ಭಯ ಎದುರಿಸುತ್ತಿರುತ್ತಾರೆ. ಈ ರೀತಿಯ ಚಿತ್ರಣಗಳು ಆರ್ಥಿಕ ಜಾಗತೀಕರಣದ ಹಿನ್ನೆಲೆಯಲ್ಲಿ ಹಾಗೂ ಇದಕ್ಕೆ ವಿರೋಧವಾಗಿ ಹುಟ್ಟಿಸುತ್ತಿರುವ ಕೋಮುವಾದದ ಹಿನ್ನೆಲೆಯಲ್ಲಿ ಇನ್ನೂ ಹೆಚ್ಚು ಪ್ರಬಲವಾಗುತ್ತಾ ಹೋಗುತ್ತಿವೆ.

ಆದರೆ ಮನುಷ್ಯ ಕುಲದ ಅದ್ಭುತವೆಂದರೆ ಮನುಷ್ಯನ ಇಂತಹ ಶೋಚನೀಯ ಸ್ಥಿತಿಯಲ್ಲಿಯೇ ಸ್ವಾತಂತ್ರ್ಯದ ನೋವಿನ ಹಾಡುಗಳು ಹುಟ್ಟಿಕೊಂಡಿವೆ. ಎಲ್ಲಿ ಜನಸಮುದಾಯ ಸಾಮೂಹಿಕ ಶೋಷಣೆ ಅನುಭವಿಸಿದೆಯೋ ಅಲ್ಲಿ ಸಾಮೂಹಿಕವಾಗಿ ಸ್ವಾತಂತ್ರ್ಯದ ಬಗ್ಗೆ ಹಾಡಿದ್ದಾರೆ.

(34ನೇ ಪುಟ ನೋಡಿ)

ಸ್ವಾತಂತ್ರ್ಯ ಸಂಗ್ರಾಮ : ಕರ್ನಾಟಕದಲ್ಲಿ ಮಹಿಳೆಯರ ಪಾತ್ರ

ಎಚ್.ಎಸ್. ದೊರೆಸ್ವಾಮಿ

ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಪಾತ್ರ ಅಮೋಘವಾದದ್ದು. ಮಹಿಳೆಯರ ಪಾತ್ರ ಕೂಡ ಅಷ್ಟೇ ಗಮನಾರ್ಹವಾದದ್ದು.

ಮೈಸೂರು ಕಾಂಗ್ರೆಸ್ ಸ್ಥಾಪನೆಯಾದದ್ದು 1938ರಲ್ಲಿ, ಶಿವಪುರದಲ್ಲಿ. ಅದಕ್ಕೆಷ್ಟೋ ಮೊದಲು 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೂ ಮೊದಲು ಕಿತ್ತೂರು ರಾಣಿ ಚೆನ್ನಮ್ಮ, ಬಿದನೂರಿನ ರಾಣಿ ಹಾಗೂ ರಾಣಿ ಅಬ್ಬಕ್ಕ ಇಂಗ್ಲಿಷ್‌ರ ವಿರುದ್ಧ ಸಂಗ್ರಾಮ ನಡೆಸಿದ್ದರು.


1932ರಲ್ಲಿ ಅಂಕೋಲೆಯಲ್ಲಿ ಉಪ್ಪಿನ ಸತ್ಯಾಗ್ರಹ ಅಖಂಡವಾಗಿ 45 ದಿನ ನಡೆದ ಮೇಲೆ ಕ್ರಮೇಣ ಅದನ್ನೂ ಬಂದುಮಾಡಿ ಅಸಹಕಾರ ಚಳವಳಿಯನ್ನು ಕೈಗೆತ್ತಿಕೊಳ್ಳಲಾಯಿತು. ಇದರ ಅಂಗವಾಗಿ ಅರಣ್ಯ ಸತ್ಯಾಗ್ರಹ, ಕರನಿರಾಕರಣ ಚಳವಳಿ, ಹೆಂಡದಂಗಡಿಗಳ ಪಿಕೆಟಿಂಗ್ ಮುಂತಾದ ಕಾರ್ಯಕ್ರಮಗಳನ್ನು ಒಳಗೊಂಡ ಆಂದೋಲನವನ್ನು ಮುಂದುವರೆಸಲು 1930ನೇ ಮೇ 17ನೇ ತಾರೀಖು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ತೀರ್ಮಾನ ಕೈಗೊಂಡಿತು.

ಸರ್ದಾರ್ ಕೆ.ಎ. ವೆಂಕಟರಾಮಯ್ಯನವರನ್ನು ಈ ಎಲ್ಲ ಸತ್ಯಾಗ್ರಹಗಳ ಮೇಲ್ವಿಚಾರಕರನ್ನಾಗಿ ನೇಮಿಸಲಾಯಿತು.

ಕೆ.ಎ. ವೆಂಕಟರಾಮಯ್ಯನವರು ಪತ್ನಿ ಗೌರಮ್ಮನವರೊಡನೆ ಸಿರ್ಸಿಗೆ ಬಂದು ಕಾರ್ಯಕ್ರಮ ಯೋಜನೆ ತಯಾರಿಸಲು ಸನ್ನದ್ಧರಾದರು. ಈ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಮೈಸೂರಿನ ಎಂ.ಎನ್. ಜೋಯಿಸ್ ಮತ್ತು ಅವರ ಪತ್ನಿ ಸುಬ್ಬಮ್ಮ, ಚೆಂಗಲಾರಾಧ್ಯ ದಂಪತಿಗಳು ಬಂದಿಳಿದರು.

ಕಂದಾಯ ಕೊಡಲು ನಿರಾಕರಿಸಿದ ರೈತರ ಮನೆಗಳಿಗೆ ಅಧಿಕಾರಿಗಳು ನುಗ್ಗಿ ಪಾತ್ರೆ ಪದಾರ್ಥಗಳನ್ನೂ, ಎಮ್ಮೆ ಹಸುಗಳನ್ನೂ ಜಫ್ತುಮಾಡಿ ಹರಾಜು ಮಾಡಲು ಆರಂಭಿಸಿದರು. ಗ್ರಾಮಗಳ ಜನರಲ್ಲಿ ಒಗ್ಗಟ್ಟಾಗಿ ಯಾರೂ ಲಿಲಾವುಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಹಾಗೂ ಯಾರಾದರೂ ಭಾಗವಹಿಸಿದ್ದು ಪದಾರ್ಥಗಳನ್ನು ಕೊಂಡಿದ್ದಲ್ಲಿ ಅವರ ಮನೆಗಳ ಮುಂದೆ ಹೆಣ್ಣುಮಕ್ಕಳು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರು. ಈ ಮಹಿಳಾ ಸತ್ಯಾಗ್ರಹಿಗಳ ಮೇಲೆ ಹೆಂಡವನ್ನೂ ಸುರಿಯಲಾಗುತ್ತಿತ್ತು. ಕುಡುಕರನ್ನು ಬಿಟ್ಟು ದಾಂಧಲೆ ಮಾಡಿಸಲಾಗುತ್ತಿತ್ತು. ಕುಡುಕರು ಸತ್ಯಾಗ್ರಹಿಗಳನ್ನು ವಾಚಾಮಗೋಚರವಾಗಿ ಬಯ್ಯುತ್ತಿದ್ದರು. ಅದಾವುದಕ್ಕೂ ಈ ಧೀರಮಹಿಳೆಯರು ಜಗ್ಗುತ್ತಿರಲಿಲ್ಲ. ಶೀಲ ಭಂಗವಾಗುವ ಸಂದರ್ಭ ಒದಗಿದರೆ ಪ್ರತೀಕಾರಕ್ಕೂ, ಪ್ರಾಣಾರ್ಪಣೆಗೂ ಈ ಸ್ತ್ರೀ ಸತ್ಯಾಗ್ರಹಿಗಳು ತಯಾರಿದ್ದರು. ಸ್ವತ್ತುಗಳನ್ನು ಹರಾಜಿನಲ್ಲಿ ಕೊಂಡವರು. ತಾವು ಕೊಂಡ ಜಾನುವಾರುಗಳನ್ನೂ ಪಾತ್ರೆ ಪದಾರ್ಥಗಳನ್ನೂ ಹಿಂದಿರುಗಿಸುವವರೆಗೂ ಅವರುಗಳ ಮನೆಮುಂದೆ ಈ ನಿರಶನ ಸತ್ಯಾಗ್ರಹ ಮುಂದುವರೆಯುತ್ತಿತ್ತು.

ಈ ಹೆಣ್ಣುಮಕ್ಕಳು ಪಟ್ಟಪಾಡು, ಎದುರಿಸಿದ ಸವಾಲುಗಳು ಕಣ್ಣಲ್ಲಿ ನೀರು ಮಿಡಿಸುವಂಥವು. ಗೌರಮ್ಮ, ಕಲ್ಹಾಳದ ಕಾವೇರಮ್ಮ, ಗೋದಾವರಿಬಾಯ್, ಎರಡು ದಿನದ ಮಗುವಿನ ತಾಯಿ ಸೀತಾಬಾಯ್ ಮಡಗಾಂವಕರ್, ಸಿರ್ಸಿಯ ಸೀತಾಬಾಯ್, ಹಣಬೆ ಬೈಲ್ ದುಗ್ಗಮ್ಮ, ಮುಗುದೂರ್ ಸುಬ್ಬಮ್ಮ, ಕನ್ನಳ್ಳಿ ಸೀತಾಬಾಯ್, ಶೀರಳಿಗಿ ಗಂಗಾಬಾಯ್, ಪಾರ್ವತಿಬಾಯ್, ಇಡಕಲಗದ್ದೆ ತಿಮ್ಮಮ್ಮ, ಗುಂಜಗೋಡ್ ಮಹದೇವಮ್ಮ (ಮಹದೇವಿತಾಯಿ), ಹರಿಗೆ ಸರಸ್ವತಮ್ಮ, ಸುಬ್ಬಮ್ಮಾ ಜೋಯಿಸ್ ಮುಂತಾದ ಮಹಿಳಾ ಸತ್ಯಾಗ್ರಹಿಗಳ ಅಗ್ನಿಪರೀಕ್ಷೆಯೇ ಈ ಹೋರಾಟದಲ್ಲಿ ನಡೆದು ಹೋಯಿತು.



ಉಮಾಬಾಯ್ ಕುಂದಾಪುರ್, ಕೃಷ್ಣಾಬಾಯ್ ಪಣಜೀಕರ್, 1932ರ ಉಪ್ಪಿನ ಸತ್ಯಾಗ್ರಹಕ್ಕೆ ಬೆಂಬಲಕೋರಿ ಧಾರ್ವಾಡ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರಯಾತ್ರೆ ಕೈಗೊಂಡರು. ಅವರು ಮಾಡಿದ ಉಗ್ರ ಭಾಷಣಗಳಿಗಾಗಿ ಬಂಧಿಸಿ ಯರವಾಡಾ ಸೆರೆಮನೆಗೆ ದೂಡಲಾಯಿತು. ಆರು ತಿಂಗಳು ಸಶ್ರಮಶಿಕ್ಷೆ, 300 ರೂ. ದಂಡ ವಿಧಿಸಲಾಯಿತು. ಮರಾಠಿ, ಕನ್ನಡಗಳಲ್ಲಿ ಅಸ್ಖಲಿತವಾಗಿ ಮಾತನಾಡುತ್ತಿದ್ದ ಕೃಷ್ಣಾಬಾಯ್ ರತ್ನಗಿರಿಗೆ ಹೋಗಿ ಮರಾಠಿಯಲ್ಲಿ ಭಾಷಣ ಮಾಡಿದ್ದಕ್ಕೆ 1942ರಲ್ಲಿ ಒಂದು ವರ್ಷಕಾಲ ಸ್ಥಾನಬದ್ಧತೆಯಲ್ಲಿರಬೇಕಾಯಿತು.

ಸರ್ದಾರ್ ವೀರನಗೌಡರ ಪತ್ನಿ ನಾಗಮ್ಮ 1942ರ ಚಳವಳಿಯಲ್ಲಿ ಅವರ ಮಗಳು ಲೀಲಾವತಿ ಮಾಗಡಿಯವರೊಡನೆ ಬಂಧಿತರಾದರು. ಅದೇ ಕಾಲಕ್ಕೆ ನಾಗಮ್ಮನವರ ಪತಿ ಸರ್ದಾರ್ ವೀರನಗೌಡ ಪಾಟೀಲರೂ, ಅವರ ಅಳಿಯ ವಿ.ಟಿ. ಮಾಗಡಿಯವರೂ ಸೆರೆಮನೆಯಲ್ಲಿದ್ದರು.

ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಹೊರಟ ಗಂಗೂ ಬೆಳವಡಿ, ಲೀಲಾ ಚಟ್ನೀಸ್, ಇಂದಿರಾ ಬೆಳವಡಿ ಇವರನ್ನು ಪೊಲೀಸರು ಬಂಧಿಸಿದರು. 1942ರ ಚಳವಳಿಯ ಪ್ರಾರಂಭದಲ್ಲಿ ಕುಮಾರಿ ವಿಮಲಾ ಗುಳವಾಡಿ, ಹೇಮಾ ಶಿರೋಳಿಕರ್ ಇವರು ಧಾರ್ವಾಡ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಹೊಕ್ಕು ರಾಷ್ಟ್ರಧ್ವಜವನ್ನು

ನ್ಯಾಯಾಧೀಶರ ಮೇಜಿನ ಮೇಲಿಟ್ಟು, ಕರಪತ್ರ ಹಂಚಿದರು. ಇದಕ್ಕಾಗಿ ಅವರಿಗೆ ತಲಾ 3 ತಿಂಗಳ ಶಿಕ್ಷೆ ಆಯಿತು.

1930ರ ಉಪ್ಪಿನ ಸತ್ಯಾಗ್ರಹ ನಡೆದ ಸಂದರ್ಭದಲ್ಲಿ ಬಸವ್ವ ಎಂಬ ಸಾಮಾನ್ಯ ಹೆಂಗಸು ಉಪ್ಪಿನಪೊಟ್ಟಣಗಳನ್ನು ಗದಗದಲ್ಲಿ ಬಹಿರಂಗವಾಗಿ ಹರಾಜು ಮಾಡಿದಳು. ಆಕೆಯನ್ನೂ ಉಪ್ಪಿನ ಪೊಟ್ಟಣಗಳನ್ನು ಕೊಂಡವರನ್ನೂ ಪೊಲೀಸರು ಬಂಧಿಸಿದರು. ರಟ್ಟೆ ಹಿಡಿದು ಎಳೆಯಲು ಯತ್ನಿಸಿದ ಪೊಲೀಸನಿಗೆ ಆಕೆ ಛೀಮಾರಿ ಹಾಕಿದಳು. ಬಸಮ್ಮನನ್ನೂ ಬಂಧಿಸಿ ಕರೆದುಕೊಂಡು ಹೋಗುತ್ತಿದ್ದಾಗ ಒಬ್ಬ ಲಿಂಗಾಯತ ಸಾಹುಕಾರರು ಬಸಮ್ಮನಿಗೆ ಬಹಿಷ್ಕಾರ ಹಾಕುವುದಾಗಿ ಘೋಷಿಸಿದರು. ಆಗ ಈ ಬಡಹೆಂಗಸು ಕನಲಿ ಹೇಳಿದಳು :

"ಸಾವ್‌ಕಾರ, ನಾನು ಸತ್ತಾಗ ನನ್ನ ಹೆಣ ಹೊರೋಕ್ಕೆ ನೀನು ಬರಬೇಡ. ನಾಯಿ ನರಿ ತಿಂದ್ಹೋಗ್ಲಿ". ನ್ಯಾಯಾಧೀಶರ ಮುಂದೆ ನಿಲ್ಲಿಸಿದಾಗ 'ಹೆಣ್ಣುಮಗಳು ಅಂತ ಆರು ತಿಂಗಳು ಶಿಕ್ಷೆ ವಿಧಿಸಿದ್ದೇನೆ' ಎಂದು ಅವರು ತಿಳಿಸಿದಾಗ "ಸಾಹೇಬರ ನೀವು ಉಪಕಾರ ಮಾಡೋದು ನನಗೆ ಬೇಕಾಗಿಲ್ಲ. ನಿಮ್ಮ ಕಾಯ್ದೆಯಲ್ಲಿ ಏನು ಏಳ್ಳೆಯ್ತೋ ಅಷ್ಟು ಶಿಕ್ಷೆ ನನಗೆ ಕೊಟ್ಟು ಬಿಡಿ" ಅಂದಳು.

1942ರ ಚಳವಳಿಯಲ್ಲಿ 200 ವಿದ್ಯಾರ್ಥಿನಿಯರು ಬೆಳಗಾವಿಯಲ್ಲಿ ಬಂಧಿತರಾದರು. ನೂರಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಮೈಸೂರು ಬೆಂಗಳೂರುಗಳಲ್ಲಿ ಶಿಕ್ಷೆಗೆ ಗುರಿಯಾದರು.

ಮೈಸೂರು ಕಾಂಗ್ರೆಸ್ ಸತ್ಯಾಗ್ರಹ ಹೂಡಿದಾಗ ಭಾಗವಹಿಸಿದ ಪ್ರಮುಖ ಮಹಿಳಾ ಸತ್ಯಾಗ್ರಹಿಗಳೆಂದರೆ ಸುಬ್ಬಮ್ಮ ಜೋಯಿಸ್, ಯಶೋಧರಮ್ಮ, ಬಳ್ಳಾರಿಸಿದ್ದಮ್ಮ, ಸುನಂದಮ್ಮ, ಅನ್ನಪೂರ್ಣಮ್ಮ ತಿಮ್ಮಾರೆಡ್ಡಿ, ಕಬ್ಬನ್‌ಪೇಟೆ ಅನ್ನಪೂರ್ಣಮ್ಮ, ಸಾವಿತ್ರಮ್ಮ ರಾಮಶರ್ಮ, ತಾಯಮ್ಮ ವೀರಣ್ಣಗೌಡ, ಎಸ್. ಕುಂತಳಾ, ಎಂ.ಆರ್. ಲಕ್ಷಮ್ಮ, ರತ್ನಮ್ಮ ಮಾಧವರಾವ್, ಲಲಿತಮ್ಮ ಜಿ.ಆರ್.ಸ್ವಾಮಿ, ನಾಗರತ್ನಮ್ಮ ಹಿರೇಮಠ್ ಮುಂತಾದವರು.

ಬಳ್ಳಾರಿ ಸಿದ್ದಮ್ಮ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು. ಧೈರ್ಯದ ಹೆಂಗಸು. ಒಮ್ಮೆ ಮೈಸೂರು ಜಿಲ್ಲೆ ಗುಂಡ್ಲುಪೇಟೆ ತಾಲೂಕಿನಲ್ಲಿ ಪ್ರಚಾರ ಕಾರ್ಯಕ್ಕೆ ಯಶೋಧರಾ ದಾಸಪ್ಪ ಮತ್ತು ಎಂ.ಎನ್. ಜೋಯಿಸ್ ಜೊತೆಗೂಡಿ ಹೋಗಿ ಭಾಷಣ ಮಾಡುತ್ತಿದ್ದಾಗ ಆ ಭಾಗದ ಸಾಹುಕಾರರ ಕಡೆಯವರು ಒಂದು ದಪ್ಪ ಕಲ್ಲೂ ತೂರಿದರು. ಆ ಕಲ್ಲು ಬಳ್ಳಾರಿ ಸಿದ್ದಮ್ಮನವರ ಹಣೆಗೆ ಬಡಿಯಿತು. ಧಾರಾಕಾರವಾಗಿ ರಕ್ತ ಸುರಿಯಲಾರಂಭಿಸಿತು. ಸಿದ್ದಮ್ಮನವರು ಭಾಷಣ ನಿಲ್ಲಿಸಲಿಲ್ಲ. 'ಭಾರತಾಂಬೆಯ ಬಿಡುಗಡೆಗೆ ನಾವು ಹೋರಾಡುತ್ತಿದ್ದೇವೆ. ಈ ಹೋರಾಟದಲ್ಲಿ ನಮ್ಮ ಪ್ರಾಣವೇ ಹೋದರೂ ನಾವು ಹಿಮ್ಮೆಟ್ಟುವುದಿಲ್ಲ. ದೇಶದ ಬಿಡುಗಡೆಗಾಗಿ ನನ್ನ ರಕ್ತ ಚೆಲ್ಲಲೂ ನಾನು ಎಂದೂ ಸಿದ್ಧ' ಎಂದು ಗುಡುಗಿದರು. ಯಶೋಧರಮ್ಮನವರು ತಾವು ಉಟ್ಟಿದ್ದ ಹೊಸ ರೇಷ್ಮೆಸೀರೆಯ ಸೆರಗನ್ನೇ ಹರಿದು ಬಳ್ಳಾರಿ ಸಿದ್ದಮ್ಮನವರ ಹಣೆಗೆ ಬ್ಯಾಂಡೇಜ್ ಕಟ್ಟಿದರು.

ಶಿವಪುರದ ಸಮಾವೇಶದ ಸಂದರ್ಭದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಬಾರದೆಂದು ನಿಷೇಧಾಜ್ಞೆ ಜಾರಿಗೊಳಿಸಲಾಯಿತು. ಈ ಆಜ್ಞೆ ಮುರಿಯುವುದೇ ಬೇಡವೇ ಎಂದು ನಾಯಕರು ಚರ್ಚೆ ಮಾಡುತ್ತಿದ್ದಾಗ, ಯಶೋಧರಮ್ಮನವರು, 'ನೀವು ಗಂಡಸರು ಈ ಆಜ್ಞೆಯನ್ನು ಮುರಿದು ಬಾವುಟ ಹಾರಿಸಲು ಮುಂದಾಗದೆ ಹೋದರೆ, ನಾನೇ ಬಾವುಟ ಹಾರಿಸುತ್ತೇನೆ' ಎಂದು ಘೋಷಿಸಿದರು. ಇದರ ಪರಿಣಾಮವಾಗಿ ಪ್ರತಿಬಂಧಕಾಜ್ಞೆ ಮುರಿಯುವ ತೀರ್ಮಾನ ಕೈಗೊಂಡದ್ದಲ್ಲದೆ ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧ್ಯಕ್ಷರಾದ ಟಿ. ಸಿದ್ದಲಿಂಗಯ್ಯನವರೇ ಧ್ವಜವನ್ನು ಹಾರಿಸುವುದೆಂಬ ತೀರ್ಮಾನವನ್ನೂ ಕೈಗೊಳ್ಳಲಾಯಿತು.

ಮೈಸೂರಿನಲ್ಲಿ ಸುಬ್ಬರಾಯನಕೆರೆ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಬಾರದೆಂಬ ಕಾನೂನು ಬಹುಕಾಲ ಜಾರಿಯಲ್ಲಿತ್ತು. ಪ್ರತಿತಿಂಗಳು ಒಬ್ಬರು ಬಾವುಟ ಹಾರಿಸಿ ಸೆರೆಮನೆ ಸೇರುತ್ತಿದ್ದರು. ಈ ಸಾರಿ ಆ ಹೊಣೆಗಾರಿಕೆ ಸುಬ್ಬಮ್ಮ ಜೋಯಿಸ್ ಅವರ ಮೇಲೆ ಬಿತ್ತು. ಸುಬ್ಬಮ್ಮ ತಮ್ಮ ಅತ್ತೆಯವರನ್ನು ಕರೆದುಕೊಂಡು ಕಂಕುಳಲ್ಲಿ ಮಗುವನ್ನೆತ್ತಿಕೊಂಡು ಪ್ರತಿಬಂಧಕಾಜ್ಞೆ ಮುರಿಯಲು ಸುಬ್ಬರಾಯನ ಕೆರೆ ಮೈದಾನಕ್ಕೆ ಬಂದರು. ಆ ವೇಳೆಗಾಗಲೇ ಎಂ.ಎನ್. ಜೋಯಿಸರು ಇದೇ ಕಾರಣಕ್ಕಾಗಿ ಸೆರೆಮನೆ ಸೇರಿದ್ದರು. ಸುಬ್ಬಮ್ಮನವರು ಕಂಕುಳಲ್ಲಿದ್ದ ಮಗುವನ್ನು ಅತ್ತೆಯವರ ಕೈಗಿತ್ತು, ಧ್ವಜಾರೋಹಣ ಮಾಡಿದರು. ಪೊಲೀಸರು ಸುಬ್ಬಮ್ಮನವರನ್ನು ದಸ್ತಗಿರಿ ಮಾಡಲು ಮುಂದೆ ಬಂದರು. ಸುಬ್ಬಮ್ಮ ಅತ್ತೆಗೆ ನಮಸ್ಕಾರ ಮಾಡಿ, ಮಗುವನ್ನು ಅವರಿಂದ ಪಡೆದು ತನ್ನ ತೋಳಿಗೇರಿಸಿಕೊಂಡು ಪೊಲೀಸ್ ಠಾಣೆಗೆ ನಡೆದೇ ಬಿಟ್ಟರು. ಸುಬ್ಬಮ್ಮನವರಿಗೆ ಆರು ತಿಂಗಳ ಸೆರೆಮನೆಯ ಶಿಕ್ಷೆ ವಿಧಿಸಲಾಯಿತು.

ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ಮಂಗಳೂರಿನ ಕಮಲಾದೇವಿ ಚಟ್ಟೋಪಾಧ್ಯಾಯ ಅವರನ್ನು ನೆನೆಯದೇ ಇದ್ದರೆ ತಪ್ಪಾದೀತು ಈಕೆ ವಿದೇಶಗಳಲ್ಲಿ ವ್ಯಾಸಂಗಮಾಡಿದ ವಿದ್ಯಾವಂತ ಮಹಿಳೆ. ಕಾಂಗ್ರೆಸ್ಸಿನ ಪ್ರಚಾರ ಕಾರ್ಯದಲ್ಲಿ ಇವರದು ಮಹತ್ವದ ಪಾತ್ರ. ಅವರೆಷ್ಟು ಸಾರಿ ಪ್ರತಿಬಂಧಕಾಜ್ಞೆಗಳನ್ನು ಮುರಿದು ಸೆರೆಮನೆ ಸೇರಿದರೋ ಲೆಕ್ಕವಿಲ್ಲ. ಸೋಷಲಿಸ್ಟ್ ಸಿದ್ಧಾಂತಕ್ಕೆ ಒಲಿದಿದ್ದ ಕಮಲಾ ದೇವಿಯವರದು ಬಹು ದೊಡ್ಡ ವ್ಯಕ್ತಿತ್ವ, ಸಭ್ಯತೆಗೆ, ಸರಳತೆಗೆ ಮತ್ತೊಂದು ಹೆಸರು ಕಮಲಾದೇವಿ.

ಹೀಗೆ ಕರ್ನಾಟಕದ ವೀರರಮಣಿಯರು ಅನೇಕರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯಪಾತ್ರ ವಹಿಸಿ ರಾಷ್ಟ್ರಕ್ಕೆ ಅಮೋಘಸೇವೆ ಸಲ್ಲಿಸಿದ್ದಾರೆ. ❑

ಹೈಸ್ಕೂಲಿನ ಕೆಲವು ವಿದ್ಯಾರ್ಥಿಗಳು ಒಂದು ದಿನ ಬೆಳಗಾವಿ ಮಾರ್ಕೆಟ್ ಮಧ್ಯಭಾಗದಲ್ಲಿ ಝುಂಡಾ ಚೌಕಿನಲ್ಲಿ ವಿದೇಶಿ ಬಟ್ಟೆಯ ರಾಶಿ ಹಾಕಿ ಅದಕ್ಕೆ ಬೆಂಕಿ ಹಚ್ಚಿದರು. ಬಂದೂಕುಧಾರಿಯಾಗಿ ಬಂದು ನಿಂತ ಪೊಲೀಸರು ತಮ್ಮ ಬಂದೂಕುಗಳನ್ನು ಸಜ್ಜುಗೊಳಿಸುವಷ್ಟರಲ್ಲಿ ಕಾಯಿಪಲ್ಲೆ ಮಾರುವ ಬಸವ್ವ ಕಳಸಣ್ಣವರ ಎಂಬ ಮಹಾಕಾಯದ ಮಹಿಳೆಯು ಒಮ್ಮೆಲೆ ಪೊಲೀಸರ ಮುಂದೆ ನಿಂತು "ಈ ಚಿಕ್ಕಮಕ್ಕಳ ಮೇಲೆ ಬಂದೂಕಿನ ಗುರಿ ಇಡಲು ನಿಮಗೆ ನಾಚಿಕೆ ಆಗುವುದಿಲ್ಲವೆ? ಬಲಾಢ್ಯ ಬ್ರಿಟಿಷ್ ಸರ್ಕಾರವು ಚಿಕ್ಕ ಬಾಲಕರಿಗೆ ಹೆದರುವುದೆ?" ಎಂದು ಪೊಲೀಸ್‌ರಿಗೆ ಛೀಮಾರಿ ಹಾಕಿದಳು. ಅವಳ ಆ ರುದ್ರಾವತಾರದ ಪರಿಣಾಮವಾಗಿ ಪೊಲೀಸರು ಗುಂಡು ಹಾರಿಸುವ ಬದಲು ಹುಡುಗರನ್ನು ಬಂಧಿಸಿ ಕೋರ್ಟ್‌ನಲ್ಲಿ ಖಟ್ಲೆ ಹಾಕಿದರು.

ಆಧಾರ : ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು

ಇತ್ತೀಚಿನ ಮಹಿಳಾ ಸಾಹಿತ್ಯ : ಒಂದು ಟಿಪ್ಪಣಿ



ಡಾ. ಚಂದ್ರಮತಿ ಸೋಂದಾ

ನಮ್ಮ ಸಮಾಜದಲ್ಲಿ ಪುರುಷ ರಾಜಕಾರಣ ಹುಟ್ಟು ಹಾಕಿರುವ ಮಹಿಳಾ ವಿರೋಧಿ ನಿಲುವನ್ನು ಸ್ವಾತಂತ್ರ್ಯೋತ್ತರ ಸಾಹಿತ್ಯದಲ್ಲಿ ಲೇಖಕಿಯರು ಅಭಿವ್ಯಕ್ತಿಸಿರುವ ಪ್ರತಿಭಟನೆಯ ಅಲೆಗಳನ್ನು ಈ ಲೇಖನ ಗುರುತಿಸುತ್ತದೆ. ಸುಮಾರು ಮೂರೂವರೆ ದಶಕದ ಸ್ತ್ರೀ ಸಂವೇದನೆಯ ದನಿಯನ್ನು ಡಾ. ಚಂದ್ರಮತಿ ಸೋಂದಾ ಅವಲೋಕಿಸಿದ್ದಾರೆ.

"ಮಹಿಳೆ ತನ್ನ ಮೌನವನ್ನು ಮುರಿದ ಹೊರತು ಮಹಿಳೆಯರ ಸಾಹಿತ್ಯದಲ್ಲಿ ತೀವ್ರತೆ ಮೂಡಲು ಸಾಧ್ಯವಿಲ್ಲ"

(ಜಿ.ನ. ಮಂಗಳ, ಬರಹಗಾರ್ತಿಯರ ಇತಿಮಿತಿಗಳು ಪು. 19)

"... ಮಹಿಳೆಯ ಯಾವ ಅನುಭವ-ವಿಚಾರ, ಭಾವನೆಗಳಿಗೆ ಆಕೆ ನಿಂತಿರುವ ಸಮಾಜದಲ್ಲಿ ಮನ್ನಣೆ ಇಲ್ಲವೋ ಆಗ ಆಕೆ ತನ್ನಂತೆ ಅಭಿವ್ಯಕ್ತಿಗೆ ಲಕ್ಷ್ಮಣರೇಖೆ ಹಾಕಿಕೊಳ್ಳಬೇಕಾಗುತ್ತದೆ. ಹೀಗೆ ಪ್ರಜ್ಞೆ ಹಾಗೂ ಇದರ ಹುಟ್ಟು ಸ್ಥಿತಿಗೆ ಕಾರಣವಾಗುವ ಸಮಾಜ ಯಾವುದೇ ಇರಲಿ ಅಂಥ ಒಂದು ಸಮಾಜದ ಅಂಗವಾಗಿ ಬದುಕುವ ಹೆಣ್ಣು ತನ್ನ ವ್ಯಕ್ತಿ ಪ್ರಜ್ಞೆಗಿಂತ ಹೆಚ್ಚಾಗಿ ಅಂಥ ಪ್ರಜ್ಞೆಯನ್ನು ನಿಯಂತ್ರಿಸುವ ಚಾಲಕಶಕ್ತಿಯನ್ನು ಅರ್ಥಾತ್ ಪುರುಷ ಪ್ರಧಾನ ಸಮ್ಹಾಜವನ್ನು ಮೀರಿ ನಿಲ್ಲುವುದು ಕಷ್ಟವಾಗುತ್ತದೆ"

(ವಿಜಯಾ, ಮಹಿಳೆಯರ ಕೃತಿಯಲ್ಲಿ ಸಾಮಾಜಿಕ ಪ್ರಜ್ಞೆ ಪು.70)

ಮೇಲಿನೆರಡು ಅಭಿಪ್ರಾಯಗಳಲ್ಲಿ ಮೇಲುನೋಟಕ್ಕೆ ವೈದೃಶ್ಯಗಳಿರುವಂತೆ ಕಂಡರೂ ಅವೆರಡೂ ಪರಸ್ಪರ ಪೂರಕಗಳೇ. ಮಹಿಳೆ ತನ್ನ ಮೌನವನ್ನು ಮುರಿಯಲು ಯಾಕೆ ಸಾಧ್ಯವಾಗುತ್ತಿಲ್ಲ ಎನ್ನುವುದನ್ನು ಚರಿತ್ರೆ ಹಾಗೂ ಸಾಮಾಜಿಕ ವಾಸ್ತವದ ಹಿನ್ನೆಲೆಯಲ್ಲಿ ಹುಡುಕಬೇಕಿದೆ. ಮಸುಕು ಬೆಳಕಿನಲ್ಲಿ ಇರುವ ವಸ್ತುಗಳು ಅಸ್ಪಷ್ಟವಾಗಿ ಕಾಣುತ್ತವೆಯೇ ವಿನಾ ಸ್ಪಷ್ಟವಾಗುವುದಿಲ್ಲ. ಲಾಗಾಯ್ತಿನಿಂದಲೂ ಮಹಿಳೆಯನ್ನು ಅಕ್ಷರಸಂಸ್ಕೃತಿ ಎಲ್ಲ ಜ್ಞಾನಶಾಖೆಗಳಿಂದ ಹೊರಗಿಟ್ಟು ವಿಧಿವಾದ, ಕರ್ಮಸಿದ್ಧಾಂತಗಳ ತಾತ್ವಿಕತೆಯಲ್ಲಿ ಬಂಧಿಸಿದ್ದರಿಂದ ತನ್ನ ಈಗಿನ ಸ್ಥಿತಿ ಪೂರ್ವಾರ್ಜಿತ ಕರ್ಮದ ಫಲ ಎಂದು ಮಹಿಳೆ "ತಣ್ಣಗೆ" ಕೂರುವುದರ ವಿನಾ ಆಕೆಗೆ ಬೇರೆ ದಾರಿಯಿರಲಿಲ್ಲ.

"ಮಹಿಳೆ ತನ್ನ ಮೇಲೆ ನಡೆಯುವ ದೌರ್ಜನ್ಯವನ್ನು ಪ್ರತಿಭಟಿಸದಿರುವುದು ಆಶ್ಚರ್ಯದ ಸಂಗತಿ" ಎಂದು ಯೋಚಿಸುವ ಮೊದಲು ಚರಿತ್ರೆಯನ್ನು ಕೆದಕಿ ನೋಡಿದರೆ ಮಹಿಳೆಯ ಮೌನದ ಕಾರಣ ಅರ್ಥವಾದೀತು. ಅವಳ ಲೈಂಗಿಕತೆ, ಬೌದ್ಧಿಕತೆ, ವೈಚಾರಿಕತೆಗಳೆಲ್ಲವೂ ಪುರುಷಾಧೀನವಾಗಿರುವಾಗ ಪುರುಷನಿಷ್ಠೆಗೆ ವಿಭಿನ್ನವಾದ ನೆಲೆಯಲ್ಲಿ ಆಕೆಯ ಆಲೋಚನೆ ಹರಿಯಲು ಹೇಗೆ ಸಾಧ್ಯ ? ಅಂದಮಾತ್ರಕ್ಕೆ ಚರಿತ್ರೆಯುದ್ದಕ್ಕೂ ಮಹಿಳೆ ಎಲ್ಲವನ್ನೂ ಸಹಿಸುತ್ತ ಮೌನವಾಗಿದ್ದಳು ಎನ್ನುವಂತಿಲ್ಲ. ವೈಯಕ್ತಿಕ ನೆಲೆಯಲ್ಲಿ ಅವಳು ಪ್ರತಿಕ್ರಿಯಿಸಿದ್ದಾಳೆ; ಪ್ರತಿಭಟಿಸಿದ್ದಾಳೆ. ಅವಳ ಇಂಥ ಕ್ರಿಯೆಗಳು ಹೋರಾಟದ ಸ್ವರೂಪ ಪಡೆದಿರಲಿಲ್ಲ. ರಾಜಕೀಯ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ ಇಪ್ಪತ್ತನೆಯ ಶತಮಾನದ ಎಪ್ಪತ್ತು ಹಾಗೂ ಎಂಬತ್ತರ ದಶಕಗಳಲ್ಲಿ ಕರ್ನಾಟಕದಲ್ಲಿ ಅನೇಕ ಚಳವಳಿಗಳು ಜನ್ಮತಾಳಿದವು. ಮಹಿಳಾ ಚಳವಳಿ, ಅವು ನಡೆದಿದ್ದು ಕೂಡ ಅದೇ ಸಮಯದಲ್ಲಿ. ಸಾಧಾರಣವಾಗಿ ಚಳವಳಿ ಹಾಗೂ ಆ ಪರಿಕಲ್ಪನೆಯನ್ನಾಧರಿಸಿದ ಸಾಹಿತ್ಯ ಕೃತಿಗಳು ಪರಸ್ಪರ ಪೂರಕಗಳಾಗಿರುತ್ತವೆ.

ಹಿಂದಿನ ಶತಮಾನದ ಎಪ್ಪತ್ರರ ದಶಕದ ಅನಂತರದ ಮಹಿಳಾ ಸಾಹಿತ್ಯ ಅದುವರೆಗಿನ ಮಹಿಳಾ ಸಾಹಿತ್ಯಕ್ಕಿಂತ ಭಿನ್ನವಾದ ಆಲೋಚನಾಕ್ರಮವನ್ನು ರೂಢಿಸಿಕೊಂಡಿತು. ಪ್ರಧಾನ ಸಂಸ್ಕೃತಿಯಿಂದ ಭಿನ್ನವಾದ ಮಹಿಳಾ ಉಪಸಂಸ್ಕೃತಿಯೊಂದಿದೆ ಎನ್ನುವುದನ್ನು ಮಹಿಳಾ ಚಳವಳಿ ಹಾಗೂ ಮಹಿಳಾ ಸಾಹಿತ್ಯ ಪ್ರತಿಪಾದಿಸಿದವು. ಮಹಿಳಾ ಸಂಸ್ಕೃತಿಯ ಲಕ್ಷಣವನ್ನು ಜಿ.ಎಸ್. ಆಮೂರ ಅವರು ಹೀಗೆ ಗುರುತಿಸಿದ್ದಾರೆ. (ಕನ್ನಡ ಕಥನ ಸಾಹಿತ್ಯ : ಕಾದಂಬರಿ: ಪುಟ: 447)

1. ಪುರುಷಪ್ರಧಾನ ವ್ಯವಸ್ಥೆಯ ನಿರಾಕರಣೆ
2. ಪುರುಷ ನಿರ್ಮಿತ ಸ್ತ್ರೀ ಪ್ರತಿಮೆಗಳ ನಿರಾಕರಣೆ
3. ಸ್ತ್ರೀ ಸಂಸ್ಕೃತಿಯ ಪರಂಪರೆಯ ಶೋಧ
4. ಹೊಸ ಮೌಲ್ಯಗಳ ಪ್ರತಿಪಾದನೆ

ಇವನ್ನೆಲ್ಲ ಅರ್ಥಮಾಡಿಕೊಳ್ಳಲು ಸ್ತ್ರೀಸಂವೇದನೆ ಅತ್ಯಂತ ಅಗತ್ಯ ಹಾಗಾಗಿ, ಐದನೆಯ ಅಂಶವಾಗಿ 'ಸ್ತ್ರೀ ಸಂವೇದನೆಯ ಅನಾವರಣ' ಈ ಪಟ್ಟಿಗೆ ಸೇರುತ್ತದೆ.

ಸ್ತ್ರೀಸಂವೇದನೆ ಎನ್ನುವುದನ್ನು ಕೆಲವೊಮ್ಮೆ ತಪ್ಪಾಗಿ ಅರ್ಥೈಸುವುದಿದೆ. ಬದುಕನ್ನು ಸ್ತ್ರೀಯಾಗಿ ಅವಳು ಗ್ರಹಿಸುವುದು ಎನ್ನುವುದು ಇಲ್ಲಿನ ಅರ್ಥ. ಪುರುಷನ ದೃಷ್ಟಿಯಲ್ಲಿಯೇ ಎಲ್ಲವೂ ಇದೆ ಎನ್ನುವ ಧೋರಣೆಗೆ ವಿಭಿನ್ನವಾದುದು ಇದು. ವೈದೇಹಿಯವರ 'ಶಿವನ ಮೀಸುವ ಹಾಡು' ಕವನದ ಆಂತರ್ಯವನ್ನು ಗ್ರಹಿಸಿದವರಿಗೆ ಇದು ಬೇಗ ಅರ್ಥವಾಗುತ್ತದೆ.

ಮೇಲಿನ ಅಂಶಗಳನ್ನು ಒಳಗೊಂಡಿರುವ ಸಾಹಿತ್ಯವೂ ಕುಟುಂಬ, ದಾಂಪತ್ಯದ ಬದುಕಿನ ಸುತ್ತವೇ ಹೆಣೆದುಕೊಂಡಿದ್ದರೂ ಗ್ರಹಿಕೆಯಲ್ಲಿ

ಭಿನ್ನತೆಯಿದೆ. ಮಹಿಳೆಯ ಬದುಕು ಪಿತೃಪ್ರಧಾನ ಮೌಲ್ಯಗಳಿಂದ ರೂಪಿತವಾಗಿದೆ ಎಂದಷ್ಟೆ ಗ್ರಹಿಸುವುದಿಲ್ಲ. ಅದಕ್ಕೆ ಕಾರಣವನ್ನು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಇತಿಹಾಸದಲ್ಲಿ ಹುಡುಕಲು ಪ್ರಯತ್ನಿಸುತ್ತದೆ. ಪುರುಷದೃಷ್ಟಿ ಶ್ರೇಷ್ಠ ಎನ್ನುವ ಪರಂಪರಾಗತ ನಂಬಿಕೆಯನ್ನು ಛಿದ್ರಗೊಳಿಸುತ್ತದೆ. ಮಹಿಳೆಯ ಸಾಹಿತ್ಯವನ್ನು ಅಡುಗೆಮನೆ ಸಾಹಿತ್ಯ ಎನ್ನುವ ನೇತ್ಯಾತ್ಮಕ ಧೋರಣೆಯನ್ನು ಪ್ರಶ್ನಿಸುತ್ತದೆ.

ನಮ್ಮ ಪುರಾಣಗಳೆಲ್ಲ ಪುರುಷನ ದೃಷ್ಟಿಯಿಂದ ರಚನೆಯಾದವು. ಅಲ್ಲಿರುವ ಮಹಿಳೆಯರು ಪುರುಷ ಧೋರಣೆಯ ಮಾದರಿಗಳು. ಇದರಿಂದಾಗಿ ಮಹಿಳೆಗೆ ಯಾವ ಆಯ್ಕೆಯೂ ಇರಲಿಲ್ಲ. ಅವಳು ಗಂಡನ ನೆರಳಾಗಿ, ಪತಿಪರಾಯಣೆಯಾಗಿ ಬದುಕಬೇಕೆನ್ನುವ ಸಾಮಾಜಿಕ ನಿರೀಕ್ಷೆಗೆ ಅವಳು ಬದ್ಧಳಾಗಬೇಕಿತ್ತು. ಇಂಥ ಪುರಾಣ ಪಾತ್ರಗಳನ್ನು ಲೇಖಕಿಯರು ಅವು ಈಗ 'ಶಾಪವಾಗಿವೆ ಸ್ತ್ರೀ ಕುಲಕೆ' ಎನ್ನುವ ಎಚ್ಚರದಿಂದ ಪುನಾಸೃಷ್ಟಿಸಿದರು. ಶಕುಂತಲೆ, ಸೀತೆ, ಅಹಲ್ಯೆಯರನ್ನು 'ಅವನು ತಿರುಗಿ ಬಂದಾಗ ನೀನೂ ಶಾಪ ಕೊಡಬಾರದಿತ್ತೆ ?' 'ನಿನ್ನ ವ್ಯಥೆಯ ಕಥೆಯನ್ನೇಕೆ ಬೇರೆ ಬರಸಲಿಲ್ಲ?' 'ಕಲ್ಲಾಗುವ ಮುಂಚೆಯೇ ಯಾಕೆ ಕೊಡವಿ ಬರಲಿಲ್ಲ ?' (ಭಾಗ್ಯ ಜಯಸುದರ್ಶನ–ಸುಳ್ಳಿನಾಚೆಯ ಸತ್ಯ, ಪು.9–10) ಎಂದು ಪ್ರಶ್ನಿಸಿರುವುದರಲ್ಲಿ ಪುರುಷಪ್ರಧಾನ ಮೌಲ್ಯಗಳನ್ನು ತಿರಸ್ಕರಿಸಬೇಕೆನ್ನುವ ದನಿಯಿದೆ. ಶಕುಂತಲೆ ದುಷ್ಯಂತನಿಂದ ತಿರಸ್ಕೃತಳಾದಾಗ (ಪುರುಷಪ್ರಧಾನ ವ್ಯವಸ್ಥೆ ದೂರ್ವಾಸನ ಶಾಪದ ನೆಪವನ್ನು ಸೃಷ್ಟಿಸಿ ಅವನನ್ನು ಬಚಾವ್ ಮಾಡಿತು) 'ಉಂಗುರ ತೋರಿಸಿ ಪ್ರೇಮದಾನ ಪಡೆಯುವಷ್ಟು ಶೂನ್ಯಳೇನು ನಾನು' (ವೈದೇಹಿ–ಗೋಲ, ಪು.68). 'ಯಾವ ಕಾರಣಕ್ಕೂ ಅಪ್ರಾಮಾಣಿಕನೋರ್ವನ ಪಟ್ಟಮಹಿಷಿಯಾಗಿ ಇತಿಹಾಸದಲ್ಲಿ ಗುರುತಾಗಲು ಇಚ್ಛಿಸುವುದಿಲ್ಲ' (ಎಂ.ಎಸ್.ವೇದಾ–ಪಾಲು, ಪು.120) 'ನಾನು ಈ ಅರಮನೆಗೆ ಬಂದಿರುವುದು ಕುಮಾರ ಭರತನ ಶ್ರೇಯಸ್ಸಿಗಾಗಿ ಮಾತ್ರ.... ಈ ಏಕಮಾತ್ರ ಕಾರಣದಿಂದ ನಾನು ಇಲ್ಲಿ ಇರುವೆ. ಇದೊಂದು ಬಿಟ್ಟರೆ ನಮ್ಮಿಬ್ಬರ ಮಧ್ಯೆ ಇನ್ಯಾವ ಸಂಬಂಧವೂ ಇನ್ನು ಸಾಧ್ಯವಿಲ್ಲ' (ವೀಣಾ ಶಾಂತೇಶ್ವರ–ಬಿಡುಗಡೆ, ಪು.33). ಹೆಣ್ಣಿನ ಮೌನವನ್ನು ಮುರಿದ ಇಂಥ ಕೃತಿಗಳ ರಚನೆ ಪುರುಷ ರಾಜಕಾರಣದ ನಿರಾಕರಣೆಯೇ ಆಗಿವೆ.

ಅಧಿಕಾರ ಲಾಲಸೆಗಾಗಿ ಹಿಂಸೆ, ಯುದ್ಧಗಳನ್ನು ಕೈಗೊಂಡರೂ ಅದಕ್ಕೆ ಕಾರಣವನ್ನು ಹೆಣ್ಣಿಗೆ ಆರೋಪಿಸುವ ಪುರುಷ ಹುನ್ನಾರಗಳನ್ನು ಎಚ್ಚರದಿಂದ ಗಮನಿಸಿ ಮಹಿಳೆ ಪ್ರತಿಕ್ರಿಯಿಸಿದ್ದಾಳೆ. 'ಯುದ್ಧವೆಂದರೆ ಇಂತಹ ಘೋರವೆಂದು ತಿಳಿದಿದ್ದರೆ ನಾನು ಎಲ್ಲಿಯಾದರೂ ಭಿಕ್ಷೆಬೇಡಿ ತಿಂದರೂ ಸರಿ ಎಂದು ನನ್ನ ಮಕ್ಕಳನ್ನು ಕರೆದುಕೊಂಡು ಹೊರಟು ಹೋಗುತ್ತಿದ್ದೆ' (ಎಸ್.ವಿ. ಪ್ರಭಾವತಿ–ದ್ರೌಪದಿ, ಪು.133) ಎನ್ನುವ ಕುಂತಿಯ ಮಾತಿನ ಯುದ್ಧ ವಿರೋಧಿ ನಿಲುವು, 'ದೇಶಕ್ಕೆ, ಹೆಂಡತಿಗೆ ಆಪತ್ತಾಗಲೀ, ವಂಶದ ಘನತೆಗೆ ಕುಂದಾಗಲಿ ಬರದಿದ್ದಾಗ ಮತ್ತೆ ಯಾಕಾಗಿ ನೀವು ಯುದ್ಧಕ್ಕೆ ಹೊರಟಿರುವುದು' (ಎಂ.ಎಸ್.ವೇದಾ–ಜಯ, ಪು.2) ಎಂದು ಕುರುಕ್ಷೇತ್ರ ಯುದ್ಧಕ್ಕೆ ಹೊರಟ ಗಂಡನೊಂದಿಗಿನ ಅಭಿಲಾಷಾಳ ಪ್ರಶ್ನೆ ಈ ಮೂಲಕ ಪುರುಷ ರಾಜಕಾರಣವನ್ನು ಬಯಲಿಗೆಳೆಯಲಾಗಿದೆ. ಮೂಲ ಮಹಾಭಾರತದಲ್ಲಿಲ್ಲದ ಅಭಿಲಾಷಳಂಥ ಪಾತ್ರದ ಮೂಲಕ ಯುದ್ಧದ ಕ್ರೌರ್ಯವನ್ನು ಅನಾವರಣಗೊಳಿಸುವ 'ಜಯ' ಕಾದಂಬರಿ ಯುದ್ಧಕ್ಕೆ ದ್ರೌಪದಿ ಕಾರಣ ಎನ್ನುವ ನಂಬಿಕೆಯನ್ನು ಹುಸಿಗೊಳಿಸುತ್ತದೆ. ಭಾನುಮತಿ, ದ್ರೌಪದಿಯನ್ನು ಮುಖಾಮುಖಿಯಾಗಿಸುವುದರ ಮೂಲಕ ಪುರುಷ ರಾಜಕಾರಣದ ಹಿಂದಿನ ಅಧಿಕಾರ ಲಾಲಸೆಗೆ ವ್ಯಾಖ್ಯಾನ ಬರೆಯುತ್ತದೆ. ಗಂಡನ ಸಾವಿನ ಅನಂತರ ರಾಜ್ಯಕ್ಕೆ ಹಿಂತಿರುಗದ ರೋಹಿಣಿ, ಪಟ್ಟಾಭಿಷೇಕದಿಂದ ದೂರವೇ ಉಳಿಯುವ ದ್ರೌಪದಿಯರ ನಿರ್ಧಾರ ಅಧಿಕಾರ ರಾಜಕಾರಣವನ್ನು ತಿರಸ್ಕರಿಸುವುದರ ದ್ಯೋತಕ. ಹಿಂಸೆ, ಕ್ರೌರ್ಯದ ಮೂಲಕ ಅಧಿಕಾರ ಸ್ಥಾಪಿಸಬಯಸುವುದನ್ನು ಇಂಥ ಕೃತಿಗಳು ಪ್ರಶ್ನಿಸುತ್ತವೆ ; ಪುನರ್ವ್ಯಾಖ್ಯಾನಕ್ಕೆ ಒತ್ತಾಯಿಸುತ್ತವೆ.

ಪುರಾಣ ಕಾವ್ಯಗಳ ಕೆಲವು ಸ್ತ್ರೀಪಾತ್ರಗಳನ್ನು ಮಹಿಳಾ ಮಾದರಿಗಳೆಂದು ಎಂದಿನಿಂದಲೂ ಸಮಾಜ ಒಪ್ಪಿಕೊಂಡು ಬಂದಿತ್ತು. ಅಂಥ ಮಾದರಿಗಳು ಮಹಿಳೆಯ ಬದುಕನ್ನು ಇಕ್ಕಟ್ಟಿಗೆ ತಳ್ಳುತ್ತಿವೆ ಎನ್ನುವುದನ್ನು ಪ್ರಧಾನ ವ್ಯವಸ್ಥೆ ಕಡೆಗಣಿಸಿತ್ತು. ವಿನಯ ವಿಧೇಯತೆಗಳ ಮೊತ್ತವೆಂದು, ಮತ್ತು ಪಾತಿವ್ರತ್ಯದ ಐಕನ್ ಆಗಿದ್ದ ಸೀತೆ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳುವ ಪಾತ್ರವಾಗಿ ಬದಲಾದುದನ್ನು 'ರಾಮ ಸೀತೆ ರಾವಣ' (ಎಚ್.ವಿ. ಸಾವಿತ್ರಮ್ಮ) ಕಾದಂಬರಿ ದಾಖಲಿಸುತ್ತದೆ. ದಶರಥನ ಪತ್ನಿಯರ ನಡುವಿನ ಸಂಬಂಧದ ವ್ಯಾಖ್ಯಾನದ ಮೂಲಕ ಸವತಿ ಮಾತ್ಸರ್ಯ ಎನ್ನುವ ಪದದ ಸೃಷ್ಟಿಗೆ ಕಾರಣನಾದ ಗಂಡು ಅದರಿಂದ ದೂರವೇ ಉಳಿಯುವ ಪುರುಷ ರಾಜಕಾರಣವನ್ನು ಬಯಲಿಗೆಳೆಯುತ್ತದೆ. ಕೃತಿಯುದ್ದಕ್ಕೂ ಸನ್ನಿವೇಶಗಳ ಕಟುವಿಮರ್ಶೆ ಮಾಡುವ ಊರ್ಮಿಳೆಯ ದೃಷ್ಟಿ, ನಿಧಾನವಾಗಿ ತನ್ನ ಬದುಕಿನ ನಿರ್ಣಯವನ್ನು ತಾನೇ ತೆಗೆದು ಕೊಳ್ಳುವ ಸೀತೆ ಹೊಸಪ್ರತೀಕಗಳಾಗಿ ಮೂಡಿಬರುತ್ತಾರೆ. ಕೌಸಲ್ಯೆಯ ಸ್ವಾಭಿಮಾನ, ಸುಮಿತ್ರೆಯ ಸೌಹಾರ್ದತೆ, ಕೈಕೆಯ ಅಸ್ತಿತ್ವದ ಪ್ರಶ್ನೆಯಾಗಿ ರಾಮಾಯಣವನ್ನು ಗ್ರಹಿಸುವ ವಿಶಿಷ್ಟತೆ ಈ ಕೃತಿಯದು. ಭಾವನಾತ್ಮಕ ಸಂಬಂಧಕ್ಕಿಂತ ಪ್ರಜಾಪಾಲನೆಯೇ ಮುಖ್ಯವೆನ್ನುವ ರಾಜಸತ್ತೆಯ ಧೋರಣೆಯನ್ನು ಪ್ರಶ್ನಿಸುವ ಈ ಕೃತಿ ಅಧಿಕಾರ ರಾಜಕಾರಣ ಹೇಗೆ ಪುರುಷನ ಬದುಕನ್ನೂ ಬಲಿತೆಗೆದು ಕೊಳ್ಳುತ್ತದೆ; ಛಿದ್ರಗೊಳಿಸುತ್ತದೆ ಎನ್ನುವುದನ್ನು ಪ್ರತಿಪಾದಿಸುತ್ತದೆ.

ದ್ರೌಪದಿ, ಕುಂತಿ, ಅಂಬೆಯರು ಎಂದೂ ಮಾದರಿ ಪಾತ್ರಗಳಾಗಿರಲಿಲ್ಲ. ವೈವಾಹಿಕ ಸಂಬಂಧದ ಹೊರಗಿನಿಂದ ಮಕ್ಕಳನ್ನು ಪಡೆದ ಕುಂತಿಯನ್ನು, ಪಂಚಪತಿತ್ವವನ್ನುಳ್ಳ ದ್ರೌಪದಿಯನ್ನು ಒಪ್ಪಿಕೊಳ್ಳುವುದು ಪಿತೃಪ್ರಧಾನತೆಗೆ ಸಾಧ್ಯವಾಗಲೇ ಇಲ್ಲ. ತನಗಾದ ಅನ್ಯಾಯಕ್ಕಾಗಿ ಸಿಡಿದೆದ್ದು ಪ್ರತೀಕಾರ ಕೈಗೊಳ್ಳಲು ಮುಂದಾದ ಅಂಬೆಯನ್ನು ಜೀರ್ಣಿಸಿಕೊಳ್ಳುವುದಂತೂ ಅಸಾಧ್ಯದ ಮಾತು.

> ಗುರುಬೋಧಿಸಿದ ಮಂತ್ರಾನ ವದರಿ !
> ಆಮಂತ್ರಿಸಿದ ಗಟ್ಟಿಗಿತ್ತಿ ನೀ....
> ಪಾಂಡು ಗಂಡನಾಗಿ ಬಂದ್ರೂ ಗಂಡಾಗಲಿಲ್ಲ !
> ನಿನಗೆ. ನಿಂಗೆಂತ ಗಂಡಸರು ಬೇಕಾತು
> ಹೆಣ್ತನ ಅರಳಿಸಲಿಕ್ಕೆ...

(ಎಂ.ಎಸ್.ವೇದಾ–ಬಿಳಲುಗಳು, ಪು.76–37)

ಎನ್ನುವ ಸಾಲುಗಳಲ್ಲಿರುವ ಕುಂತಿಯ ಬಗೆಗಿನ ಬೆರಗು, ಎಂದೆಂದಿಗೂ ಭಾರತದ ಹೆಣ್ಣುಗಳನ್ನು ಹೆಜ್ಜೆಹೆಜ್ಜೆಗೂ ಕಾಡುವ ತುಂಬುವ್ಯಕ್ತಿತ್ವದ ಹೆಣ್ಣುಹುಲಿ (ಅದೇ, ಪು.30) ಎನ್ನುವ ದ್ರೌಪದಿ ಕುರಿತ ಪ್ರಶಂಸೆಗಳು ಕುಂತಿ, ದ್ರೌಪದಿಯರನ್ನು ಹೊಸ ಎಚ್ಚರದಿಂದ ಗ್ರಹಿಸಿದುದರ ಸಂಕೇತ. ಹೆಣ್ಣನ್ನು ವಸ್ತುವಿನಂತೆ ಬಳಸುವುದರ ವಿರುದ್ಧ ದನಿಯೆತ್ತಿ ಕ್ರಿಯಾಶೀಲಳಾದ ಅಂಬೆ ಕಂಡಿದ್ದು ಹೀಗೆ ;

> ....ನಿನ್ನ ನೆನಪಾದಾಗಲೆಲ್ಲ ಮೈ ಪುಳಕ
> ಭೀಷ್ಮ ಪ್ರತಿಜ್ಞೆಯ ಪ್ರಚಂಡ ಝಳಕ್ಕೆ ಸಿಕ್ಕ

ನೀನು ಉರಿದು ಭಸ್ಮವಾಗದೆ
ಉಳಿದು ನಮಗೆ ದಾರಿದೀಪವಾದೆ...
(ಚಂದ್ರಮತಿ ಸೋಂದಾ–ಪ್ರಬುದ್ಧ ಕರ್ನಾಟಕ 72–2)

ಅಂಬೆ ಮಹಿಳೆಯ ಅಸ್ತಿತ್ವವನ್ನು, ಅಸ್ಮಿತೆಯನ್ನು ಉಳಿಸಿಕೊಳ್ಳುವ ಪ್ರತೀಕವಾಗುತ್ತಾಳೆ.

ಸೀತೆಯನ್ನು ಪ್ರಶ್ನಿಸುವ, ಅಂಬೆ, ಕುಂತಿ, ದ್ರೌಪದಿಯರ ಬಗೆಗಿನ ಮೆಚ್ಚಿಗೆಯ ಮೂಲಕ ಪಿತೃಪ್ರಧಾನತೆಯ ಸ್ತ್ರೀಮಾದರಿಗಳನ್ನು ನಿರಾಕರಿಸಿ ಹೊಸಮಾದರಿಗಳನ್ನು ಸೃಷ್ಟಿಸಲಾಗಿದೆ. ಮಹಿಳೆ ಪುರುಷನಿಗೆ ಪೂರಕಳು ಎನ್ನುವುದು ಪಿತೃಪ್ರಧಾನ ಧೋರಣೆ. ಮಹಿಳೆ ಇದನ್ನು ಒಪ್ಪಿಕೊಂಡೇ ಬದುಕುತ್ತ ಬಂದಿದ್ದಾಳೆ. ಈ ಹಿನ್ನೆಲೆಯಲ್ಲಿಯೇ ಸಾಹಿತ್ಯದೊಳಗೆ ಮಹಿಳೆಯ ಪ್ರತೀಕಗಳು ಕೆಲಸಮಾಡುತ್ತವೆ. ಯಾಕೆ ಹೀಗೆ ಎನ್ನುವ ಪ್ರಶ್ನೆಯನ್ನು ಸಾಹಿತ್ಯದ ಪರಿಭಾಷೆಯಲ್ಲಿಯೇ ಕೆಲವು ಕವಯಿತ್ರಿಯರು ಪ್ರಶ್ನಿಸಿದ್ದಿದೆ. ಪುರುಷನಿಷ್ಠೆಗೆ, ನಿರೀಕ್ಷೆಗೆ ಭಿನ್ನವಾದ ಮಾದರಿಗಳ ಹುಡುಕಾಟದಲ್ಲಿ ಪುರುಷದೃಷ್ಟಿ ಯಾವುದನ್ನು ಪಕ್ಕಕ್ಕೆ ತಳ್ಳಿತ್ತೋ ಅದನ್ನು ವಿಭಿನ್ನ ನೆಲೆಯಿಂದ ಗ್ರಹಿಸಿ, ಅರ್ಥೈಸಿ ಹೊಸವ್ಯಾಖ್ಯಾನ ಬರೆಯಲು ಸೃಜನಶೀಲತೆಯನ್ನು ಮಾಧ್ಯಮವಾಗಿ ಬಳಸಲಾಗಿದೆ.

ಎಂದಿನಿಂದಲೂ ಶೀಲ, ಪಾವಿತ್ರ್ಯ, ಪಾತಿವ್ರತ್ಯಗಳ ನೆಲೆಯಿಂದಲೇ ಸಾಹಿತ್ಯ, ಸಮಾಜಗಳು ಮಹಿಳೆಯನ್ನು ಗ್ರಹಿಸಿವೆ.ಸಮಾಜ ನಿರ್ಮಿತ ಚೌಕಟ್ಟಿನೊಳಗೆ ಉಳಿದವಳು ಗರತಿ. ಅದನ್ನು ಮೀರಿದರೆ ಜಾರಿಣಿಯ ಪಟ್ಟ ! ಇದಕ್ಕೆ ಸಂವಾದಿಯಾಗಿ ಪುರುಷವಾಚಕ ಪದದ ಅಗತ್ಯವೇ ಕಾಣಲಿಲ್ಲ. ಒಂದೇ ಸಮಾಜದಲ್ಲಿ ಬದುಕುವ ಸಹಜೀವಿಗಳ ನಡುವೆ ಇಂಥ ತಾರತಮ್ಯವಿರುವುದನ್ನು ಪ್ರಶ್ನಿಸುವ, ಧಿಕ್ಕರಿಸುವ ಪ್ರಯತ್ನದ ಫಲವಾಗಿ ಹಲವು ಕೃತಿಗಳು ರಚನೆಗೊಂಡಿವೆ. ಕೊಲೆ, ಕಳ್ಳತನ ಇನ್ನಿತರ ಅಪರಾಧಗಳಲ್ಲಿ ಸಂತ್ರಸ್ತರಿಗೂ ಜೈವಿಕತೆಗೂ ಸಂಬಂಧವಿರುವುದಿಲ್ಲ. ಅತ್ಯಾಚಾರ ಪ್ರಕರಣಗಳಲ್ಲಿ ಅನ್ಯಾಯಕ್ಕೊಳಗಾದ ಮಹಿಳೆಯೇ ತಪ್ಪಿತಸ್ಥೆ, ಕಳಂಕಿತೆ ಎನ್ನುವ ಭಾವನೆ ಪ್ರಚಲಿತವಾಗಿದೆ. ಅದಕ್ಕೆ ಕಾರಣನಾದ ಗಂಡು ಕಳಂಕಿತನಲ್ಲ. ಆತನ ಶೀಲ (ಗಂಡಿಗೂ ಶೀಲದ ಅಗತ್ಯವಿದೆ ಎಂಬ ಧೋರಣೆಯನ್ನು ಸಮಾಜ ಒಪ್ಪುವುದಿಲ್ಲ) ಅಬಾಧಿತವಾಗಿಯೇ ಉಳಿಯುತ್ತದೆ. ಕಾಮದ ವಿಷಯದಲ್ಲಿ ಗಂಡು–ಹೆಣ್ಣಿಗೆ ಭಿನ್ನ ಅಳತೆ ಗೋಲಿರುವುದನ್ನು, ಮಹಿಳೆಯ ಯೋನಿ ಶುಚಿತ್ವಕ್ಕೆ ಅತ್ಯಂತ ಮಹತ್ವ ನೀಡುವುದನ್ನು ಹಲವಾರು ಲೇಖಕಿಯರು ಪ್ರಶ್ನಿಸಿದ್ದಾರೆ. ಅವಳ ಪಾಲುದಾರಿಕೆಯೇ ಇಲ್ಲದೆ ಅವಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಧೋರಣೆಯನ್ನು ಅಲ್ಲಗಳೆಯುವ, ಅದಕ್ಕೆ ಶಾಕ್ ಕೊಡುವ ರೀತಿಯಲ್ಲಿ ಪ್ರತಿಕ್ರಿಯೆಗಳು ದಾಖಲಾಗಿವೆ.

'ನನ್ನನ್ನು ಸ್ಪರ್ಶಿಸಿ ನಿನಗೆ ಮೈಲಿಗೆಯಾಗಿಲ್ಲವಾದರೆ ನನಗೆ ಏಕೆ ಆಗಬೇಕು?...... ನಿನ್ನ ಸ್ಪರ್ಶದಿಂದ ನನ್ನ ಆರೋಗ್ಯಕ್ಕೆ ಯಾವ ರೀತಿಯ ಧಕ್ಕೆಯೂ ಆಗಿಲ್ಲ. ಒಂದು ವೇಳೆ ಆಗಿದ್ದರೆ ನಿವಾರಿಸಿಕೊಳ್ಳುತ್ತಿದ್ದೆ' (ಲೀಲಾ ಮಣ್ಣಾಲ–ಹೊಣೆ ಮತ್ತು ಇತರ ಕತೆಗಳು, ಪು.40).

'ನಾನೇನೂ ತಪ್ಪೆಸಗದಿದ್ದರೂ ನನ್ನನ್ನು ಕುಲಟೆಯಂತೆ ಕಾಣುವ ಈ ಕೊಳೆತು ನಾರುವ ಪರಿಸರದಲ್ಲಿ ನಾನು ಬದುಕಲಾರೆ, ಅದಕ್ಕೇ ಹೊರಡುತ್ತಿದ್ದೇನೆ' (ಗಂಗಾ ಪಾದೇಕಲ್–ಹೆಜ್ಜೆ ಮೂಡದ ಹಾದಿಯಲ್ಲಿ, ಪು.67).

'ಒಂದು ಕಾಲು ಮುರಿದರೆ ಅವ ಅಸ್ಪೃಶ್ಯನಾಗೋಲ್ಲ. ಈ ಶೀಲ ಅನ್ನೋ ಅಬ್‌ಸ್ಟ್ರಾಕ್ಟ್ ಥಿಂಗ್‌ಗೆ ಎಂಥ ಡೆಫಿನಿಷನ್ ! ನಮ್ಮ ಪಾತ್ರವೇ ಇಲ್ಲದೆ ನಮ್ಮ ಅಪ್ಪಣೆಯೇ ಇಲ್ಲದೆ ಕಳೆದು ಹೋಗಬಹುದಾದರೆ ಅದಕ್ಕೇಕೆ ಅಷ್ಟು ಪ್ರಾಮುಖ್ಯತೆ ?' (ನೇಮಿಚಂದ್ರ–ನಮ್ಮ ಕನಸುಗಳಲ್ಲಿ ನೀವಿದ್ದೀರಿ. ಪು.79)

ವಿಭಿನ್ನ ಸನ್ನಿವೇಶಗಳಲ್ಲಿ ಅತ್ಯಾಚಾರಕ್ಕೊಳಗಾದ ಮಹಿಳೆಯರ ಆಲೋಚನೆಗಳನ್ನು ಈ ಮಾತುಗಳು ಪ್ರತಿಬಿಂಬಿಸುತ್ತವೆ. ಇವರಲ್ಲಿ ಯಾರೂ ಧೈರ್ಯಗುಂದುವುದಿಲ್ಲ. ಅತ್ಯಾಚಾರಕ್ಕೊಳಗಾದರೆ ಬದುಕೇ ಮುಗಿದುಹೋಯಿತು ಎಂದು ತಿಳಿಯುತ್ತಿದ್ದ ಸಂದರ್ಭದಿಂದ 'ಒಂದು ಎಕ್ಸಿಡೆಂಟ್ ಆತು... ಒಂದು ಕೂಸು ಸತ್ತಿತು, ಎಷ್ಟು ಛಂದ ಇತ್ತು ಅಂತೀ. ಸಣ್ಣಕೂಸು' (ಶಾಂತಾದೇವಿ ಕಣವಿ–ಜಾತ್ರೆ ಮುಗಿದಿತ್ತು, ಪು.85) ಎಂದು ತಿಳಿಯುವ ಮಾನಸಿಕ ಸ್ಥಿತಿಗೆ ಬರುವುದು ಸುಲಭದ ಮಾತಲ್ಲ. ಮಹಿಳೆಯ ಮೇಲಿನ ಅತ್ಯಾಚಾರ ದಾಂಪತ್ಯದ ಬದುಕನ್ನು ನಾಶಗೈಯದು ಎನ್ನುವುದನ್ನು ಮುಂದಿನ ಆಲೋಚನೆ 'ಕಾಣಿಸು'ತ್ತದೆ. ಗಂಡನ ಸ್ಪರ್ಶವಾದಾಗ 'ಎಲ್ಲ ಮೊದಲಿನ್ಹಾಂಗ ಆಗ್ತದ; ಏನೇನೂ ಫರಕ ಇಲ್ಲ' ಎಂದು ಅತ್ಯಾಚಾರಕ್ಕೆ ಬಲಿಯಾದ ಮಹಿಳೆಗೆ ಅನಿಸುವುದು ಅತ್ಯಂತ ಆರೋಗ್ಯಕರವಾದ ನಿಲುವು. (ಇನ್ನೊಂದು ಹೆಣ್ಣಿನ ಸಾಂಗತ್ಯ ಗಂಡಿಗೆ ಒಂದು ವಿಶಿಷ್ಟ ಅನುಭವ)

ಪರಪುರುಷನ ಸಂಪರ್ಕವಾದ ಹೆಣ್ಣನ್ನು ನಾಯಿ ಮುಟ್ಟಿದ ಮಡಕೆ ಎಂದು ಪರಿಭಾವಿಸುವ ಸಮಾಜದ ನಡುವೆ ಬೆಳೆಯುವ ಮಹಿಳೆ ಅದರ ಹೊರತಾಗಿ ಆಲೋಚಿಸುವುದು ಸುಲಭವಲ್ಲ. ಸಮಾಜವು ಗಂಡು–ಹೆಣ್ಣಿನ ನಡತೆಯನ್ನು ಭಿನ್ನ ಅಳತೆಗೋಲಿನಿಂದ ಅಳೆಯುತ್ತದೆ ಎನ್ನುವುದು ಅರ್ಥವಾದಾಗ ಅದನ್ನು ಪ್ರಶ್ನಿಸಲು, ನಿರಾಕರಿಸಲು ಸಾಧ್ಯವಾಗುತ್ತದೆ. ಹಳೆಯ ಮೌಲ್ಯವ್ಯವಸ್ಥೆಯನ್ನು ಧಿಕ್ಕರಿಸುವ ಮಹಿಳೆಗೆ ಉಸಿರುಗಟ್ಟುವ ವಾತಾವರಣದಿಂದ ಬಿಡುಗಡೆ ಪಡೆಯಲು ದಾರಿ ಸುಗಮವಾಗುವುದನ್ನು ಇಂಥ ಕೃತಿಗಳು ಅನಾವರಣಗೊಳಿಸುತ್ತವೆ. ಮಹಿಳೆಯ ಲೈಂಗಿಕತೆಯನ್ನು ಪುರುಷಾಧೀನಗೊಳಿಸಿದ್ದನ್ನು ನಿರಾಕರಿಸಿ ಅವಳ ದೇಹದ ಮೇಲಿನ ಹಕ್ಕು ಅವಳದು ಎನ್ನುವುದನ್ನು ಪುನಾಸ್ಥಾಪನೆ ಗೊಳಿಸುವ ದಿಸೆಯಲ್ಲಿ ಈ ಕತೆಗಳು ಗಮಿಸುತ್ತವೆ.

ತಾಯ್ತನ ಹಾಗೂ ಬಂಜೆತನ ಪರಸ್ಪರ ತಳಕು ಹಾಕಿಕೊಂಡ ಸಂಗತಿಗಳು. ಮಹಿಳೆಯ ವಿವಿಧ ಪಾತ್ರಗಳಲ್ಲಿ ತಾಯ್ತನ ಅವಳಿಗೆ ಹೆಚ್ಚಿನ ಮನ್ನಣೆ ನೀಡಿರುವಂಥದು. ಹೆಣ್ಣಿನ ಸಾರ್ಥಕ್ಯ ಇರುವುದೇ ತಾಯ್ತನದಲ್ಲಿ ಎಂದು ಬಿಂಬಿಸುತ್ತ ಬಂದಿರುವುದರಿಂದ ಅವಳೂ ಅದನ್ನು ನಿಜವೆಂದು ತಿಳಿದಿದ್ದಾಳೆ. ಮಗುವಾಗದಿರುವುದಕ್ಕೆ ಮಹಿಳೆಯನ್ನೇ ಬಾಧ್ಯಸ್ಥಳನ್ನಾಗಿ ಮಾಡುವ ಸಮಾಜ ಗಂಡಿನಲ್ಲಿಯೂ ಬಂಜೆತನ ಇರಬಹುದೆಂದು ಭಾವಿಸಿಯೇ ಇರಲಿಲ್ಲ. ತಾಯ್ತನವನ್ನು ವೈಭವೀ ಕರಿಸುವ ವ್ಯವಸ್ಥೆ ವೈವಾಹಿಕ ಪರಿಧಿಯೊಳಗಿನ ತಾಯ್ತನವನ್ನು ಮಾತ್ರ ಒಪ್ಪುತ್ತದೆ. ಸಮಾಜದ ಈ ಇಬ್ಬಂದಿತನವನ್ನು ಪ್ರಶ್ನಿಸುವ ಹಲವು ರಚನೆಗಳಿವೆ. ತಾಯ್ತನಕ್ಕೆ ಎರಡು ರೀತಿಯ ಪ್ರತಿಕ್ರಿಯೆ ವ್ಯಕ್ತವಾಗಿದೆ. ತನ್ನ ದೈಹಿಕ ಅಸಾಮರ್ಥ್ಯದಿಂದ ಮಗುವಾಗದಿರುವಾಗ ಹೆಂಡತಿಯನ್ನು ಹೊಣೆಗಾರಳನ್ನಾಗಿ ಮಾಡುತ್ತ ಬಂದ ಪುರುಷ ಧೋರಣೆಯನ್ನು 'ಜಬಾಲ' (ಎಚ್.ಎಸ್. ಪಾರ್ವತಿ) ಮತ್ತು 'ಇನ್ನೊಂದೇ ಅಧ್ಯಾಯ' (ಗಂಗಾ ಪಾದೇಕಲ್) ಕಾದಂಬರಿಗಳ ನಾಯಕಿಯರು ಅಲ್ಲಗಳೆಯುತ್ತಾರೆ. ತಮ್ಮಲ್ಲಿರುವ ನ್ಯೂನತೆಯನ್ನು ಹೆಂಡತಿ, ಕುಟುಂಬ ಮತ್ತು ಸಮಾಜಕ್ಕೆ ತಿಳಿಯದಂತೆ ಗಂಡಸು ಜತನದಿಂದ ಮುಚ್ಚಿಟ್ಟುದಕ್ಕೆ ಪ್ರತಿಯಾಗಿ ಬೇರೆ ವ್ಯಕ್ತಿಯಿಂದ ಗರ್ಭಧರಿಸುವ ಮಹಿಳೆಗೆ ಶೀಲದ ಪ್ರಶ್ನೆ ಕಾಡುವುದಿಲ್ಲ.

'ಮಗು ಹೆರುವುದು ಹೆಂಗಸಿನ ಜನ್ಮಸಿದ್ಧ ಹಕ್ಕು' ಎಂದು ತನ್ನ ಬಸಿರಲ್ಲಿರುವ ಮಗುವಿಗೆ ಕಾರಣನಾದವನಿಗೆ ಹೇಳುವ ನಾಯಕಿ 'ಇಷ್ಟೊಂದು ಸಂತೃಪ್ತಿಯ ಭಾವವನ್ನು ತನ್ನಲ್ಲಿ ಉಂಟು ಮಾಡುತ್ತಿರುವ ಈ ಮಗುವಿನ ಹುಟ್ಟು ತಪ್ಪು ಹೇಗಾದೀತು ?' (ವೀಣಾ ಶಾಂತೇಶ್ವರ-ಪೂರ್ವೋಕ್ತ ಪು. 16,18) ಎಂದು ಯೋಚಿಸುತ್ತಾಳೆ. 'ಬದುಕಿನ ಸಂಘರ್ಷಗಳು ಮೌನವನ್ನು ಮುರೀತವೆ, ಮೌಲ್ಯಗಳನ್ನು ನುಂಗ್ತವೆ.....' 'ಹೆಣ್ತನ ಗೆದ್ದಷ್ಟು ಸುಲಭವಾಗಿ ನನಗೆ ತಾಯ್ತನವನ್ನು ಗೆಲ್ಲಲಿಕ್ಕೆ ಆಗಲೇ ಇಲ್ಲ' (ಎಂ.ಎಸ್. ವೇದಾ-ಪಾಲು, ಪು.93) ಎಂದು ಯೋಚಿಸುವ ಮಹಿಳೆಗೆ ವಿವಾಹಕ್ಕು ತಾಯ್ತನಕ್ಕು ಇರುವ ಸಂಬಂಧ ಮುಖ್ಯ ಎನಿಸುವುದೇ ಇಲ್ಲ. 'ನನಗೆ ಕುಂತಲ್ಲಿ ನಿಂತಲ್ಲಿ ಕಾಲಿಗೆ ತೊಡರಿಕೊಳ್ಳೋ ನಂದು ಅನ್ನದೊಂದು ಬೇಕಾಗಿತ್ತು' (ಭಾಗೀರಥಿ ಹೆಗಡೆ-ಪ್ರವಾಹ, ಪು.78) ಎಂದು ಮಗುವನ್ನು ಪಡೆದ ಮಹಿಳೆಗೆ ಅವಳ ಅಗತ್ಯವನ್ನು ಪೂರೈಸಿಕೊಳ್ಳುವುದರಲ್ಲಿ ತಪ್ಪಿಲ್ಲ ಎನಿಸಿದೆ. 'ಆ ದನ ಹ್ಯಾಂಗ್ ಕರು ಹಾಕಿತೆಂದು, ಈ ತೆಂಗು ಹ್ಯಾಂಗ್ ಕಾಯಿ ಬಿಟ್ಟಿತೆಂದು, ಒಂದು ಕುನ್ನಿಗೊಡ್ಡೂ ಕೂಡ ತನ್ನ ಮರಿಗಳನ್ನು ಮುಚ್ಚಿಟ್ಟು ಯಾಕೆ ಮೊಲೆಯುಣಿಸುತ್ತದೆಂದು, ಅವಕ್ಕೆಲ್ಲ ಅಪ್ಪ ಯಾರೆಂದು ಹೇಗೆ ಹೇಳೋದು ?' (ಅದೇ ಪು.77) ತಾಯ್ತನ ಪ್ರಕೃತಿ ಸಹಜವಾದ್ದು ಎನ್ನುವುದಾಗಿ ಕೃತಿ ಪ್ರತಿಪಾದಿಸುತ್ತದೆ. ತಾಯಿಯಾಗಬೇಕು ಎನ್ನುವ ಆಕಾಂಕ್ಷೆ ಎಲ್ಲ ಮಹಿಳೆಯರಲ್ಲಿಯೂ ಇರಲೇಬೇಕು ಎನ್ನುವ ನಿರೀಕ್ಷೆ ಎಷ್ಟು ಸರಿ ಎನ್ನುವ ಜಿಜ್ಞಾಸೆಯನ್ನು 'ಹೊಸಹುಟ್ಟು' ಕತೆ ಹುಟ್ಟುಹಾಕುತ್ತದೆ. 'ತಾಯ್ತನ ಹೊರುವ ಹೆರುವ ಕ್ರಿಯೆಯಲ್ಲಿ ಅಡಗಿಲ್ಲ' (ನೇಮಿಚಂದ್ರ-ಮತ್ತೆ ಬರೆದ ಕತೆಗಳು, ಪು.114) ಎನ್ನುವ ತಾತ್ವಿಕತೆ ಮಹಿಳೆಯ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಸಹಾಯಕ.

ಪಿತೃಪ್ರಧಾನತೆಯ ಧೋರಣೆಯನ್ನು ಒಪ್ಪಿ ಅದರ ರಕ್ಷಣೆಯಲ್ಲಿಯೇ ಬೇರೆ ಗಂಡಸಿನಿಂದ ಮಗುವನ್ನು ಪಡೆಯುವುದು ಒಂದು ನೆಲೆಯಾದರೆ, ತಾಯ್ತನದ ಹಕ್ಕು ಮಹಿಳೆಯದು ಎನ್ನುವ ಪ್ರತಿಪಾದನೆ ಹಾಗೂ ಸಂಪೂರ್ಣವಾಗಿ ತಾಯ್ತನದ ನಿರಾಕರಣೆ ಇನ್ನೊಂದು ನೆಲೆಯದು. ಹೀಗೆ ಮಹಿಳೆ ಪಿತೃಪ್ರಧಾನತೆಗೆ ತೋರಿದ ಪ್ರತಿಭಟನೆಯ ಸ್ವರೂಪ ಭಿನ್ನವಾಗಿದೆ.

ಸಾಮಾನ್ಯ ಮಹಿಳೆಯರು ಬದುಕಿನಲ್ಲಿ ಎದುರಾದ ಸಂಘರ್ಷವನ್ನು ಧೃತಿಗೆಡದೆ ಎದುರಿಸುವ ರೀತಿಯಲ್ಲಿಯೇ ಮಹಿಳೆಯ ಅಸ್ತಿತ್ವವಿದೆ ಎನ್ನುವುದನ್ನು ಕತೆಯ ವಿನ್ಯಾಸವೇ ಸೂಚಿಸುವ 'ಗಾಂಧಿಬಂದ' ಹಾಗೂ 'ದ್ವಿತ್ವ' ಕಾದಂಬರಿಗಳು ವಿಶಿಷ್ಟ ರಚನೆಗಳು. (ಕ್ರಮವಾಗಿ ನಾಗವೇಣಿ, ಆರ್. ಸುನಂದಮ್ಮ) ಇಲ್ಲಿನ ಸ್ತ್ರೀಯರ ಗಟ್ಟಿತನ ಮಾದರಿಯಾಗು ವಂಥದು. ಗಾಂಧಿಬಂದ ಕೃತಿ ಕಾರಂತರ ಮಾದರಿಯನ್ನು ಅನುಸರಿಸಿ ದರೆ, ದ್ವಿತ್ವದ ಸ್ತ್ರೀಯರು ಮೇಲುನೋಟಕ್ಕೆ ಜಗಳಗಂಟಿಯರಂತೆ ಕಂಡರೂ ತಮ್ಮ ಬದುಕಿನಲ್ಲಿ ನೆಲೆ ಕಂಡುಕೊಳ್ಳಲು ಪ್ರಯತ್ನಿಸುವಂಥವರು. ತಲೆಮಾರಿನ ಅಂತರದಲ್ಲಿ ಮಹಿಳೆ ಬದಲಾಗುತ್ತಿರುವುದನ್ನು ವೈದೇಹಿ ಯವರ 'ಒಂದು ಅಪರಾಧ ತನಿಖೆ', 'ಸೌಗಂಧಿಯ ಸ್ವಗತ', 'ಗುಲಾಬಿ ಟಾಕೀಸು....' ಮುಂತಾದ ಕತೆಗಳು ದಾಖಲಿಸುತ್ತವೆ. ಮಹಿಳೆಯನ್ನು ಪಿತೃಪ್ರಧಾನ ಮೌಲ್ಯಗಳು ಬಂಧಿಸಿಟ್ಟಿರುವುದನ್ನು ಪ್ರಶ್ನಿಸುವ ಹಾಗೂ ಪ್ರತಿಭಟಿಸುವಷ್ಟಕ್ಕೆ ಮಹಿಳೆಯರ ಕೃತಿಗಳು ಸೀಮಿತವಾಗುವುದಿಲ್ಲ. 'ನಾನೇಕೆ ಬಳ್ಳಿ ನೀನೇಕೆ ಮರ ?' ಎನ್ನುವ ಪ್ರಶ್ನೆಯ ಮೂಲಕ ಗಂಡು ಹೆಣ್ಣಿನ ಸಂಬಂಧದ ಹೋಲಿಕೆಯನ್ನು ನಿರಾಕರಿಸಿ 'ಗಾಳಿ ಬೀಸಿದಾಗ ಅಸ್ತಿತ್ವಕ್ಕಾಗಿ ಹೋರಾಡಿದ ಗಿಡಗಳು' ಹಾಗೂ 'ಹೊಸ ಬಾಳಲಿ ಇರಬೇಕು ಹೊರೆ ನಿನಗು ಅವಗು ಸಮಗೆ' ಎನ್ನುವ ಸಮಾನತೆಯ ಪರಿಕಲ್ಪನೆಯನ್ನು ಪ್ರತಿಪಾದಿಸಲಾಗಿದೆ.

ನಾವು ರೇಣುಕೆಯರು
ನಿಂತ ನೀರಲ್ಲಿ
ಪರಪುರುಷನ ನೆರಳು ಕಂಡೇ
ಅಪವಿತ್ರರಾದವರು
ಪರಶುರಾಮನ ಕೊಡಲಿ ಏಟಿಗೆ
ಸತ್ತವರು ಮತ್ತೆ ಹುಟ್ಟಿದವರು

ಎನ್ನುವ ಎಚ್ಚರದಿಂದ ಸೃಜನಶೀಲತೆಗೆ ತೊಡಗಿದುದೇ ಮಹಿಳೆಯರ ದೃಷ್ಟಿಯಿಂದ ಒಂದು ಸಾಧನೆ. ಮಹಿಳಾ ಚಳವಳಿಯ ಚಿಂತನೆಗಳು ಮಹಿಳಾಸಾಹಿತ್ಯ ಕೃತಿಗಳಲ್ಲಿ ಪಡಿಮೂಡಿವೆ. ಮಹಿಳೆಯರ ಬರವಣಿಗೆ ಗಳು ಸಾಹಿತ್ಯಿಕ ಪರಿಸರದಲ್ಲಿ ಮಹಿಳೆಯ 'ದನಿ'ಯನ್ನು ಕೇಳುವ ಅಗತ್ಯವಿದೆ ಎನ್ನುವ ಭಾವನೆಯನ್ನು ಸೃಷ್ಟಿಸಿದ್ದು ಸಣ್ಣ ಮಾತಲ್ಲ. ಶತಮಾನಗಳಿಂದ ಅವಳಿಗೆ ಬಾಯಿ ಇಲ್ಲದಂತೆ ಮಾಡಿದ ಚರಿತ್ರೆಯ ನ್ಯೂನತೆಯನ್ನು ಕಾಣಿಸುವ ದಿಸೆಯಲ್ಲಿ ಅವು ಸಾಕಷ್ಟು ಪರಿಣಾಮ ಬೀರಿವೆ. ❑



ಸ್ವತಂತ್ರ ಭಾರತದಲ್ಲಿ ಮಹಿಳಾ ಉದ್ಯೋಗ : ಒಂದು ವಿಶ್ಲೇಷಣೆ

ಎನ್.ಎಸ್. ಶ್ರೀಧರಮೂರ್ತಿ

'ದುಡಿಯುವುದು' ಒಂದು ಆರ್ಥಿಕ ಘಟಕವಾಗಿ ವಿಶ್ಲೇಷಿಸಿದರೆ ಅದರ ವ್ಯಾಪ್ತಿಯಲ್ಲಿ ಮಹಿಳೆ ಮನೆಯಲ್ಲಿ ಮಾಡುವ ಎಲ್ಲಾ ಕೆಲಸಗಳು ಬರುತ್ತವೆಯಾದ್ದರಿಂದ ಮಹಿಳಾ ಉದ್ಯೋಗ ಹೊಸ ಕಲ್ಪನೆ ಅಲ್ಲದಿರ ಬಹುದು. ಆದರೆ ಉತ್ಪಾದನಾ ನೆಲೆಯಲ್ಲಿ ನೋಡಿದಾಗ ಉದ್ಯೋಗದ ಅರ್ಥ ಆರ್ಥಿಕ ಪ್ರತಿಫಲದಿಂದಲೇ ನಿರ್ಣಯಿತವಾಗುವುದರಿಂದ ಸ್ವತಂತ್ರ ಭಾರತದಲ್ಲಿ ಮಹಿಳೆ ಉದ್ಯೋಗಸ್ಥೆಯಾಗುವುದು ಒಂದು ಸಂಕೀರ್ಣ ಪ್ರಕ್ರಿಯೆ. 50-60ರ ದಶಕದಲ್ಲಿ ಹೆಣ್ಣು ವಿದ್ಯಾವಂತೆಯಾಗುವುದೇ ಪ್ರಗತಿಯ ಹೆಗ್ಗುರುತು ಎನ್ನುವ ಮಾತಿತ್ತು. (ಇದಕ್ಕೆ ತ್ರಿವೇಣಿಯವರ ಕಾದಂಬರಿಗಳ ಪಾತ್ರಗಳನ್ನು ಉದಾಹರಣೆಯಾಗಿ ನೋಡಬಹುದು) ಅನಂತರ ಉದ್ಯೋಗಸ್ಥಳಾಗುವುದು ಪ್ರಗತಿಯ ಹೆಗ್ಗುರುತಾಯಿತು. ಈಗ ಅದು ಅನಿವಾರ್ಯ ಆಗಿ ಬದಲಾಗುತ್ತಿದೆ. ಮಹಿಳಾ ಉದ್ಯೋಗದ ಪ್ರಮಾಣ ಒಟ್ಟು ಉದ್ಯೋಗದ ಶೇಕಡಾವಾರು ಪರಿಣಾಮದಲ್ಲಿ ಬೆಳವಣಿಗೆ ಕಂಡಿರುವುದನ್ನು ಗಮನಿಸಿದಾಗ ಇದರ ಪ್ರಾಮುಖ್ಯದ ಅರಿವಾಗುತ್ತದೆ.

ಕರ್ನಾಟಕದಲ್ಲಿ ಮಹಿಳಾ ಉದ್ಯೋಗ ಬೆಳವಣಿಗೆ

ವರ್ಷ	ಒಟ್ಟು ಉದ್ಯೋಗದಲ್ಲಿ ಮಹಿಳೆಯ ಪಾಲು (ಶೇ.)
1972-82	3.6
1982-92	7.8
1992-02	14.9
2002-06	16.1
2015ರ ಅಂದಾಜು	35.2

ಮಾಹಿತಿ : ರಾಷ್ಟ್ರೀಯ ಮಾನವ ಹಕ್ಕು ಸೂಚ್ಯಂಕ

ಈ ಕೋಷ್ಟಕ ನೋಡಿದಾಗ ಪ್ರತಿ ದಶಕದಲ್ಲೂ ಮಹಿಳಾ ಉದ್ಯೋಗದ ಪ್ರಮಾಣ ದ್ವಿಗುಣವಾಗುತ್ತ ಹೋಗಿರುವುದನ್ನು ಗಮನಿಸ ಬಹುದು. ಇದಕ್ಕಿರುವ ಪ್ರಮುಖ ಕಾರಣಗಳಲ್ಲಿ ಒಟ್ಟು ಕುಟುಂಬಗಳು ಮಾಯವಾಗಿ ಚಿಕ್ಕ ಕುಟುಂಬಗಳು ರೂಪುಗೊಂಡಿದ್ದು, ನಗರದತ್ತ ವಲಸೆ ಹೆಚ್ಚಾಗಿದ್ದು ಮತ್ತು ಮಹಿಳೆಯರ ವಿದ್ಯಾಭ್ಯಾಸ ಪ್ರಮಾಣದಲ್ಲಿ ಏರಿಕೆ ಕಂಡುಬಂದಿದ್ದು ಮುಖ್ಯವಾಗಿವೆ. ಚಿಕ್ಕ ಕುಟುಂಬಗಳನ್ನು ಮುನ್ನಡೆಸಲು ಹೆಣ್ಣು ಉದ್ಯೋಗಸ್ಥೆಯಾಗಲೇ ಬೇಕಾದ ಅನಿವಾರ್ಯತೆ ಈಗ ಉಂಟಾಗಿದೆ. ಹೆಣ್ಣಿನ ಉದ್ಯೋಗ ಎನ್ನುವಾಗ ಸಮಸ್ಯೆಗಳು ಹೆಚ್ಚು ಸಂಕೀರ್ಣ ಸ್ವರೂಪ ಪಡೆಯುತ್ತ ಹೋಗಿರುವುದನ್ನು ನಾವು ಗಮನಿಸಬೇಕು.

ಅ) ಹೆಣ್ಣು ಉದ್ಯೋಗಸ್ಥೆಯಾದ ಕೂಡಲೇ ಅವಳ ಗೃಹಕೃತ್ಯದಲ್ಲಿ ಯಾವ ಸಹಕಾರವೂ ಸಿಗುವುದಿಲ್ಲ. ಒಳ-ಹೊರಗೆ ಎರಡೂ ಕಡೆ ದುಡಿಯಬೇಕಾದ ಅನಿವಾರ್ಯತೆ ಹೆಣ್ಣಿನದು. ಬೆಳಗ್ಗೆ ಬಹುಬೇಗ ಎದ್ದು ಮನೆ ಕೆಲಸಗಳನ್ನೆಲ್ಲ ಪೂರೈಸಿ, ಮಗುವನ್ನು ಬೇಬಿ ಸಿಟ್ಟಿಂಗ್‌ಗೆ ಬಿಟ್ಟು, ಕಚೇರಿ ತಲುಪಿ ಮತ್ತೆ ಸಂಜೆ ಮಗುವನ್ನು ಕರೆ ತಂದು ಅದರ ಅವಶ್ಯಕತೆಗಳನ್ನೆಲ್ಲ ಪೂರೈಸಿ ಜೊತೆಗೆ ಗೃಹಕೃತ್ಯವನ್ನೂ ಸಂಭಾಳಿಸಿಕೊಂಡು ಹೋಗುವ ಅನಿವಾರ್ಯತೆ ಅವಳದು. ಬಹುತೇಕ ಗಂಡಂದಿರು ಹೆಂಡತಿಯ ಸಂಪಾದನೆ ಯತ್ತ ಆಸಕ್ತರೇ ಹೊರತು ಅವಳಿಗೆ ಹೆಚ್ಚಿನ ಹೊರೆ ಬೀಳುತ್ತಿದೆ ಎಂಬುದರ ಕುರಿತು ಅಷ್ಟಾಗಿ ತಲೆಕೆಡಿಸಿ ಕೊಂಡವರಲ್ಲ. ಮನೆ ಯಲ್ಲಿರುವ ಅತ್ತೆಯಂದಿರು ನಮಗೂ ವಯಸ್ಸಾಯಿತು ಇನ್ನೆಷ್ಟು ದಿನ ಮನೆಕೆಲಸ ಮಾಡಬೇಕು ಎಂದು ಗೊಣಗುತ್ತಾರೆ. ದುಡಿಯು ತ್ತಾಳೆ ಎಂದರೆ ಯಾರ ಅನುಕೂಲಕ್ಕಾಗಿ ದುಡಿಯುತ್ತಾಳೆ, ತನ್ನ ಸಂಸಾರಕ್ಕೆ ತಾನೆ ಎಂದು ಕೊಂಕು ತೆಗೆಯುತ್ತಾರೆ. ಇದರಿಂದ ಹೆಣ್ಣಿನ ಸ್ಥಿತಿ ಬೆಂಕಿಯಿಂದ ಬಾಣಲೆಗೆ ಬಿದ್ದಂತಾಗಿದೆ.

ಆ) ಸ್ತ್ರೀ ಉದ್ಯೋಗ ಎಂದ ಕೂಡಲೆ ಎಲ್ಲಾ ಸ್ತರದಲ್ಲೂ ಅದು ಪೂರಕ ಉದ್ಯೋಗ ಎಂಬುದೇ ನಂಬಿಕೆ. ಗಂಡನ ಸಂಪಾದನೆಗೆ ಅವಳದು ಅಗತ್ಯ ಪೂರೈಸುವ ಸಂಪಾದನೆಯಾದ್ದರಿಂದ ಕಡಮೆ ಸಂಬಳ ನೀಡಬಹುದು ಎಂಬುದು ಗ್ರಹಿಕೆ. ಈ ಅರ್ಥದಲ್ಲೇ ನಮ್ಮ ಬಹುತೇಕ ಮಹಿಳೆಯರು ಕಡಮೆ ಸಂಬಳವನ್ನು ಸಂಸಾರದ ಅಗತ್ಯಕ್ಕಾಗಿ ಒಪ್ಪಿಕೊಳ್ಳುತ್ತಿದ್ದಾರೆ. ಸಂಬಳ ಕಡಮೆಯಾದರೂ ಕೆಲಸದಲ್ಲೇನು ರಿಯಾಯಿತಿ ಸಿಗುವುದಿಲ್ಲ. ಹೀಗಾಗಿ ಮಹಿಳಾ ಉದ್ಯೋಗವೆಂಬುದೇ ಪ್ರಚ್ಛನ್ನ (Disguised) ಉದ್ಯೋಗ ವಾಗಿದೆ.

ಇ) ಸಾಮಾನ್ಯವಾಗಿ ಮಹಿಳೆಯರು ಉದ್ಯೋಗ ಮಾಡುವ ಘಟಕ ಗಳೆಲ್ಲವೂ ಅಸಂಘಟಿತವಾದದ್ದು. ಇದರಿಂದ ಸರ್ಕಾರದ ಯಾವ ಪರಿಹಾರಗಳೂ ಮಹಿಳೆಯರಿಗೆ ಸಿಕ್ಕುವುದಿಲ್ಲ. ಉದಾಹರಣೆಗೆ ದೇಶದ ಪ್ರಮುಖ ಸ್ವ-ಉದ್ಯೋಗ ಕಾರ್ಯಕ್ರಮವಾದ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ (IRDP) ಅಡಿ ಲಾಭ ಪಡೆದ ಮಹಿಳೆಯರ ಸಂಖ್ಯೆ ಶೇ. 10ಕ್ಕಿಂತ ಕಡಮೆ ಇದೆ. ಹಾಗೆ ಸ್ವರ್ಣಜಯಂತಿ ಗ್ರಾಮ ಸ್ವ-ಉದ್ಯೋಗ ಯೋಜನೆಯಡಿ (SGSY) ಲಾಭ ಪಡೆದವರ ಸಂಖ್ಯೆ ಶೇ. 6ರಷ್ಟಿದೆ. ಇಲ್ಲೆಲ್ಲ ಮಹಿಳೆಯರಿಗೆ ಈ ಯೋಜನೆಗಳ ಲಾಭ ತಲುಪಿಸುವ ಪ್ರಯತ್ನ ಕೂಡ ನಡೆದಿಲ್ಲ ಎಂಬುದನ್ನು ನಾವು ಎಚ್ಚರಿಕೆಯಿಂದ ಪರಿಶೀಲಿಸ ಬೇಕು.

ಮಹಿಳಾ ಉದ್ಯೋಗವೆಂದರೆ ಯಾವುದು

ಸಾಮಾನ್ಯವಾಗಿ ಮಹಿಳೆಯರು ನಿರ್ವಹಿಸುವ ಉದ್ಯೋಗವನ್ನು ಮೂರು ಘಟಕಗಳಾಗಿ ವಿಂಗಡಿಸಬಹುದು.

ಅ) ಕೆಳಸ್ತರ ಅಥವಾ ಗ್ರಾಮೀಣ ಉದ್ಯೋಗಗಳು

ಇದು ಸಾಮಾನ್ಯವಾಗಿ ಕೂಲಿಕೆಲಸಗಳಾಗಿರುತ್ತವೆ. ಇಲ್ಲಿ ಗಂಡಾಳಿನ ಅರ್ಧದಷ್ಟು ಹೆಣ್ಣಾಳಿಗೆ ಎಂಬ ಕಲ್ಪನೆ ಎಂದಿನಿಂದಲೂ ಜಾರಿ ಯಲ್ಲಿದೆ. ಈಗ ಕೊಂಚ ವ್ಯತ್ಯಾಸವಾದರೂ ಸರಿಸಮವಾಗಂತು

ಬಂದಿಲ್ಲ. ಈ ಮಹಿಳೆಯರ ಸಂಪಾದನೆಯೆಲ್ಲ ಗಂಡಂದಿರ ಕುಡಿತಕ್ಕೆ ಹೋಗುವುದೇ ಹೆಚ್ಚು. ಜೊತೆಗೆ ಮಾಲಿಕರ ಕಾಮುಕ ಕಣ್ಣುಗಳ ಕೆಳಗೆ ಕೆಲಸ ಮಾಡಬೇಕಾದ ಅನಿವಾರ್ಯತೆ ಅವರದು. ಹೆಣ್ಣಾಳುಗಳು ಮಾಡುವ ಕೆಲಸಗಳಲ್ಲಿ ಶ್ರಮದ ಕೆಲಸಗಳು ಸಾಕಷ್ಟಿರುತ್ತವೆ. ಇವುಗಳ ನಿರ್ವಹಣೆ ಹೆಣ್ಣಿನ ಋತು ಸಂದರ್ಭದಲ್ಲಿ ಕಷ್ಟ, ಆದರೆ ಅನಿವಾರ್ಯ ಎಂಬಂತಹ ಪರಿಸ್ಥಿತಿ ಇರುತ್ತದೆ. ಗ್ರಾಮೀಣ ಮಹಿಳೆಯರಿಗೆ ಅನುಕೂಲಕರವಾದದ್ದು ಕಚ್ಚಾ ವಸ್ತು ನಿರ್ಮಾಣ ಕೆಲಸಗಳು, ಬೀಡಿಕಟ್ಟುವುದು, ಹಪ್ಪಳ-ಸಂಡಿಗೆ ತಯಾರಿಸುವುದು, ಹೂವು ಕಟ್ಟುವುದು ಇತ್ಯಾದಿ. ಲಿಜ್ಜತ್-ಪಪ್ಪಡ್‌ನ ಯಶಸ್ಸಿನ ಉದಾಹರಣೆ ನಮ್ಮ ಕಣ್ಣ ಮುಂದೆಯೇ ಇದೆ. ಆದರೆ ಜಾಗತೀಕರಣದ ಹಿಡಿತದ ಪರಿಣಾಮ ಇದರಲ್ಲಿ ಕುಸಿತಗಳು ಕಾಣುತ್ತಿದ್ದು, ಈ ಆಯ್ಕೆ ಕೂಡ ದೂರವಾಗುತ್ತಿದೆ. ಮನೆಕೆಲಸದವರಾಗಿ ದುಡಿಯುವ ಮಹಿಳೆಯರು ನಗರಪ್ರದೇಶದಲ್ಲಿ ಸಾಕಷ್ಟಿದ್ದಾರೆ. ವೇತನದಿಂದ ಹಿಡಿದು ಉದ್ಯೋಗ ಖಾತ್ರಿಯವರೆಗೆ ಯಾವ ರಕ್ಷಣೆಯೇ ಇಲ್ಲದ ಅತಂತ್ರ ಸ್ಥಿತಿ ಇವರದಾಗಿದೆ.

ಆ) ಮಧ್ಯಮ ವರ್ಗದವರ ಉದ್ಯೋಗಗಳು

70ರ ದಶಕದಲ್ಲಿ ವಿದ್ಯಾವಂತರಾದ ಬಹುತೇಕ ಮಹಿಳೆಯರು ಬಯಸಿದ್ದು, ಪಡೆದಿದ್ದು ಉಪಾಧ್ಯಾಯಿನಿಯರ ಕೆಲಸ. ಆರಂಭದಲ್ಲಿ ಇದೊಂದು ಗೌರವದ ಮತ್ತು ಸುರಕ್ಷಿತ ಉದ್ಯೋಗ ಎನ್ನಿಸಿತ್ತು. ಇದರಿಂದ ಎಷ್ಟೋ ಕುಟುಂಬಗಳಿಗೆ ಆಧಾರ ಸಿಕ್ಕಿದ್ದೂ ನಿಜ. ಆದರೆ ಕ್ರಮೇಣ ಈ ಪರಿಸ್ಥಿತಿ ಬದಲಾಯಿತು. ಸರ್ಕಾರಿ ಉದ್ಯೋಗದಲ್ಲಿ ವರ್ಗಾವಣೆಯ ತೂಗುಕತ್ತಿ ಸದಾ ನೇತಾಡುತ್ತಿತ್ತು. ಇದಕ್ಕೆ ಲಕ್ಷಾಂತರ ರೂ. ವ್ಯಯಿಸಬೇಕಾದ ಸ್ಥಿತಿ ಬಂದಿತು. ಇನ್ನು ಶಾಲೆಗಳಲ್ಲಿ ನಿರ್ವಹಣಾ ಸಮಿತಿಯವರ ಕಿರುಕುಳ ಎದುರಿಸಬೇಕಾಯಿತು. ವೇತನದಲ್ಲಿ ಕಾಣದ ಕೈಗಳ ಕಿರುಕುಳ ಇರುತ್ತಿತ್ತು. ಖಾಸಗಿ ಶಾಲೆಗಳಲ್ಲಿ ಪರಿಸ್ಥಿತಿ ಇನ್ನೂ ವಿಷಮ. ವೇತನವೇ ದೊರಕದಂತಹ ಸ್ಥಿತಿ. ಜೊತೆಗೆ ಸದಾ ಆಡಳಿತ ಮಂಡಳಿಯ ಕಿರುಕುಳ. ಮಧ್ಯಮ ವರ್ಗದ ಮಹಿಳೆಯರಿಗೆ ಉದ್ಯೋಗ ಲಭಿಸಿದ ಇನ್ನೊಂದು ಕ್ಷೇತ್ರವೆಂದರೆ ಬ್ಯಾಂಕಿಂಗ್ ಮುಂತಾದ ಕ್ಷೇತ್ರದಲ್ಲಿರುವ ಗುಮಾಸ್ತರ ಹುದ್ದೆಗಳು. ಇಲ್ಲಿ ಕೂಡ ಪರಿಸ್ಥಿತಿ ಅಷ್ಟಾಗಿ ಬದಲಾಗಲಿಲ್ಲ. ಪ್ರಮುಖವಾಗಿ ಗಮನಿಸಬೇಕಾದ ಇನ್ನೆರಡು ಕ್ಷೇತ್ರವೆಂದರೆ ಕೆಳಮಧ್ಯಮ ವರ್ಗದವರಿಗೆ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಒದಗಿಸುತ್ತಿರುವ ಗಾರ್ಮೆಂಟ್ ಮತ್ತು ನರ್ಸಿಂಗ್ ಕ್ಷೇತ್ರಗಳು. ಒಂದು ಕಾಲದಲ್ಲಿ ಗಾರ್ಮೆಂಟ್‌ಗಳು ಎಷ್ಟೋ ಮಧ್ಯಮ ವರ್ಗದ ಕುಟುಂಬಗಳಿಗೆ ಆರ್ಥಿಕ ಭದ್ರತೆ ಒದಗಿಸಿದ್ದಿದೆ. ಅಲ್ಲಿ ಸಂಘಟನೆಯ ಸಮಸ್ಯೆ ಇದ್ದರೂ ಒಟ್ಟಾಗಿ ಇದ್ದೇವೆ ಎಂಬ ಆತ್ಮವಿಶ್ವಾಸ ಮಹಿಳೆಯರಲ್ಲಿತ್ತು. ಈಗ ಜಾಗತೀಕರಣದಿಂದ ಈ ಕ್ಷೇತ್ರ ಕುಸಿದು ಸಾವಿರಾರು ಕುಟುಂಬಗಳು ಬೀದಿ ಪಾಲಾಗುತ್ತಿವೆ. ಸೇವಾ ಕ್ಷೇತ್ರದಲ್ಲಿ ಹೆಚ್ಚಿನ ಮಹಿಳೆಯರಿಗೆ ಉದ್ಯೋಗ ನೀಡುತ್ತಿರುವುದು ನರ್ಸಿಂಗ್ ಕ್ಷೇತ್ರ, ಆದರೆ ಇದನ್ನು ಕನ್ನಡಿಗರು ಎಂದಿಗೂ ಗಂಭೀರವಾಗಿ ಪರಿಗಣಿಸಿಯೇ ಇಲ್ಲ. ಇಲ್ಲಿ ಉದ್ಯೋಗ ಅವಕಾಶ ಪಡೆಯುತ್ತಿರುವವರಲ್ಲಿ ಪರರಾಜ್ಯಗಳವರದ್ದೇ ಮೇಲುಗೈ. ಇಲ್ಲಿ ಕೂಡ ಸಮಸ್ಯೆ ವೇತನದ್ದೇ. ದುಡಿಯುವ ವೇಳೆಗೆ ಮಿತಿಯೇ ಇಲ್ಲದ ಈ ತಾಣದಲ್ಲಿ ಅರ್ಧ ಸಂಬಳವೂ ಸಿಕ್ಕುತ್ತಿಲ್ಲ. ಅನಿವಾರ್ಯವಾದ ರಾತ್ರಿ ಪಾಳಿಗಳಲ್ಲಿ ಅಪಾಯದ ಸಾಧ್ಯತೆ ಇದ್ದೇ ಇರುವ ಭಯ. ಉಳಿದಂತೆ ಈಗ ಬಸ್ ಕಂಡಕ್ಟರ್‌ಗಳಾಗಿ, ಆಟೋ ಡ್ರೈವರ್‌ಗಳಾಗಿ ವಿವಿಧ ಕ್ಷೇತ್ರಕ್ಕೆ ಮಹಿಳೆಯರು ನುಗ್ಗುತ್ತಿದ್ದಾರೆ. ಅದೆಲ್ಲ ಅಪವಾದವಾಗುತ್ತಿದೆಯೇ ಹೊರತು ಚಳವಳಿಯಾಗುತ್ತಿಲ್ಲ. ಮಹಿಳಾ ಉದ್ಯೋಗದಲ್ಲಿ ಅಭದ್ರತೆ ಕಾಡುತ್ತಿದ್ದರೂ ಮಧ್ಯಮವರ್ಗದವರಿಗೆ ಉದ್ಯೋಗ ಅನಿವಾರ್ಯವಾಗುತ್ತಿದೆ. ಈ ಅಂಶವನ್ನು ಯಾವ ಸರ್ಕಾರಗಳೂ ಗಂಭೀರವಾಗಿ ಪರಿಗಣಿಸದಿರುವುದು ವಿಪರ್ಯಾಸಕರ.

ಇ) ಉನ್ನತ ಅಥವಾ ಮೇಲ್ವರ್ಗದವರ ಉದ್ಯೋಗ

ಇವತ್ತು ಮಹಿಳೆಯರು ಹಲವು ಉನ್ನತ ಉದ್ಯೋಗಗಳನ್ನು ನಿರ್ವಹಿಸುತ್ತಿದ್ದಾರೆ. ಜಿಲ್ಲಾಧಿಕಾರಿ, ಪೊಲೀಸ್ ಮುಖ್ಯಸ್ಥರು, ವಿಜ್ಞಾನಿಗಳು ಹೀಗೆ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಇಲ್ಲೆಲ್ಲ ವೇತನದ ಸಮಸ್ಯೆ ಇರುವುದಿಲ್ಲ. ಸೌಲಭ್ಯಗಳ ಕೊರತೆಯೂ ಇರುವುದಿಲ್ಲ. ಇರುವುದೆಲ್ಲ ಪುರುಷ ಸಹೋದ್ಯೋಗಿಗಳ 'ಇಗೋ' ಸಮಸ್ಯೆ. ಒಬ್ಬ ಮಹಿಳೆಯ ಕೈಕೆಳಗೆ ಕೆಲಸ ಮಾಡಲು ಬೇಕಾದ ಸ್ನೇಹಪರತೆಯನ್ನು, ಅವಳ ಬೌದ್ಧಿಕತೆಯನ್ನು ಗೌರವಿಸುವ ಮನೋಭಾವವನ್ನು ಪುರುಷರು ಇಂದಿಗೂ ಹೊಂದಿಲ್ಲ. ಉನ್ನತ ಹುದ್ದೆಗೆ ಏರಿದ ಮಹಿಳೆಯರ ಸಂಖ್ಯೆ ಕೂಡ ದೊಡ್ಡ ಪ್ರಮಾಣದಲ್ಲಿ ಕಂಡುಬರುತ್ತಿಲ್ಲ. ಏಕೆಂದರೆ ಆ ಹಂತಕ್ಕೆ ಹೋಗಲು ಕಾಣದ ಕೈಗಳು ಬಿಡುವುದೇ ಇಲ್ಲ. ರಾಜಕೀಯದಲ್ಲಾದಂತೆ ಇಲ್ಲಿ ಕೂಡ ಉನ್ನತ ಹುದ್ದೆಗೆ ಏರಿದ ಮಹಿಳೆ ಪುರುಷನ ಕೈಗೊಂಬೆ ಆಗಿ ಬಿಡಬಲ್ಲ ಸಾಧ್ಯತೆಗಳಿವೆ. ಯಾವುದೋ ಒಂದೆರಡು ಹೆಸರುಗಳಿಸಿ ನಾವು ತೃಪ್ತಿಪಟ್ಟರೆ ಸಾಲದು ನಮಗೆ ಬೇಕಿರುವುದು ಪರಿವರ್ತನೆಯೇ ಹೊರತು ಬದಲಾವಣೆ ಅಲ್ಲ.

ದುಡಿಯುವ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ

1997ರ ಆಗಸ್ಟ್‌ನಲ್ಲಿ ಸುಪ್ರೀಂಕೋರ್ಟ್ ನೀಡಿದ ತೀರ್ಪಿನ ಅನಂತರ ದುಡಿಯುವ ಮಹಿಳೆಯರ ಮೇಲಾಗುತ್ತಿರುವ ಲೈಂಗಿಕ ದೌರ್ಜನ್ಯದ ಕುರಿತು ವಿಶೇಷ ಚರ್ಚೆಗಳಾದವು. ರಾಜಸ್ಥಾನದ ಭಾಂವ್ರೀಬಾಯಿ ಮೇಲೆ ನಡೆದ ಅತ್ಯಾಚಾರದ ಹಿನ್ನೆಲೆಯಲ್ಲಿ ಮಹಿಳಾ ಸಂಘಟನೆಗಳು ಧ್ವನಿ ಎತ್ತಿದ ಪರಿಣಾಮ ಬಂದ ತೀರ್ಪು ವಿಶೇಷವಾದ್ದು. ಇದರಂತೆ ಖಾಸಗಿ ಅಥವಾ ಸಾರ್ವಜನಿಕ ವಲಯದ ಎಲ್ಲಾ ಮಾಲಿಕರು ಅಥವಾ ಸಂಬಂಧಪಟ್ಟ ಅಧಿಕಾರಿಗಳು ಲೈಂಗಿಕ ಕಿರುಕುಳ ತಡೆಗಟ್ಟಲು ಕೆಳಗೆ ಕಾಣಿಸಿದ ಕ್ರಮಗಳನ್ನು ಒದಗಿಸಬೇಕು.

1. ಲೈಂಗಿಕ ಕಿರುಕುಳವನ್ನು ನಿಷೇಧಿಸುವುದರ ಕುರಿತು ಸ್ಪಷ್ಟ ಪ್ರಕಟಣೆ ಹೊರಡಿಸಿ ಮಹಿಳಾ ಉದ್ಯೋಗಿಗಳಲ್ಲಿ ಅರಿವು ಮೂಡಿಸಲು ವ್ಯವಸ್ಥೆ ಮಾಡಬೇಕು.
2. ಸರ್ಕಾರಿ ನಿಯಮ ನಿಬಂಧನೆಗಳಲ್ಲಿ 'ಲೈಂಗಿಕ ಕಿರುಕುಳ'ವನ್ನು ನಿಷೇಧಿಸುವ ಅಂಶವನ್ನು ಸೇರಿಸಬೇಕು.
3. ಖಾಸಗಿ ಸಂಸ್ಥೆಗಳ ಮಾಲೀಕರು ಕೈಗಾರಿಕಾ ಉದ್ಯೋಗ ಕಾಯ್ದೆ 1946ರಲ್ಲಿ ಸೇರ್ಪಡೆ ಮಾಡಿಕೊಳ್ಳಬೇಕು.
4. ಮಹಿಳೆಯರು ದುಡಿಯುವ ಸ್ಥಳದಲ್ಲಿ ದೂರು ಸಮಿತಿಯನ್ನು ನೇಮಿಸಬೇಕು. ಮಹಿಳೆ ಸಮಿತಿಯ ಮುಖ್ಯಸ್ಥರಾಗಿದ್ದು ಶೇ. 50ರಷ್ಟಾದರೂ ಮಹಿಳೆಯರು ಸಮಿತಿಯಲ್ಲಿರಬೇಕು.

ಆದರೆ ಈ ತೀರ್ಪು ನಿರೀಕ್ಷಿತ ಬದಲಾವಣೆ ಉಂಟುಮಾಡಲಿಲ್ಲ. ಮುಖ್ಯ ಕಾರಣವೆಂದರೆ ದೌರ್ಜನ್ಯಕ್ಕೊಳಗಾದವರು ವಿದ್ಯಾವಂತರಾದರೂ ದೂರು ನೀಡುವ ಧೈರ್ಯ ತೋರಲಿಲ್ಲ. ಲೈಂಗಿಕ ದೌರ್ಜನ್ಯದಂತಹ

ಸೂಕ್ಷ್ಮ ವಿಷಯಗಳು ಕೌಟುಂಬಿಕ ಬುಡವನ್ನೇ ಅಲ್ಲಾಡಿಸಿ ಬಿಡುವ ಸಂದರ್ಭ ಇರುವಾಗ ದೂರು ನೀಡುವ ಧೈರ್ಯ ಯಾರು ವಹಿಸುತ್ತಾರೆ. ಮಧ್ಯಮ ವರ್ಗದವರನ್ನು ಕೆಲಮಟ್ಟಿಗಾದರೂ ಈ ತೀರ್ಪು ಜಾಗೃತ ಗೊಳಿಸಿತು. ಆದರೆ ಕೆಳವರ್ಗದವರನ್ನು ತಲುಪಲೇ ಇಲ್ಲ. ಬಹುತೇಕ ಕಡೆ ಸಮಿತಿಗಳು ರಚನೆಯಾಗಲೇ ಇಲ್ಲ. ಆದಾಗಲೂ ಆಡಳಿತ ಮಂಡಳಿಯ ಹಿತರಕ್ಷಣೆಗೆ ಅವು ರೂಪುಗೊಂಡವು. ಮುಖ್ಯವಾಗಿ ಉದ್ಯೋಗವೇ ಜೀವನದ ಅವಶ್ಯಕತೆಯಾದ ಮಹಿಳೆಯರು ಅದಕ್ಕೆ ಕಲ್ಲು ಹಾಕಿಕೊಳ್ಳಲು ಸಿದ್ಧರಾಗಲಿಲ್ಲ.

ಗಮನಿಸಲೇಬೇಕಾದ ಅಂಶವೆಂದರೆ ಲೈಂಗಿಕ ದೌರ್ಜನ್ಯದ ಕುರಿತು ತೀರ್ಪು ಸೇರಿದಂತೆ ನಮ್ಮಲ್ಲಿ ಮೂಡಿರುವ ಭಾವನೆ ಕೇವಲ ದೈಹಿಕ ಸಂಪರ್ಕಕ್ಕೆ ಒತ್ತಡ, ಅಶ್ಲೀಲ ಚಿತ್ರ ತೋರಿಸುವುದು, ಲೈಂಗಿಕ ಸ್ವರೂಪದ ಮಾತುಗಳ ಬಳಕೆ ಮುಂತಾದ ಅಭಿವ್ಯಕ್ತಿಗೆ ಮಹತ್ವ ನೀಡಿದೆ. ಆದರೆ ಉದ್ಯೋಗಸ್ಥ ಮಹಿಳೆ ಎದುರಿಸುವ ಮುಖ್ಯ ಸಮಸ್ಯೆ ಮಾನಸಿಕ ಕಿರುಕುಳದ್ದು. ಹೆಣ್ಣು ಪ್ರತೀ ತಿಂಗಳಲ್ಲಿ ಎದುರಿಸುವ ಋತುಸಮಸ್ಯೆಗೆ ಎಲ್ಲಿಯೂ ಸಹಾನುಭೂತಿ ಸಿಕ್ಕುವುದಿಲ್ಲ. ಆ ವಿಷಯದಲ್ಲಿ ಅವರನ್ನು ಆತಂಕಕ್ಕೆ ಸಿಲುಕಿಸುವ ಪ್ರಸಂಗಗಳೂ ಇವೆ. ಗರ್ಭಿಣಿಯದಾಗಿನ, ಹೆರಿಗೆ ನಂತರದ ದಿನಗಳಲ್ಲಿ ಸೂಕ್ತ ವಾತಾವರಣ ಸಿಕ್ಕುವುದಿಲ್ಲ. ಮುಖ್ಯ ಹೆಣ್ಣಿನ 'ಧ್ವನಿ' ಅಡಗಿಸುವ ಪ್ರಯತ್ನ ಎಲ್ಲೆಡೆ ನಡೆಯುತ್ತಲೇ ಇರುತ್ತದೆ. ಇದನ್ನು ಕಾನೂನು ವ್ಯಾಪ್ತಿಗೆ ತರುವುದು ಕಷ್ಟ. ಆದರೆ ಹೆಣ್ಣಿಗೆ ಆತ್ಮವಿಶ್ವಾಸ ಮೂಡಿಸುವುದು ಮುಖ್ಯ. ಹೆಣ್ಣು ದುಡಿಯುವುದು ಅನಿವಾರ್ಯವಾದರೆ ಸಾಲದು, ದುಡಿಯಬೇಕಾದ ಅನುಕೂಲಕರ ವಾತಾವರಣವೂ ನಿರ್ಮಾಣವಾಗಬೇಕು. 60 ವರ್ಷದ ಸ್ವತಂತ್ರ ಭಾರತದ ಇತಿಹಾಸ ನೋಡಿದರೆ ಇಂತಹ ಪ್ರಯತ್ನಗಳು ನಡೆದೇ ಇಲ್ಲವೆಂದರೆ ತಪ್ಪಾಗುವುದಿಲ್ಲ.

ದುಡಿಯುವ ಮಹಿಳೆ ಎಂದರೆ ವೇಶ್ಯೆಯರಂತೆ ನೋಡುತ್ತಿದ್ದ ಕಾಲವೂ ನಮ್ಮಲ್ಲಿ ಇತ್ತು. ಅವಳೇನು ನೂರಾರು ಗಂಡಸರ ಜೊತೆ ಓಡಾಡುತ್ತಾಳೆ ಎಂದು ಮೂಗು ಮುರಿಯುತ್ತಿದ್ದ ಕಾಲವೂ ಇತ್ತು. ಈಗ ಅಷ್ಟರಮಟ್ಟಿಗೆ ಪರಿಸ್ಥಿತಿ ಬದಲಾಗಿದೆ. ಉದ್ಯೋಗಸ್ಥ ಮಹಿಳೆ ಸಮಾಜದಲ್ಲಿ ಗೌರವದ ಬದುಕನ್ನು ಕಾಣಬಲ್ಲವಳಾಗಿದ್ದಾಳೆ. ಆದರೆ ಆಗಬೇಕಾದ ಬದಲಾವಣೆ ಇಷ್ಟೇ ಅಲ್ಲ ಮತ್ತು ಎಲ್ಲಕ್ಕೂ ಕಾನೂನಿನ ಪರಿಹಾರವನ್ನೇ ಕಾಣಲು ಸಾಧ್ಯವಿಲ್ಲ. ಈಗ ಭಾರತೀಯ ದಂಡಸಂಹಿತೆ 441 ಮತ್ತು 442ರ ಪ್ರಕಾರ ಅಶ್ಲೀಲ ಹಾಡುಗಳು, ನೃತ್ಯ ಅಥವಾ ಯಾವುದೆ ಸಮಾಜದ ಸ್ವಾಸ್ಥ್ಯ ಕೆಡಿಸಬಲ್ಲ ಅಭಿವ್ಯಕ್ತಿ ಗಂಭೀರ ಅಪರಾಧವಾಗಿದೆ. ಇದು ಹೆಣ್ಣಿನ ಗೌರವ ಕಾಪಾಡಲು ರೂಪಿತ ಕಾನೂನು ಎಂದು ಕಾನೂನು ಪಂಡಿತರು ಹೇಳುತ್ತಾರೆ. ಆದರೆ ಇದರ ಉಪಯೋಗವಾಗುವುದು ಪಬ್, ಬಾರ್, ನೈಟ್‌ಕ್ಲಬ್‌ಗಳಲ್ಲಿ ನಡೆಯುವ ದಾಳಿಯಲ್ಲಿ ಅಲ್ಲ. ಅಲ್ಲಿ ಬಂಧಿತರಾಗುವವರು ಬಡಪಾಯಿ ನರ್ತಕಿಯರು; ಗಾಯಕಿಯರು. ಅದು ಅವರ ಉದ್ಯೋಗವಾಗಿದೆ. ಅವರು ಯಾರದೋ ಕೈ ಪಗಡೆಗಳಾಗಿ ಅಲ್ಲಿ ಜೀವನ ನಿರ್ವಹಣೆ ಮಾಡುತ್ತಿರುತ್ತಾರೆ. ಆದರೆ ಹೆಣ್ಣನ್ನು ರಕ್ಷಿಸಲೆಂದು ರೂಪಿತವಾದ ಕಾನೂನು ಹೆಣ್ಣಿನ ಉದ್ಯೋಗವನ್ನು ಕಿತ್ತುಕೊಳ್ಳುತ್ತಿದೆ. ಇಂತಹ ಹಲವಾರು ವಿಪರ್ಯಾಸಗಳನ್ನು ಗುರುತಿಸಬಹುದು. ಕಾನೂನು ಇರುವುದು ಎಷ್ಟು ಮುಖ್ಯವೋ ಅದರ ಯೋಗ್ಯ ಬಳಕೆಯಾಗುವ ವಾತಾವರಣ ನಿರ್ಮಾಣವಾಗುವುದೂ ಅಷ್ಟೇ ಮುಖ್ಯ. ಮಾತ್ರವಲ್ಲ ಎಲ್ಲವೂ ಕಾನೂನಿನಿಂದಲೇ ಸಾಧ್ಯವಾಗದು ಎಂಬ ಅರಿವು ಮೂಡುವುದು ಅಷ್ಟೇ ಪ್ರಮುಖವಾದ ಸಂಗತಿ.

ಈ ವಿಶ್ಲೇಷಣೆಯಲ್ಲಿ ನಾವು ಗಮನಿಸಿದ ಮುಖ್ಯ ಅಂಶವೆಂದರೆ ಹೆಣ್ಣು ಉದ್ಯೋಗ ಮಾಡುವುದು ಒಂದು ಆತ್ಮಾಭಿಮಾನದ ಉತ್ಸಾಹದ ಕ್ರಿಯೆಯಾಗಿದ್ದು ಈಗ ಅನಿವಾರ್ಯವಾಗಿ ಬದಲಾಗುತ್ತಿದೆ. ಉದ್ಯೋಗಸ್ಥ ಮಹಿಳೆಯರ ಪ್ರಮಾಣ ಹೆಚ್ಚುತ್ತಿದೆ. ಆದರೆ ಅದಕ್ಕೆ ಬೇಕಾದ ವಾತಾವರಣ ನಿರ್ಮಾಣವಾಗುತ್ತಿಲ್ಲ. ಉದ್ಯೋಗಸ್ಥ ಮಹಿಳೆಯರ ಸಮಸ್ಯೆ ಎಂದ ಕೂಡಲೇ ಅದು ಲೈಂಗಿಕ ಕಿರುಕುಳ ಎನ್ನುವಷ್ಟು ಶಿಥಿಲ ಗ್ರಹಿಕೆ ನಮ್ಮಲ್ಲಿ ಇದೆ. ಸಮಸ್ಯೆ ಇದಕ್ಕಿಂತ ಬಹಳ ಅಗಾಧವಾದದ್ದು ಎಂಬ ಅರಿವು ನಮಲ್ಲಿ ಬೆಳೆಯಬೇಕಿದೆ. ಹೆಣ್ಣು, ಪುರುಷ ಮಾಡಬಲ್ಲ ಎಲ್ಲಾ ಕೆಲಸಗಳನ್ನು ಮಾಡಲಾರಳು ಎಂಬುದು ಗಂಡು-ಹೆಣ್ಣಿನ ಸಾಮರ್ಥ್ಯದ ಕುರಿತ ಸಾಂಸ್ಕೃತಿಕ ಅಪಕಲ್ಪನೆಯಿಂದ ಬಂದ ಅಭಿಪ್ರಾಯ. ಅದನ್ನು ಅಸಹಜವೆಂದು ನೋಡದೆ ವ್ಯಕ್ತಿಯ ಸಾಮರ್ಥ್ಯ ಗ್ರಹಿಕಾ ಕ್ರಮದಲ್ಲೇ ನೋಡಬೇಕಾದ ಮನೋಭಾವ ಬೆಳೆಯಬೇಕಿದೆ. ಎಲ್ಲಕ್ಕಿಂತ ಹೆಚ್ಚಾಗಿ ಸ್ವಾತಂತ್ರ್ಯದ ಪರಿಕಲ್ಪನೆ ಮಹಿಳೆಗೆ ಲಭಿಸಿಯೇ ಇಲ್ಲ, ಅವಳದು ಸದಾ ಬಿಡುಗಡೆಯ ಬೇಡಿಯೇ. ಉದ್ಯೋಗವೆನ್ನುವುದು ಹೆಣ್ಣಿಗೆ ಆತ್ಮವಿಶ್ವಾಸ ತರಬೇಕು; ಬಿಡುಗಡೆಯ ದಾರಿ ಕಲ್ಪಿಸಬೇಕು. ಹೀಗಾದಾಗಲೇ ಅದರ ಉದ್ದೇಶ ಸಾರ್ಥಕವಾಗುತ್ತದೆ. ಹೀಗಾಗಲು ನಾವು ಕ್ರಮಿಸಬೇಕಾದ ದಾರಿ ಬಹು ದೂರದ್ದಾಗಿದೆ.

❑

ಮುಗಿಲ ದಾರಿ



ಮುಗಿಲ ದಾರಿಯಲ್ಲಿ
ಗಾಳಿರಥವು ತೇಲಿ ಹೋಗುತ್ತಿದೆ
ಸಂಖ್ಯೆಯಿಲ್ಲದ ಹಕ್ಕಿ
ಬಂದಿದೆ ರೆಕ್ಕೆ ಕೊಟ್ಟಿದೆ
ಪುರುಸತ್ತು ಬೇಕು
ಪೆಟ್ಟಿಗೆಯಲ್ಲಿ ಮುಚ್ಚಿಟ್ಟ
ಸೀರೆಗಳನ್ನೆಲ್ಲ ಉಟ್ಟುಬಿಡಬೇಕು.

ಸಾಲು ನಿಲ್ಲಿರಿ
ಮುತ್ತ ಹುಡುಕುವೆ
ಸಿಕ್ಕರೆ ನವಿಲಗರಿಯನ್ನೇ
ಕೇಳುವೆ ಮುತ್ತು
ಗರಿಯನ್ನು ಪೋಣಿಸಿ
ಇಟ್ಟು ನೋಡುವೆ ರೆಕ್ಕೆಗೆ
ನನ್ನ ಎಲ್ಲಾ ಕನಸಿಗೂ

ಮಿಗಿಲು ನೀವು ಸೇರಿ
ಬನ್ನಿರಿ ತೆಕ್ಕೆಗೆ
ಎಲ್ಲಾ ಸೇರಿ ಮುಗಿಲ
ದಾರಿಯಲ್ಲಿ ಸಾಗಿಬಿಡುವ
ಗಾಳಿರಥಕ್ಕೆ ಜೀವಕೊಡುವ

- ತಾಜುಮಾ

ಹೆಣ್ಣು ಮತ್ತು ಸ್ವಾತಂತ್ರ್ಯದ ಪರಿಕಲ್ಪನೆ

ಪ್ರತಿಭಾ ನಂದಕುಮಾರ್

ಮನ ಬತ್ತಲೆಯಿರಬೇಕು
- ಅಕ್ಕಮಹಾದೇವಿ

ಸ್ವಾತಂತ್ರ್ಯ ಅನ್ನುವುದೇ ಒಂದು ಅಮೂರ್ತ ಪರಿಕಲ್ಪನೆ. ವಾಕ್ ಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ ಎನ್ನುವ ಪರಿಕಲ್ಪನೆಗಳು ಕಾನೂನಿನ ಜೊತೆ ತಳುಕು ಹಾಕಿಕೊಂಡಿರುವಂತಹವು. ಇವುಗಳನ್ನು ಬಳಸಲು ಬಾಹ್ಯ ಪರಿಕರಗಳ ಅಗತ್ಯವಿರುತ್ತದೆ. ಅಂದರೆ ಮಾಧ್ಯಮ, ಸರ್ಕಾರ ಇತ್ಯಾದಿ. ಇವುಗಳನ್ನು ಇಷ್ಟಪ್ರಕಾರ ಬಳಸಿಕೊಳ್ಳಲು ಆಗದಿದ್ದ ಮೇಲೆ ಇವು ಇದ್ದೂ ಇಲ್ಲದಂತೆ. ಆದರೆ ಇವತ್ತಿನ ಸಮಾಜದಲ್ಲಿ ಮನುಷ್ಯರನ್ನು ಮನುಷ್ಯರಾಗಿ ನೋಡುವಲ್ಲೇ ತೀವ್ರವಾದ ಏರುಪೇರಿರುವಾಗ, ಸಮಾಜದ ಎಲ್ಲ ಸಂಪನ್ಮೂಲಗಳೂ ಎಲ್ಲರಿಗೂ ಸಮಾನವಾಗಿ ಲಭ್ಯವಿಲ್ಲದೆ ವರ್ಗ, ಜಾತಿ, ಆರ್ಥಿಕ ಸ್ಥಿತಿಗತಿ ಇತ್ಯಾದಿಗಳನ್ನು ಅವಲಂಬಿಸಿಯೆ ಲಭಿಸುವಾಗ ಸ್ವಾತಂತ್ರ್ಯದ ಪರಿಕಲ್ಪನೆಯನ್ನೂ ಬದಲಿಸಬೇಕಾಗುತ್ತದೆ. ಸಮಾನತೆ ಇಲ್ಲದೇ ಸ್ವಾತಂತ್ರ್ಯವಿಲ್ಲ. ಶೋಷಣೆ, ತಾರತಮ್ಯ, ಅವಕಾಶ ವಂಚನೆಗಳಿಲ್ಲದ ಸ್ಥಿತಿಯೇ ಸ್ವಾತಂತ್ರ್ಯ ಅಂತಲೂ ಹೇಳುತ್ತಾರೆ ಕೆಲವರು.



ಮಹಿಳೆ ಮತ್ತು ಸ್ವಾತಂತ್ರ್ಯದ ಕುರಿತು ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸುತ್ತಿದ್ದಾಗ ಅನೇಕ ವಿಚಿತ್ರ ಆಲೋಚನೆಗಳು ಕಂಡುಬರುತ್ತವೆ. ಡೆನ್ಮಾರ್ಕಿನ ಹೆಂಗಸೊಬ್ಬಳು ಹೆಂಗಸರು ಗಂಡಸರಂತೆ ನಿಂತು ಮೂತ್ರ ವಿಸರ್ಜಿಸಲು ಸಾಧ್ಯವಿಲ್ಲವೇ ಅಂತ ಆಲೋಚಿಸಿ ಕಂಡುಹಿಡಿದ 'ಪಿ-ಮೇಟ್' ಎನ್ನುವ ಸಾಧನ. ಹೆಂಗಸರು ಗಂಡಸರಂತೆಯೇ ನಿಂತು ಕಾಲು ಅಗಲಿಸಿ ಪ್ಲಾಸ್ಟಿಕ್ಕಿನ ಮಡಸಿದ ಚಿಕ್ಕ ಮೊರದಂತಹ ಸಾಧನವನ್ನು ಹಿಡಿದು ಅದರಲ್ಲಿ ಮೂತ್ರ ವಿಸರ್ಜಿಸಿದರೆ ಅದು ನೇರವಾಗಿ ಟಾಯ್ಲೆಟ್ಟಿಗೆ ಬೀಳುತ್ತದೆ. ಅನಂತರ ಆ ಸಾಧನವನ್ನು ಬಿಸಾಡಿಬಿಡುವುದು. ಅವಳ ಪ್ರಕಾರ ಮಹಿಳೆಯರ ಸ್ವಾತಂತ್ರ್ಯಕ್ಕೆ ಇದು ಮೊದಲ ಹೆಜ್ಜೆ.

ಮಹಿಳೆಯರು ಋತುಸ್ರಾವದ ಸಂಕಟಗಳಿಂದ ಪಾರಾಗಲು ಕಂಡುಹಿಡಿದ ಎಲ್ಲವನ್ನೂ ಸ್ವಾತಂತ್ರ್ಯದ ಸಾಧನಗಳು ಎಂದೇ ಕರೆದರು. **'ಲಿಬರೇಟೆಡ್ ಆಗಬೇಕೇ? ಹಾಗಾದರೆ ಇದನ್ನು ಬಳಸಿ'** ಅನ್ನುವುದು ಇಂದಿಗೂ ಅನೇಕ ಜಾಹಿರಾತುಗಳಲ್ಲಿ ಕಂಡುಬರುವ ಭರತವಾಕ್ಯ. ಸ್ಯಾನಿಟರಿ ನ್ಯಾಪ್ಕಿನ್ ಮಹಿಳೆಯರಿಗೆ ಅತ್ಯಗತ್ಯವಾದ ಸ್ವಾತಂತ್ರ್ಯ ತಂದುಕೊಟ್ಟಿತು ಅಂತ ಅನೇಕರ ವಾದ.

ಹೆಣ್ಣು ಅಂದರೆ ಅವಳ ದೇಹ ಎನ್ನುವುದು ಒಂದು ಜನಪ್ರಿಯ ವಾದ. "ವುಮನ್ ಈಸ್ ಹರ್ ಬಾಡಿ". ಅದರ ಮುಂದುವರಿಕೆಯಾಗಿ ಹೆಣ್ತನದ ಸಂಕೇತವೆಂದರೆ ಬಸಿರು. ಬಸಿರಿನಿಂದ ಮುಕ್ತಿ ಪಡೆಯುವುದೇ ಹೆಣ್ಣಿನ ಸ್ವಾತಂತ್ರ್ಯದ ಸಂಕೇತ ಎನ್ನುವುದು ಒಂದು ವಾದವಾದರೆ, ಅದರಿಂದ ಮೂಡಿದ ಇತರ ಐಡಿಯಾಗಳಾದ ಮಗುವನ್ನು ಹೆರುವುದು, ಮೊಲೆಯೂಡಿಸುವುದು, ಲಾಲನೆ ಪಾಲನೆ ಇವೆಲ್ಲ ಹೆಂಗಸಿನ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಅಂಶಗಳು. ಹಾಗಾಗಿ, ಬಂಜೆ ಎನ್ನುವ ಪದವನ್ನೇ ತಿರಸ್ಕರಿಸಿ, ಅದನ್ನು ನೆಗೆಟಿವ್‌ನಿಂದ ಪಾಸಿಟಿವ್ ಅರ್ಥಕ್ಕೆ ಬದಲಿಸುವುದೆ ಮಹಿಳಾ ಸ್ವಾತಂತ್ರ್ಯದ ಪ್ರಥಮ ಹೆಜ್ಜೆ ಎಂದು ನಂಬಿಸಿದ್ದು ಇನ್ನೊಂದು ಹೆಜ್ಜೆ. ತಾಯ್ತನವೇ ಮಹಿಳೆಯರ ಅತ್ಯಂತ ದೊಡ್ಡ ನಿರ್ಬಂಧ, ಹಾಗಾಗಿ ಮಹಿಳೆ ಮಗು ಹೆರುವಯಂತ್ರ ಎನ್ನುವ ದೃಷ್ಟಿಕೋನವನ್ನು ಬದಲಿಸುವುದೆ ಅವಳಿಗೆ 'ಕೊಡುವ' ದೊಡ್ಡ ಸ್ವಾತಂತ್ರ್ಯ ಅಂದರು. ಅದರ ಹಿಂದೆಯೇ ಮೊಲೆಯೂಡಿಸುವುದೂ ಒಂದು ಕಟ್ಟುಪಾಡಾದ್ದರಿಂದ ಆ ನಿರ್ಬಂಧದಿಂದ ಹೊರಬರಲು ಬಾಟಲಿಯಲ್ಲಿ ಹಾಲೂಡಿಸಿ ಎಂದು ಸಾರಿ ಹೇಳಿ ಮಗುವಿನ ಬಾಯಲ್ಲಿ ಬಾಟಲಿಯಿಟ್ಟರು. ಜಾಗತಿಕ ಜಗತ್ತು ತಾಯ್ತನವನ್ನು ಮಾರುಕಟ್ಟೆ ಲಾಭಕ್ಕೆ ಬಳಸಿಕೊಂಡಂತೆ ಬೇರೆ ಯಾವುದನ್ನೂ ಬಳಸಿಕೊಂಡಿಲ್ಲ. ಬಾಟಲಿ ಹಾಲು ಕುಡಿದ ಮಕ್ಕಳ ದುರ್ದಶೆ ಗೊತ್ತಾದಂತೆ ಜಾಗತಿಕ ಪ್ರಪಂಚ ಅದಕ್ಕೆ ಮಹಿಳೆಯೇ ಕಾರಣ ಅಂತ ಅವಳ ಮೇಲೆ ಅಪರಾಧಿ ಪ್ರಜ್ಞೆಯ ಭಾರ ಹೊರಿಸಿತು. ತಾನು ಸ್ವತಂತ್ರಳಾಗಬೇಕಾದರೆ ಈ 'ಸಾಂಪ್ರದಾಯಿಕ' ಕಟ್ಟುಪಾಡುಗಳಿಂದ ಹೊರಬರಬೇಕು ಅನ್ನುವ ತುಡಿತ ಹುಟ್ಟುಹಾಕುತ್ತಲೇ ಅದರ ಹಿಂದೆಯೇ ಅದರ ಬಗ್ಗೆ ಗಿಲ್ಟ್ ಕಾಂಪ್ಲೆಕ್ಸ್ ಅನ್ನೂ ತುಂಬಿದ್ದು ಆಧುನಿಕ ಜಗತ್ತಿನ ಅತ್ಯಂತ ದೊಡ್ಡ ದುರಂತ.

ಅದನ್ನು ಅಳಿಸಿಹಾಕಲೆಂದೇ ಒಂದು ವರ್ಗದ ಹೆಣ್ಣುಗಳು ತಾವೇ ಮಗುವನ್ನು ಹೆರುವುದರ ಬದಲು ಬೇರೊಬ್ಬಳಿಗೆ ಮಗುವನ್ನು ಹೆತ್ತುಕೊಡಲು ನೇಮಿಸಿಕೊಳ್ಳುವುದೂ ತಮ್ಮ ಸ್ವಾತಂತ್ರ್ಯ ಪಡೆಯುವ ದಾರಿ ಅಂತ ಭ್ರಮಿಸಿದರು.

ಇದರ ಜೊತೆಗೇ ಹೆಣ್ಣು ಸ್ವತಂತ್ರಳಾಗಬೇಕಾದರೆ ಮನೆ, ಸಂಬಂಧಗಳ ಸಂಕೋಲೆಗಳನ್ನು ಮುರಿಯದೇ ವಿಧಿಯಿಲ್ಲ ಅನ್ನುವ ಪರಿಕಲ್ಪನೆಗೆ ಸಾಕಷ್ಟು ಓಟು ಬಿದ್ದವು. ಹೆಣ್ಣು ಮಗುವಾಗುವುದೇ ಅಪರಾಧ, ಯಾಕೆಂದರೆ ಅವಳನ್ನು ಬೆಳೆಸಿ ಬೇರೆಯವರ ಮನೆಗೆ ಕೊಡಬೇಕು. ಆ ಮನೆ ಹುಡುಕುವುದೇ ದೊಡ್ಡ ತಲೆನೋವಾಗಿರುವುದರಿಂದ ಅವಳನ್ನು ಹುಟ್ಟಿಸುವುದೇ ಬೇಡಾ ಅನ್ನುವ ಜಾಣತನ ತಲೆದೋರಿತು. ಹಾಗೂ ಹೆಣ್ಣು ಹುಟ್ಟಿಬಿಟ್ಟರೆ ಅವಳಿಗೆ ಓದು, ಶಿಕ್ಷಣ, ಆರೋಗ್ಯ ವ್ಯವಸ್ಥೆ ಎಲ್ಲ ಸುಮ್ಮನೆ ದಂಡ, ಅದೆಲ್ಲ ಬೇಕಾಗಿಲ್ಲ. ಹಾಗೂ ಅವಳು ಉಳಿದು ಬೆಳೆದು ದೊಡ್ಡವಳಾಗಿ ಬಿಟ್ಟರೆ ಅವಳನ್ನು ತಮ್ಮ ಕಾಮಕ್ಕೆ ಬಳಸಿ ಕೊಳ್ಳುವುದೇ ಅವಳ ಉದ್ಧಾರ. ಇನ್ನು ಅದಕ್ಕಿಂತ ಬೇರೆ ಏನು ಬೇಕು? ಹಾಗಾಗಿ ಮಹಿಳೆಯರಿಗೆ ಮದುವೆಯೇ ಮಹಾನವಮಿ. ಕಾಮವೇ ಅವಳ ಗುರುತು. ಅದರಾಚೆಗೆ ಬೇರೆ ಯಾವುದೂ ಲೆಕ್ಕಕ್ಕಿಲ್ಲ ಅಂದರು.

ಆದರೆ ಅವರು ಉದ್ದಕ್ಕೂ ಪರಿಗಣಿಸಲು ಮರೆತುಬಿಟ್ಟ ಅಂಶವೆಂದರೆ ಹೆಣ್ಣಿಗೂ ಇರುವ ಮನಸ್ಸು, ದೇಹ, ಬುದ್ಧಿ ಅವರ ಇಚ್ಛೆಯನ್ನೂ ಮೀರಿ ತಮ್ಮ ಪಾಡಿಗೆ ತಾವು ಕೆಲಸ ಮಾಡುತ್ತವೆ ಅನ್ನುವುದು. ಹೆಣ್ಣಿನ ನಿಜವಾದ ಸ್ವಾತಂತ್ರ್ಯ ಆ ಮನಸ್ಸು, ದೇಹ, ಬುದ್ಧಿ ಕುರಿತಾದದ್ದು. ಬರಿಯ ಅದರ ಬಗ್ಗೆ ಮಾತ್ರ ಮಾತಾಡಿದರೆ ಲೋಕಾರೂಢಿಯ ಅನೇಕ

ಅನ್ಯಾಯಗಳನ್ನು ಖಂಡಿಸಲು ಆಗುವುದಿಲ್ಲ ಗೊತ್ತು. ಆದರೆ ಅದರ ಬಗ್ಗೆ ಮಾತಾಡುವಾಗಲೇ ಇದರ ಕಡೆಗೂ ಗಮನ ಕೊಡಬೇಕು.

ಮೊದಲಿನಿಂದಲೂ ಹೆಣ್ಣಿನ ಶಕ್ತಿ ಇರುವುದು ಅವಳ ಮಾನಸಿಕ ಜಗತ್ತಿನಲ್ಲೇ. ನಾರಿ ಮುನಿದರೆ ಮಾರಿ ಅನ್ನುವುದು ಅತ್ಯಂತ ಕ್ಲೀಷೆ ಆದರೂ ಅದನ್ನು ಸ್ವಲ್ಪ ಬೇರೆ ದೃಷ್ಟಿಕೋನದಿಂದ ನೋಡಿದರೆ ಬೇರೆ ಅರ್ಥ ಕೊಡುವ ಸಾಧ್ಯತೆಯಿದೆ. ಹೆಣ್ಣು ಮುನಿಯದಿರುವುದರಿಂದ ಇನ್ನೂ ಅವಳಿಗೆ ಲೋಕಾರೂಢಿಯ ಸ್ವಾತಂತ್ರ್ಯ ದಕ್ಕಿಲ್ಲ. ಅಥವಾ ಆ ಮುನಿಸನ್ನು ಅವಳು ಸ್ವಾತಂತ್ರ್ಯಗಳಿಸಿಕೊಳ್ಳಲು ಬಳಸಿಕೊಂಡಿಲ್ಲ. ಅದಕ್ಕೆ ಇರುವ ಆತಂಕಗಳೂ ನೂರಾರು. ಅರಿವು ಇಲ್ಲದಿರುವುದರಿಂದ ಹಿಡಿದು, ಶಿಕ್ಷಣದ ಕೊರತೆ, ಸಂಘಟನೆಯ ಕೊರತೆ, ಆರ್ಥಿಕ, ಸಾಮಾಜಿಕ ಅಭದ್ರತೆಯಂತಹ ಅನೇಕ ಸಾಧಾರಣ ಸಂಗತಿಗಳೂ ದೊಡ್ಡ ತೊಡಕಾಗಿವೆ. ಹಾಗಾಗಿಯೇ ಮಹಿಳೆಯ ಸ್ವಾತಂತ್ರ್ಯದ ಪರಿಕಲ್ಪನೆ ಕೂಡಾ ಆಂತರಿಕ ನೆಲೆಯಲ್ಲೇ ಬೇರೆ ಅರ್ಥದಲ್ಲಿ ಬಳಕೆಯಾಗುತ್ತಿರುತ್ತದೆ; ಸಾಮಾಜಿಕ ರೀತಿನೀತಿಯಲ್ಲಲ್ಲ. ಮತ್ತೆ ಕ್ಲೀಷೆಯನ್ನೇ ಉದಾಹರಣೆಯಾಗಿ ಕೊಡಬೇಕಾದರೆ ಅಕ್ಕಮಹಾದೇವಿಯ ಅನೇಕ ವಚನಗಳು ಈ ಒಳ–ಹೊರಗಿನ ಜಗತ್ತಿನ ಬಗ್ಗೆ ಅತ್ಯಂತ ಸಮರ್ಪಕವಾಗಿ ಹೇಳಿವೆ. ಅವಳ ಇತರ ಮಿತಿಗಳೇನೇ ಇರಲಿ, ಕೆಲವು ವಿಷಯಗಳಲ್ಲಿ ಅವಳು ಸಂಪೂರ್ಣ ಲಿಬರೇಟೆಡ್. ಅವಳ ರೀತಿಯಲ್ಲಿ ಆಲೋಚಿಸಲು ಹೊರಟರೆ ಹೆಂಗಸರು ಸ್ವಲ್ಪ ಬೇಗ ಸ್ವಾತಂತ್ರ್ಯವನ್ನು 'ಗಳಿಸಿ'ಕೊಳ್ಳಬಹುದು ಅನ್ನಿಸುತ್ತದೆ. (ಅವಳು ಚೆನ್ನಮಲ್ಲಿಕಾರ್ಜುನನಿಗೆ ಕಟ್ಟುಬಿದ್ದ ಅಂಶವನ್ನು ಹೊರತುಪಡಿಸಿ)

ತೆರಣಿಯ ಹುಳು ತನ್ನ ಸ್ನೇಹಕ್ಕೆ ಮನೆಯ ಮಾಡಿ
ತನ್ನ ನೂಲು ತನ್ನನ್ನೇ ಸುತ್ತಿ ಸಾವಂತೆ
ಎನಗೂ ಮನೆಯೇ? ಎನಗೂ ಧನವೇ?
ಎನ್ನ ಮನೆಮಠ ಕಂಸ ಕಂಡು ಕಣ್ತೆರೆದಂತಾಯಿತ್ತು
ಎನ್ನ ಮನದ ಸಂಸಾರವ ಮಾಣಿಸಾ ಚೆನ್ನಮಲ್ಲಿಕಾರ್ಜುನ

ಆ ಮನದ ಸಂಸಾರವ ಮಾಣಿಸುವಲ್ಲಿ ಎಲ್ಲ ಹೆಂಗಸರೂ ಅಲ್ಪಸ್ವಲ್ಪವಾದರೂ ಕುಶಲತೆ ತೋರಿಯೇ ತೋರುತ್ತಾರೆ. ಇನ್ನು ಸ್ವಲ್ಪ ಹೆಚ್ಚು ಸೂಕ್ಷ್ಮಮತಿಯಾದರಂತೂ ನಿಬ್ಬೆರಗಾಗುವಲ್ಲಿ ಅಕ್ಕನಿಗೆ ಸಮೀಪವೇ ಬಂದುಬಿಡುತ್ತಾರೆ.

ಜಿಹ್ವಾಲಂಪಟಕ್ಕೆ ಆಹ್ವಾನಿಸಿ
ಗುಹ್ಯಲಂಪಟದಲ್ಲಿ ವಿಸರ್ಜಿಸಿ
ಸಕಲೇಂದ್ರಿಯ ಮುಖದಲ್ಲಿ ಮೋಹಿಯಾಗಿ
ಸದ್ಗುರುಕರುಣಾಮೃತರಸ ತಾನೆಂದರಿಯದೆ
ಬರಿದೆ ಭಕ್ತ ಮಾದೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ
ಗುರು ಚರಪರವೆಂದು ಬೊಗಳುವ ಕುನ್ನಿಗಳ ನೋಡಿ
ಎನ್ನ ಮನ ಬೆರಗು ನಿಬ್ಬೆರಗು ಆಯಿತ್ತಯ್ಯ ಚೆನ್ನಮಲ್ಲಿಕಾರ್ಜುನ

ಈ ಬೆರಗೇ ಮಹಿಳೆಯಲ್ಲಿ ತನ್ನ ಒಳಗೊಂದು ಜಗತ್ತು ಸೃಷ್ಟಿಸಿಕೊಳ್ಳಲು ಕಾರಣವಾಗುತ್ತದೆ. ಆದರೆ ಹೊರಗಿನ ಜಗತ್ತನ್ನು ನಾವು 'ವಿಶ್ ಅವೇ' ಮಾಡಲು ಅಂದರೆ ಅದಿಲ್ಲವೆಂದು ಭ್ರಮಿಸಿ ಬದುಕಲು ಆಗುವುದಿಲ್ಲ.

ಲೋಕವಿಡಿದು ಲೋಕದ ಸಂಗದಿಂದಿಪ್ಪೆನು
ಆಕಾರವಿಡಿದು ಸಾಕಾರ ನಡೆವೆನು
ಹೊರಗೆ ಬಳಸಿ ಒಳಗೆ ಮೈಮರೆದಿಪ್ಪೆನು
ಬೆಂದ ನುಲಿಯಂತೆ ಹುರಿಗುಂದದಿಪ್ಪೆನು
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯ
ಹತ್ತರೊಳಗೆ ಹನ್ನೊಂದಾಗಿ ನೀರ ತಾವರೆಯಂತಿಪ್ಪೆನು.

ಈ ಹತ್ತರಲ್ಲಿ ಹನ್ನೊಂದಾಗಿರುವುದನ್ನು ಅನೇಕ ರೀತಿಯಲ್ಲಿ ವ್ಯಾಖ್ಯಾನಿಸಬಹುದು. ಅಕ್ಕ ಹೇಳಿದ ಹತ್ತರಲ್ಲಿ ಹನ್ನೊಂದಾಗಿ ಬೆರೆದು ಹೋಗುವುದಲ್ಲ. ಹತ್ತಲ್ಲ, ನೂರಲ್ಲ, ಸಾವಿರದಲ್ಲಿ ಅವಳನ್ನು ಇಟ್ಟರೂ ಅವಳು ಬೇರೆಯಾಗಿ ನಿಲ್ಲುವ ಸಮರ್ಥಳಾದುದರಿಂದ ಅವಳ ಅಖಂಡ ಸ್ವಾಭಿಮಾನ ಮತ್ತು ಧೈರ್ಯ ಅವಳಿಗೆ ಹಾಗೆ ಹೇಳಲು ಸಾಧ್ಯವಾಗಿಸಿತು. ಹೊರಗೆ ಏನು ಬೇಕಾದರೂ ಮಾಡಿಯೂ ಒಳಗೆ ಮೈಮರೆದಿರುವ ಸ್ವಾತಂತ್ರ್ಯವನ್ನು ಅವಳು ಎಂದಿಗೂ ಬಿಟ್ಟುಕೊಡುವುದಿಲ್ಲ. ಇದೇ ಅವಳ ನಿಜವಾದ ಸ್ವಾತಂತ್ರ್ಯ "ತನ್ನಲ್ಲಿದ್ದುದ ತಾನರಿಯದನ್ನಕ್ಕ...." ತನ್ನಲ್ಲಿ ಇರುವ ಶಕ್ತಿಯನ್ನು ತಾನರಿಯದಿದ್ದರೆ ತನ್ನ ಸ್ವಾತಂತ್ರ್ಯದ ಪರಿಯನ್ನು ಅವಳು ಹೇಗೆ ವರ್ಣಿಸುತ್ತಾಳೆ?

ಜಗತ್ತಿನ ಎಲ್ಲ ಕಟ್ಟುಪಾಡುಗಳು "....ಇಂತಿವು ಆದಿಯಾಗಿ ತೋರುವ ತೋರಿಕೆಯೆ ನಾನಲ್ಲ, ಎನ್ನವೇ ಅಲ್ಲ, ಎನ್ನ ಅಧೀನವಾಗಿರ್ಪವು ನಾನಿವರ ಅಧೀನವಲ್ಲ....". ಎಲ್ಲವೂ ಅವಳ ಅಧೀನವೇ ಹೊರತು ಅವಳು ಅವುಗಳಿಗೆ ಅಧೀನವಲ್ಲ. ಆಗಲೇ ಹೆಣ್ಣು ಎಲ್ಲವನ್ನೂ ತ್ಯಾಗ ಮಾಡಿಯೇ 'ಸ್ವೇಚ್ಛೆಯಾಗಿರ'ಬೇಕೆಂದು ನಿರೀಕ್ಷಿಸುವ ಜನರಿಗೆ ಅವಳು ಸಡ್ಡು ಹೊಡೆದು ಹೇಳುತ್ತಾಳೆ "ನಾನು ಸರ್ವಸಂಗಪರಿತ್ಯಾಗ ಮಾಡಿದವಳಲ್ಲ, ನಿಮ್ಮ ಕೂಡಿ ಕುಲವಳಿದವಳಲ್ಲ, ಚೆನ್ನಮಲ್ಲಿಕಾರ್ಜುನ". ಇದು ಹೆಣ್ಣಿನ ನಿಜವಾದ ಸ್ವಾತಂತ್ರ್ಯ. ಆಗ ಅವಳು "ನಾ ಹಗೆಯಾದೆನು ಸಂಸಾರಕ್ಕೆಲ್ಲಾ" ಎನ್ನುವ ಮಾತು ಕೇವಲ ಹೇಳಿಕೆಯಾಗಿ ಬರುತ್ತದೆಯೇ ಹೊರತು ಅಲ್ಲಿ ಕೀಳರಿಮೆಯಾಗಲೀ, ಭಂಡ ಧೈರ್ಯವಾಗಲೀ ಕಾಣಿಸುವುದಿಲ್ಲ. ಆಗಲೇ "ನಿನ್ನ ತಾಯಿತನವನೊಲ್ಲೆ ಹೋಗೇ" ಅನ್ನುವ ಆತ್ಮವಿಶ್ವಾಸ ಬರುವುದು. ಆಗಲೇ ಮನ ಬತ್ತಲಾಗುವುದು.

ನಾನು ಬಯಸುವ ಸ್ವಾತಂತ್ರ್ಯ ಅದೇ ರೀತಿಯದು. ❑

ಕೆಳಗಿನ ಮನೆ ರಾಮಕೃಷ್ಣ ಹೆಗ್ಡೆ ಅವರ ಮನೆಯ ಎಂಟು ಸ್ತ್ರೀಯರು ಜೈಲು ಕಂಡವರು. ೧೯೩೩ರ ಸುಮಾರಿನಲ್ಲಿ ಇವರು ಸ್ವಂತ ಮನೆಯನ್ನು ಕಳೆದುಕೊಂಡು ಡೊಂಬೆಯಲ್ಲಿ ನೆಲಸಬೇಕಾಯಿತು. ದೇವಿ ಆಗಾಗ ತೋಟದ ಕೆಲಸಕ್ಕೆ ಬರುತ್ತಿದ್ದ ಹರಿಜನ ಮಹಿಳೆ. ಕರಬಂಧಿ ಶುರುವಾದಾಗ ತಮ್ಮ ಚರಸೊತ್ತು, ಬೆಳ್ಳಿ ಬಂಗಾರ, ದಾಗೀನುಗಳನ್ನು ಹಾಕಿ, ಸರ್ವೆ ನಂ. ೪೮ ಮಣ್ಣಿನಲ್ಲಿ ಹೂತಿಟ್ಟಿದ್ದರು. ಮಳೆ ಜೋರಾಗಿ ಬಂದು ಗುಡ್ಡ ಜರಿದು, ಮರ-ಕೆಸುವಿನ ಗಿಡ ಹುಡುಕುತ್ತಾ ಬಂದ ದೇವಿಗೆ ಕರಡಿಗೆ ಕಾಣಿಸಲು ಅವಳು ಅದನ್ನು ಮುಚ್ಚಿಟ್ಟು ರಾತ್ರಿ ತನ್ನ ಗುಡಿಸಿಲಿಗೆ ಸಾಗಿಸಿ, ಬೆತ್ತದ ಬುಟ್ಟಿಯಲ್ಲಿ ಹಾಕಿ ಅದನ್ನು ಅಟ್ಟದಲ್ಲಿ ಅಡಗಿಸಿಟ್ಟಳು. ಅನಂತರ ಅದನ್ನು ಹೆಗ್ಡೆಯವರ ಮನೆತನಕ್ಕೆ ಮರಳಿಸಿದಳು. ಅವಳಿಗೆ ಹೂತಿಟ್ಟ ನಿಧಿ ಸಿಕ್ಕಿದೆಯೆಂಬ ವಾರ್ತೆ ಕೇಳಿ, ಅವಳನ್ನು ಬಂಧಿಸಿ ಟ್ರೆಜರ್ ಟ್ರೋವ್ ಕಾನೂನಿನಂತೆ ವಿಚಾರಣೆ ನಡೆಸಲಾಯಿತು. ಆದರೆ ಆಕೆ ನಿರ್ದೋಷಿಯಾದಳು. ೧೯೩೪ರಲ್ಲಿ ಗಾಂಧೀಜಿಯವರು ಸಿದ್ದಾಪುರಕ್ಕೆ ಬಂದಾಗ, ಅವರ ದರ್ಶನಕ್ಕೆ ಬಂದಿದ್ದ ದೇವಿಯನ್ನು ಕೈಜೋಡಿಸಿ ಅಭಿನಂದಿಸಿದರು.

ಆಧಾರ : ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು

ಸ್ತ್ರೀ ಮುಕ್ತಿಪಥ - ಪುರುಷ ಪ್ರಧಾನ ಸಂಸ್ಕೃತಿ

ಮಾಲತಿ ಬೇಳೂರು



ಸಾಹಿತ್ಯ, ಸಿನಿಮಾ, ಸಂಗೀತ ಹಾಗೂ ಇನ್ನಿತರ ಸಂವಹನ ಮಾಧ್ಯಮಗಳಲ್ಲಿ ಹೆಣ್ಣಿನ ದೇಹ ಹಾಗೂ ಲೈಂಗಿಕತೆ ಪರಸ್ಪರ ವಿರುದ್ಧ ಉದ್ದೇಶಗಳಿಗೆ ಪ್ರತೀಕ(image)ವಾಗಿ ಬಿಂಬಿತವಾಗುತ್ತಿರುವುದು ಸಮಕಾಲೀನ ಸಾಮಾಜಿಕ ಸಂದರ್ಭದ ವೈಶಿಷ್ಟ್ಯ.

ಈ ಸಂವಹನ ಮಾಧ್ಯಮಗಳು ಪ್ರತಿಬಿಂಬಿಸುವ ಪ್ರತೀಕಗಳು ಸಾಮುದಾಯಿಕ ಪ್ರಜ್ಞೆಯ ಭಾಗವಾಗಿ ಕಾಲಕ್ರಮೇಣ ಸಂಸ್ಕೃತಿ, ನಂಬಿಕೆ ಇತ್ಯಾದಿ ರೂಪ ತಾಳುತ್ತಿವೆ.

ಈ ಮಾಧ್ಯಮಗಳ ಮೂಲಕವೇ ಪ್ರಧಾನ ಸಂಸ್ಕೃತಿಯ ಮುಂದುವರಿಕೆಗೆ ಅನುಕೂಲಕರವಾದ ನಂಬಿಕೆಗಳು, ಸಿದ್ಧಾಂತ (ideology)ಗಳು ಪುನರ್ ಪ್ರತಿಪಾದನೆಯಾಗುತ್ತವೆ; ಮರುಹುಟ್ಟು ಪಡೆಯುತ್ತವೆ. ತನ್ಮೂಲಕ ಪ್ರಧಾನ ಸಂಸ್ಕೃತಿ ಕಾಲಕಾಲಕ್ಕೆ ತನಗೊಡ್ಡುವ ವಿರೋಧವನ್ನು ಬಳಸಿಕೊಂಡು (manipulate) ತನ್ನ ಸ್ವರೂಪ ಬದಲಾಯಿಸಿಕೊಂಡು ಉಳಿಯಲು ಬೆಳೆಯಲು ಮಾಧ್ಯಮಗಳು ಸಹಾಯಕವಾಗುತ್ತವೆ.

ಪ್ರಧಾನ ಸಂಸ್ಕೃತಿಗೆ ವಿರೋಧವೂ ಕೂಡ ಈ ಮಾಧ್ಯಮಗಳ ಮೂಲಕವೇ ವ್ಯಕ್ತವಾಗುತ್ತದೆ.

ಸ್ತ್ರೀ ಲೈಂಗಿಕತೆ, ನಗ್ನತೆ ಕೂಡ ಮಾಧ್ಯಮಗಳ ಮೂಲಕ ಪುರುಷ ಪ್ರಧಾನ ಸಂಸ್ಕೃತಿಯು ಬಂಡವಾಳಶಾಹಿ ಆಧುನಿಕ ಸಮಾಜದಲ್ಲಿ ತನ್ನ ನಿಯಂತ್ರಣಕ್ಕೊಳಪಡಿಸಿಕೊಂಡು 'ನಿಯಂತ್ರಿತ ಮಹಿಳಾ ಸಬಲೀಕರಣ' ಕ್ಕೆಡೆ ಮಾಡಿಕೊಡುತ್ತಿದೆ. ಇನ್ನೊಂದೆಡೆ ಸ್ತ್ರೀ ಲೈಂಗಿಕತೆಯ ಸಮರ್ಥ ಅಭಿವ್ಯಕ್ತಿಯ ಮೂಲಕ ಶತಮಾನಗಳಿಂದ ಸುಲಲಿತವಾಗಿ ಮುಂದುವರೆದುಕೊಂಡುಬಂದ 'ಸ್ತ್ರೀ ಭೋಗದ ಸರಕು' ಎಂಬ ಧೋರಣೆಗೆ ಪ್ರತಿರೋಧವೂ ವ್ಯಕ್ತವಾಗುತ್ತಿದೆ. ಈ ವೈರುಧ್ಯಗಳ ಅರ್ಥೈಸುವಿಕೆ ಮಹಿಳಾ ಅಸ್ಮಿತೆಯ ಅನ್ವೇಷಣೆಗಷ್ಟೆ ಅಲ್ಲದೆ, ಮಹಿಳಾ ಸಾಬಲೀಕರಣವು ಪುರುಷ ಪ್ರಧಾನ ಸಂಸ್ಕೃತಿಯ ನಿಯಂತ್ರಣಕ್ಕೊಳಗಾಗುವುದನ್ನು ಸಕಾಲಕ್ಕೆ ವಿರೋಧಿಸಲೂ ಅಗತ್ಯವಾಗಿದೆ.

ಆಧುನಿಕ ಬಂಡವಾಳಶಾಹಿ ಪುರುಷಪ್ರಧಾನ ಸಂಸ್ಕೃತಿಯು ಸ್ತ್ರೀದೇಹ ಹಾಗೂ ಲೈಂಗಿಕತೆಯನ್ನು, ಇನ್ನಿತರ ಸರಕುಗಳಂತೆ commodified forms ಆಗಿಯೇ ಮಾರಾಟ ಮಾಡುತ್ತವೆ, ಭೋಗಿಸುತ್ತವೆ.

ಇದಕ್ಕೆ ನೇರ ಉದಾಹರಣೆ ವೇಶ್ಯಾವಾಟಿಕೆ. ವೇಶ್ಯಾವಾಟಿಕೆ, ಧಾರ್ಮಿಕ, ಸಾಮಾಜಿಕ ಹಾಗೂ ಭಿನ್ನ ಕಾರಣಗಳಿಂದ ಈ ಹಿಂದೆ ವ್ಯವಸ್ಥಿತವಾಗಿ ನಡೆದುಕೊಂಡು ಬಂದಿದ್ದರೂ, ಲೈಂಗಿಕತೆ commodityಯಾಗಿ ಇಲ್ಲಿ ವಾಣಿಜ್ಯೀಕರಣಗೊಳ್ಳುತ್ತದೆ (ಆಧುನಿಕ ಸಮಾಜದಲ್ಲಿ).

ಆದರೆ ಸಿನಿಮಾ, ಜಾಹಿರಾತು ಹಾಗೂ ವಿಶ್ವಸುಂದರಿ ಸ್ಪರ್ಧೆಗಳಂತಹ ಸಂದರ್ಭಗಳಲ್ಲಿ ಸ್ತ್ರೀದೇಹ, ಲೈಂಗಿಕತೆ ಭಿನ್ನ ರೀತಿಯಲ್ಲಿ ಮಾರಾಟದ ಸರಕುಗಳಾಗಿ ತಮ್ಮ ಸ್ವರೂಪ ಪಡೆದುಕೊಂಡಿವೆ. ಈ ವಿಭಿನ್ನ ರೀತಿಯ ವ್ಯವಹಾರಗಳಲ್ಲಿ ಕೆಲ ಸಾಮ್ಯವಿದೆ. ಇಲ್ಲಿ ಪ್ರಧಾನ ಸಂಸ್ಕೃತಿಯ ಸ್ತ್ರೀ ಭೋಗದ ಸರಕು ಎಂಬ ಧೋರಣೆ ಪುನರ್‌ಪ್ರತಿಪಾದಿತವಾಗುತ್ತದೆ. ಎರಡನೆಯ ಸಂದರ್ಭದಲ್ಲಿ, ಈ ಪ್ರಕ್ರಿಯೆ, ಪ್ರತೀಕ(image)ಗಳ ಸೃಷ್ಟಿಯ ಮೂಲಕ ಆಗುತ್ತದೆ. ಇಲ್ಲಿ 'ಪ್ರತೀಕ'ಗಳ ಮಾರಾಟ ನಡೆದಿದೆ.

ಈ ಎರಡೂ ಸಂದರ್ಭಗಳಲ್ಲಿ ಸ್ತ್ರೀ ದೇಹ ಲೈಂಗಿಕ commodity ಯಾಗಿ ಲೈಂಗಿಕತೆ ಮತ್ತು ಆರ್ಥಿಕತೆಯ ನಡುವಿನ ರೇಖೆಯನ್ನು ಅಳಿಸಿ ಹಾಕುತ್ತದೆ. ಪುರುಷಪ್ರಧಾನ ಸಂಸ್ಕೃತಿ ಬಂಡವಾಳಶಾಹಿ ಆಧುನಿಕತೆಗಳು ಒಂದಾಗಿ ಕಾರ್ಯನಿರ್ವಹಿಸುವ ಕ್ಷೇತ್ರ ಇದಾಗಿದೆ. ಈ ಎರಡೂ ಸಂದರ್ಭಗಳಲ್ಲಿ ಸ್ತ್ರೀ 'figure of public pleasure'. ಇಲ್ಲಿ ಸ್ತ್ರೀ ಏಕಕಾಲಕ್ಕೆ ಮಾರಾಟದ ಸರಕು ಹಾಗೂ ಮಾರಾಟಗಾರ್ತಿ ಎರಡೂ ಆಗಿರುತ್ತಾಳೆ.

ವೇಶ್ಯಾವಾಟಿಕೆಗೆ, ತನ್ಮೂಲಕ ಪ್ರಧಾನ ಸಂಸ್ಕೃತಿಗೆ ಪ್ರತಿರೋಧ ವ್ಯಕ್ತಪಡಿಸುತ್ತ, ಬಲಿಪಶುಗಳಾದವರನ್ನು ಪುನರ್‌ವಸತೀಕರಣ ಮತ್ತಿತರ ಪ್ರಯತ್ನಗಳ ಮೂಲಕ ಪ್ರಧಾನಧಾರೆಗೆ ತರುವ ಪ್ರಯತ್ನವೂ ಆಗುತ್ತಿದೆ.

ಆದರೆ, ಪ್ರತೀಕಗಳ ಮಾರಾಟ ಮಾಡುವ ಎರಡನೇ ಉದ್ಯಮದ ವಿರುದ್ಧ, ಪ್ರಧಾನ ಸಂಸ್ಕೃತಿಗೆ ಪ್ರತಿಸಂಸ್ಕೃತಿಯ ಸೃಷ್ಟಿ, ಪ್ರತಿರೋಧ ಕ್ಲಿಷ್ಟಕರವಾದದ್ದು. ಇವು ಆಧುನಿಕ ಸಮಾಜದ ದ್ವಂದ್ವಗಳು, ಸಬಲೀಕರಣದ ಮಾತನಾಡುತ್ತಲೇ ಅದನ್ನು ಪ್ರಧಾನ ಸಂಸ್ಕೃತಿ ತನ್ನ ನಿಯಂತ್ರಣಕ್ಕೊಳಪಡಿಸುವುದು. ಮೇಲೆ ಹೇಳಿದ ಎರಡನೇ ಸಂದರ್ಭದಲ್ಲಿ ಸಂಕೀರ್ಣ ಪ್ರತಿಕ್ರಿಯೆ ಇರುತ್ತದೆ.

ಜಾಹಿರಾತುಗಳು ನಮ್ಮ ಗಂಭೀರ ಸ್ವರೂಪದ ಅಧ್ಯಯನಕ್ಕೆ ಒಳಪಡುವುದಿಲ್ಲ. ಆದರೆ, ವಿಶ್ವ ಸುಂದರಿ ಸ್ಪರ್ಧೆಯ ಮೂಲಕ ಕಾಸ್ಮೆಟಿಕ್ಸ್, ಕಾಸ್ಟ್ಯೂಮ್ಸ್ ಇಂಡಸ್ಟ್ರಿಗಳನ್ನು ವ್ಯವಸ್ಥಿತವಾಗಿ ನಡೆಸುತ್ತಿರುವ ಪ್ರತಿಷ್ಠಿತ ಹಾಗೂ 'sophisticated' ಉದ್ಯಮದ ಮೂಲಕ ಜಾಗತಿಕ ಮಾರುಕಟ್ಟೆಯಲ್ಲಿ 'ಸ್ತ್ರೀ ಸೌಂದರ್ಯ'ದ ಹೆಸರಲ್ಲಿ ವ್ಯವಹಾರ ಮಾಡುತ್ತವೆ.

1997ರಲ್ಲಿ ವಿಶ್ವ ಸುಂದರಿ ಸ್ಪರ್ಧೆಗೆ ಬಂದ ವಿರೋಧ ಹಾಗೂ ಸಮರ್ಥನೆ ಸ್ತ್ರೀ ಲೈಂಗಿಕತೆಯ ವಿಷಯಕವಾದ ಸಾಂಸ್ಕೃತಿಕ ರಾಜಕಾರಣದ ಮೇಲೆ ಬೆಳಕು ಚೆಲ್ಲುತ್ತದೆ. ಈ ಸ್ಪರ್ಧೆಗೆ ವಿರೋಧ

ವ್ಯಕ್ತಪಡಿಸಿದ ಕೆಲವು ಮಹಿಳಾ ಸಂಘಟನೆಗಳು ಕೂಡ ಹಿಂದುತ್ವವಾದಿ ರಾಷ್ಟ್ರೀಯತೆ ಬಿಂಬಿಸಿದ 'ಭಾರತೀಯ ನಾರಿ'ಯ ಕಲ್ಪನೆಯನ್ನೇ ಮುಂದಿಟ್ಟುಕೊಂಡಿದ್ದವು (ಕೆಲವು ಅಪವಾದಗಳಿವೆ). ಈ 'ಭಾರತೀಯ ನಾರಿ' ಕಲ್ಪನೆ ಪ್ರಧಾನ ಸಂಸ್ಕೃತಿಯು ಅನ್ಯಸಂಸ್ಕೃತಿಗೆ ವಿರೋಧವಾಗಿ ತನ್ನ 'ಹಿರಿಮೆ'ಯನ್ನು ತೋರ್ಪಡಿಸಿಕೊಳ್ಳಲು ಬಳಸಿಕೊಂಡ 'ಮಾಡೆಲ್'. ಇಂತಹುದೇ ಪ್ರತಿರೋಧ ಚಿತ್ರತಾರೆ ಖುಷ್ಬು ತಮಿಳುನಾಡಿನಲ್ಲಿ ಮುಕ್ತ ಲೈಂಗಿಕತೆಯ ಕುರಿತು ಮಾತನಾಡಿದಾಗಲೂ ರಿಚರ್ಡ್ ಗೇರ್ ಶಿಲ್ಪಾಶೆಟ್ಟಿಯನ್ನು ಸಾರ್ವಜನಿಕವಾಗಿ ಚುಂಬಿಸಿದಾಗಲೂ ವ್ಯಕ್ತವಾಯಿತು.

ಆದರೆ, ವಿಶ್ವಸುಂದರಿ ಸ್ಪರ್ಧೆಯ ಸಮರ್ಥನಕಾರರು ಪ್ರಧಾನ ಸಂಸ್ಕೃತಿಯ ಬಲೆಗೆ ಸಿಕ್ಕುವ ಅಪಾಯದಿಂದ ಹೊರತಾಗಿಲ್ಲ. ಸ್ತ್ರೀಯ ಮುಕ್ತತೆ, ಸಬಲೀಕರಣ ಪ್ರಧಾನ ಸಂಸ್ಕೃತಿಯ ನಿರ್ದೇಶನಕ್ಕೊಳಪಟ್ಟಿದೆ, ಆಧುನಿಕ ಬಂಡವಾಳಶಾಹಿ ಸಮಾಜದ 'ಗ್ಲಾಮರ್' ನಡುವೆ, ಸುಲಭವಾಗಿ ಇವರ ಗ್ರಹಿಕೆಗೆ ನಿಲುಕಿಲ್ಲ.

ಈ ಮೊದಲೇ ಹೇಳಿದ ಹಾಗೆ ಪ್ರತಿಭಟನೆಯೂ ಕೂಡ ಪ್ರಧಾನ ಸಂಸ್ಕೃತಿಯಿಂದ ನಿರ್ದೇಶಿತವಾಗುವುದನ್ನು ಗಮನಿಸಿದ ಹಾಗೆಯೇ, ಸಮರ್ಥ, ಎಚ್ಚರದ ಪ್ರತಿಭಟನೆಯ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಇಲ್ಲಿ ವರ್ಗ ಜಾತಿಯ ಪ್ರಶ್ನೆ ತೆಗೆದುಕೊಂಡರೆ ವಿಷಯದ ತಳಕ್ಕಿಳಿಯುವುದು ಸಾಧ್ಯವಾಗುತ್ತದೆ ಮತ್ತು ಇದರ ಇನ್ನಿತರ ಆಯಾಮಗಳನ್ನು ವಿಶ್ಲೇಷಿಸಬಹುದು.

ಈ ಪ್ರತಿಭಟನೆಯ ಪರಂಪರೆಯ ಮಾತು ಬಂದಾಗ ಹನ್ನೆರಡನೇ ಶತಮಾನದ ವಚನಕಾರ್ತಿಯರ ಪೈಕಿ ಅಕ್ಕಮಹಾದೇವಿ ನಮಗೆ ನೆನಪಾಗುತ್ತಾಳೆ.

ಸೆಳೆದ ಸೀರೆಯ ಗಂಡನ ಕೈಯಲ್ಲೇ ಬಿಟ್ಟು ಬೆತ್ತಲೆ ನಡೆದ ಅಕ್ಕ 'ಸ್ತ್ರೀ ದೇಹ'ಕ್ಕೆ ಸಂಬಂಧಿಸಿದ ಅನೇಕ ಮಿಥ್ಯೆಗಳನ್ನು ಪ್ರಶ್ನಿಸಿದ್ದಾಳೆ. ಆದರೆ ಅಕ್ಕನ ಪ್ರತಿಭಟನೆ ಆಕೆಯ ಸಮಕಾಲೀನ ಶರಣೆಯರ ಹಾಗೆ ರಾಗ ಭೋಗಗಳಾಚೆ ಕಣ್ಣಿಟ್ಟ ಅನುಭಾವಿಯದು. ಶರಣೆಯರಾದರೋ 'ಭವಿಗಳಾಗಿದ್ದು', 'ಒಲೆಯೊಳಗಿದ್ದು ಉರಿಮರೆತವರಂತೆ' ಬದುಕಿದವರು.

ಆದರೆ, ನಮಗಿಂದು ಬೇಕಾದ ಪ್ರತಿಭಟನೆಯ ಮಾದರಿ ಭಿನ್ನ. 'ನಮಗೂ ಜೀವವಿದೆ, ಕಾಮವಿದೆ, ಬದುಕಿದೆ, ಈ ದೇಹದ ಮೂಲಕ ಸಿಗುವ ಸುಖ ನಮ್ಮದೇ' ಎಂದು ಭವಿಯಾಗಿದ್ದೂ 'ಉರಿ ಮರೆಯದೆ' ಪ್ರತಿಭಟಿಸಿ ತನ್ನ ಅಸ್ಮಿತೆಯನ್ನು ಕಂಡುಕೊಳ್ಳುವ ಸಾಧಾರಣ ಮಹಿಳೆಯರು.

ಎರಡು ಮಕ್ಕಳ ತಾಯಿ ಪೂಜಾ ಚೌಹಾನ್ ಇತ್ತೀಚೆಗೆ ಕೌಟುಂಬಿಕ ದೌರ್ಜನ್ಯವನ್ನು ವಿರೋಧಿಸಿ ಅರೆಬೆತ್ತಲೆ ನಡೆದಾಗ, ಪ್ರಧಾನ ಸಂಸ್ಕೃತಿಯ ಮಧ್ಯಮ ವರ್ಗಕ್ಕೆ 'ಚುರುಕು' ಮುಟ್ಟಿದುದಲ್ಲದೆ, ಈ ಪ್ರತಿಭಟನಾಕ್ರಮದ ಹಿನ್ನೆಲೆ ಬಗೆಗೆ ಯೋಚಿಸುವಂತೆ ಮಾಡಿತು. ಜೆಸ್ಸಿಕಾ ಕೇಸಿನ ಪ್ರಮುಖ ಸಾಕ್ಷಿ ಬಿಮಾರಮನಿ ಈ ಬಗ್ಗೆ ಬರೆಯುತ್ತಾ, ತಾನು ಜೈಲಿನಲ್ಲಿದ್ದ ಸಂದರ್ಭದಲ್ಲಿ ಎಷ್ಟೋ ಅಮಾಯಕ ಹೆಣ್ಣು ಮಕ್ಕಳು ಹೀಗೆ ಪ್ರತಿಭಟಿಸಲು ಸಾಧ್ಯವಾಗದೆ ಶಿಕ್ಷೆ ಅನುಭವಿಸುತ್ತಿರುವುದನ್ನು ವಿವರಿಸುತ್ತಾರೆ. ತೆಹೆಲ್ಕಾದಲ್ಲಿ ಪ್ರಕಟವಾದ ಅವರ ಈ ಲೇಖನದಲ್ಲಿ ಅರೆನಗ್ನ ಚೌಹಾನ್ ಪ್ರತಿಭಟನೆ ಆಧುನಿಕ ಸಮಾಜಕ್ಕೆ ವ್ಯಕ್ತವಾದ ಒಂದು ಸವಾಲು ಎಂದಿದ್ದಾರೆ.

ಆದರೆ, ಇಂದು ಕಾನೂನಾತ್ಮಕವಾಗಿ ಈ ರೀತಿ ಪ್ರತಿಭಟನೆಗಳು ಸಾಧ್ಯವಾಗದೆ, ಪ್ರತೀಕಗಳ ಮೂಲಕ ವ್ಯಕ್ತವಾಗುತ್ತಿವೆ. ಪ್ರಧಾನ ಸಂಸ್ಕೃತಿಯ ಧೋರಣೆಗೆ ಪ್ರತಿಭಟನೆ ಇಷ್ಟರಲ್ಲೆ ಸಾಧ್ಯವಾದುದು ಎಂದು ಅನ್ನಿಸುತ್ತದೆ.

ಹೀಗೆ ಉದ್ಯಮದಲ್ಲಿ ಆಕೆಯ ನಗ್ನತೆಯ ಪರಿ ನಿರ್ಧಾರವಾಗುವಂತೆಯೇ 'ಸಂಸ್ಕೃತಿ'ಯ ಸಂದರ್ಭದಲ್ಲಿ, ಸ್ತ್ರೀ ನಿಲ್ಲುವ, ನಡೆಯುವ, ಉಡುಪು ಧರಿಸುವ ಬಗೆಗಳೂ ಸಾಂಕೇತಿಕವಾಗಿ ನಿರ್ದೇಶಿತವಾಗಿರುತ್ತವೆ.

ಸಂಜ್ಞೆಗಳು ಪ್ರತೀಕಗಳ ಮೂಲಕ ಕಾಮುಕತೆ ವ್ಯಕ್ತಪಡಿಸುವ ಪುರುಷರಿಗೆ ಸವಾಲೊಡ್ಡುವ ಅನೇಕ ಅಂಶಗಳಿಗೆ ಅಂಚಿನಲ್ಲಿದ್ದೇ ಪ್ರಧಾನ ಶಿಷ್ಟ ಸಂಸ್ಕೃತಿಗೆ ಪ್ರತಿರೋಧಕವಾದ 'ಪಾಪ್ ಕಲ್ಚರ್'ನ ಪ್ರತಿನಿಧಿಯಾಗಿರುವ ಮಡೋನ್ನಾ ಮುಖ್ಯವಾದ ಉದಾಹರಣೆಯಾಗುತ್ತಾಳೆ. ತನ್ನ ಆಂಗಿಕ ಅಭಿನಯಗಳ ಮೂಲಕ, 'ಫಂಕ್‌ಕಲ್ಚರ್' ಮೂಲಕ ಸ್ತ್ರೀ ಲೈಂಗಿಕತೆ ಕುರಿತಾದ ಅನೇಕ 'ಕೋಡ್'ಗಳನ್ನು ಈಕೆ ಮುರಿಯುತ್ತಾಳೆ, ವಿರೋಧಿಸುತ್ತಾಳೆ. 'ಶಿಷ್ಟ ಸಮಾಜದ' ಹೊರಗಿನಿಂದಲೇ ಸಮರ್ಥ ಪ್ರತಿಭಟನೆ ವ್ಯಕ್ತವಾಗುವ ಬಗೆಯಿದು.

ಕನ್ನಡದ ಸಂದರ್ಭದಲ್ಲಿ ಕೆಲವು ಲೇಖಕಿಯರು ತಮ್ಮ ಬರಹಗಳ ಮೂಲಕ ಆಧುನಿಕ ಬಂಡವಾಳಶಾಹಿ ಪುರುಷ ಪ್ರಧಾನ ಸಂಸ್ಕೃತಿಗೆ ಸಮರ್ಥ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ.

ಪ್ರತಿಭಾ ನಂದಕುಮಾರರ ಕೆಲವು ಕವನಗಳಲ್ಲಿ ಪುರುಷನಿಷ್ಠ ಬಂಡವಾಳಶಾಹಿ ಸಂಸ್ಕೃತಿಯ ಜತೆಗೆ ಸಮೃದ್ಧವಾಗಿ ವ್ಯಾಪಿಸುವ ಲೈಂಗಿಕ ರಾಜಕಾರಣದ ಗ್ರಹಿಕೆ, ಸಂಕೇತಗಳಿಗೆ ವಿರೋಧ ವ್ಯಕ್ತವಾಗಿರುವುದನ್ನು ಉದಾಹರಣೆಗಾಗಿ ಗಮನಿಸಬಹುದು.

ಅವರ 'ಅರ್ಧನಾರೀಶ್ವರ' ಕವನದಲ್ಲಿ ಪ್ರಶ್ನಿಸುತ್ತಾರೆ :

"ನಾಚಿಕೆಯಾಗಬೇಕು ಜೀವಕ್ಕೆ
ಅರ್ಧ ಕ್ರೆಡಿಟ್ ತೆಗೆದುಕೊಳ್ಳುವುದಕ್ಕೆ
ಹೆಣ್ತನದ ಸೂಚನೆಯೆಂದು ಒಂದು
ಸ್ತನ ಧರಿಸಿಬಿಟ್ಟರೆ ಆಯಿತೇ ಲಿಂಗಕ್ಕೆ
ಅರೆ ಬಸಿರು ತಡೆಯಬಹುದೇ ಪೂರ್ಣ ಗರ್ಭದ ಹೊರೆ ?
ಇಡೀ ದೇಹವೇ ತಡೆಯಲಾಗದು
ಪಾರ್ಶ್ವಕ್ಕೆ ಸಾಕೇ ಪ್ರಣಯದ ಬೇಗೆ?

ಈ ಪದ್ಯದಲ್ಲಿ ದೇಹದ ಬಗ್ಗೆ ಛೇಡನೆ ಮಾಡುವ ಮೂಲಕ, ರೂಪ, ಜನನಕ್ಷಮತೆ, ಸ್ತ್ರೀ ಲೈಂಗಿಕತೆಯ ಅಭಿವ್ಯಕ್ತಿ ಈ ಸಂಬಂಧದ ಮಿಥ್ಯೆಗಳಿಗೆ ಕೂಡ ಪ್ರಶ್ನೆಗಳಿವೆ. ಇದೇ ಕವನದಲ್ಲಿ ಲೈಂಗಿಕ ಸುಖದ ಕುರಿತಾಗಿರುವ ಅಸಮಾನತೆಯ ಧೋರಣೆಗಳೂ ಪ್ರಶ್ನೆಗೊಳಗಾಗಿವೆ:

ಗಂಡೆಂಬ ಗತ್ತು ಗರ್ವಗೌಡಿಕೆ
ಗಳು ಮಲಗಿ ಬಿಡುತ್ತವೆ. ಕೆಲಸವಾದ ಮೇಲೆ
....
ಉತ್ತಿ ಬಿತ್ತಿ ಬೆಳೆದು ಹೂವಾಗಿ
ಎಲ್ಲ ಮುಗಿದಿದ್ದರೂ
ನಾನಿನ್ನೂ ಫಲವತ್ತಾಗಿದ್ದೆ
ಅದಕ್ಕೆ ನಾನೇನು ಮಾಡಲಿ?
ಮುಂಗಾರಿನ ಹೊಳೆಯಂತೆ ಉಕ್ಕುವ
ನನ್ನನ್ನು ಅವರು ಲೀಟರುಗಳಲ್ಲಿ ಅಳೆಯುತ್ತಾರೆ.

(34ನೇ ಪುಟ ನೋಡಿ)



ಭಾರತೀಯ ಮಹಿಳೆಯರು : ಅಂದು ಇಂದು



ಕೋ. ಚೆನ್ನಬಸಪ್ಪ

ಅಂದು-ಸ್ವಾತಂತ್ರ್ಯಪೂರ್ವದಲ್ಲಿ, ಅಷ್ಟೇಕೆ ಅದಕ್ಕಿಂತ ಶತಮಾನಗಳ ಹಿಂದೆ ಮನೆಯಲ್ಲಿ "ಹೆಣ್ಣು ಹುಟ್ಟಿತೆಂದರೆ ಹುಣ್ಣು ಹುಟ್ಟಿದಂತೆ" ಎಂದು ಭಾವಿಸಿ, ಏನೋ ಆಗಬಾರದ್ದು ಆಗಿ ಹೋಯಿತೆಂದು ದುಃಖಾಕ್ರಾಂತ ರಾಗುತ್ತಿದ್ದ ಕಾಲ ಅದು. ಗಂಡು ಮಗನಿಲ್ಲದಿದ್ದರೆ ಹೆತ್ತವರಿಗೆ ಸತ್ತಾಗ ಸದ್ಗತಿ-ಸ್ವರ್ಗದ ಪ್ರಾಪ್ತಿ ಇಲ್ಲ. 'ನ ಪುತ್ರಸ್ಯ ಗತಿರ್ನಾಸ್ತಿ' ಎಂಬ ಶಾಸ್ತ್ರ ಸೂತ್ರವನ್ನೆ ರಚಿಸಿದರು. ಆದ ಕಾರಣ ಹೆಣ್ಣು ಹುಟ್ಟಿದಾಗ ಹೇಗೊ ವಿಧಿಯಿಲ್ಲದೆ ಸಹಿಸಿಕೊಂಡು, ಅದು ತೊಲಗಿದರೆ ಸಾಕೆಂದು ಎಂಟು ವರ್ಷ ತುಂಬುವುದನ್ನೆ ಕಾದಿದ್ದು ಮದುವೆಮಾಡಿ ಕೈತೊಳೆದುಕೊಳ್ಳು ತ್ತಿದ್ದರು. ಈ ಬಾಲ್ಯವಿವಾಹ ದುಷ್ಟಪದ್ಧತಿಯನ್ನು ನಿರ್ಮೂಲನೆ ಮಾಡಲು 19ನೇ ಶತಮಾನದ ಆದಿಯಲ್ಲಿ ರಾಜಾರಾಮ್ ಮೋಹನರಾಯ್ ಪ್ರಯತ್ನಿಸಿ ಬ್ರಿಟಿಷರ ಕಾಲದಲ್ಲಿಯೆ ಒಂದು ಶಾಸನ ಮಾಡಿಸಿದರು. ಆದರೂ ಆ ದುಷ್ಟಪದ್ಧತಿ ಇನ್ನೂ ನಿರ್ಮೂಲನೆ ಆಗಿಲ್ಲ. ಈಗ 18 ತುಂಬದ ಯುವತಿಗೆ ಮದುವೆ ಮಾಡಬಾರದೆಂಬ ಶಾಸನ ಜಾರಿ ಯಲ್ಲಿದೆ. ಆದರೂ ಇಂದಿಗೂ ಮಂತ್ರಿಗಳು, ಶಾಸಕರ ಸಮ್ಮುಖದಲ್ಲಿಯೆ ಅಪ್ರಾಪ್ತ ಬಾಲಕಿಯರಿಗೆ ಮದುವೆ ಮಾಡುತ್ತಿದ್ದಾರೆ. ಅಂದಿಗೂ ಇಂದಿಗೂ ಬಾಲ್ಯವಿವಾಹ ಪದ್ಧತಿಯಲ್ಲಿ ಸಂಪೂರ್ಣ ಬದಲಾವಣೆ ಆಗಿಲ್ಲ - ಅಂದಿನಷ್ಟು ಸಾರ್ವತ್ರಿಕವಾಗಿಲ್ಲದಿರಬಹುದು.

ಇನ್ನು ಮದುವೆ ಆದ ಮೇಲೆ ಅಂದಿಗೆ ಹೆಣ್ಣಿನ ಪಾಡು ಏನಾಗಿತ್ತೆಂಬುದನ್ನು ನೆನೆದರೆ ಎದೆ ನಡುಗುತ್ತದೆ. ಶ್ರೀ ಸ್ವಾಮಿ ವಿವೇಕಾನಂದರು ಆ ಸ್ಥಿತಿಯನ್ನು ತಮ್ಮದೊಂದು ಪತ್ರದಲ್ಲಿ ವರ್ಣಿಸಿ ದ್ದಾರೆ. ಹನ್ನೆರಡು ವರ್ಷ ತುಂಬಿದ - ಮೈನೆರೆತೊಡನೆಯೆ ಹೆಣ್ಣು ಹಡೆಯುವ ಯಂತ್ರವಾಗಿ ಹೋಗುತ್ತಿದ್ದಳು !! ಮೂವತ್ತು ಮೂವತ್ತೈದು ವರ್ಷ ತುಂಬುವುದರ ಒಳಗಾಗಿ ಕನಿಷ್ಠ ಡಜನ್ ಮಕ್ಕಳನ್ನು ಹಡೆದು ಮುಪ್ಪಾಗುತ್ತಿದ್ದಳು. ಬಹುಜನರು ಬಡವರೆ ಇದ್ದ ಈ ದೇಶದಲ್ಲಿ ಹಡೆಯುವ ಯಂತ್ರವಾಗಿರುವುದರ ಜೊತೆಗೆ ಕುಟುಂಬದ ಸಂರಕ್ಷಣೆಗಾಗಿ ದುಡಿಯುವ ಯಂತ್ರವಾಗಿ ಹೋಗಿದ್ದಳು. ಯುವತಿಯಾಗಿದ್ದಾಗ ಗಂಡ, ಅತ್ತೆ ಮಾವಂದಿರ ದಾಸಿಯಾಗಿ ದುಡಿಯುತ್ತಿದ್ದಳು. ಮುದುಕಿಯಾದ ಮೇಲೆ ಮಕ್ಕಳ, ಮೊಮ್ಮಕ್ಕಳ ಆಶ್ರಯದಲ್ಲಿ ಬದುಕಬೇಕಾಗಿತ್ತು. ಅವರ ಈ ಸ್ಥಿತಿ ಶಾಸ್ತ್ರಸಮ್ಮತವೆಂದು ಸಮರ್ಥಿಸಲು ಸ್ತ್ರೀ ಚಿಕ್ಕವಳಿದ್ದಾಗ ಹೆತ್ತವರ, ಯುವತಿಯಾಗಿದ್ದಾಗ ಗಂಡನ, ಮುದುಕಿಯಾದ ಮೇಲೆ ಮಕ್ಕಳ ಆಶ್ರಯದಲ್ಲೆ ಬೆಳೆಯಬೇಕೆಂಬ ಶಾಸ್ತ್ರದ ಕಟ್ಟಳೆ ಮಾಡಿದರು. ಜೊತೆಗೆ 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂಬ ಶಾಸನ ಮಾಡಿದರು. ಅವರ ಈ ಪರಿಸ್ಥಿತಿ ಸ್ವಾತಂತ್ರ್ಯಪೂರ್ವದಲ್ಲಿ ನಿಸರ್ಗನಿಯಮವೆಂಬಂತೆ ಪಾಲಿಸಿ ಕೊಂಡುಬಂದರು. ಅವರು ಅನ್ಯತಂತ್ರವಾಗಿಯೆ ಮುಂದುವರಿಯಲು ಆಕೆಗೆ ಹೆತ್ತವರ ಆಸ್ತಿಯಲ್ಲಿ ಪಾಲಿಲ್ಲದ ವ್ಯವಸ್ಥೆಯನ್ನು ಧರ್ಮಶಾಸ್ತ್ರದಿಂದ ವಿಧಿಸಿದರು ! ಅವರ ಈ ಆರ್ಥಿಕ ಅ-ಸ್ವತಂತ್ರ ಪರಿಸ್ಥಿತಿಯಿಂದ ಬಿಡುಗಡೆ ಪಡೆಯಲು ದನಿ ಎತ್ತದಂತೆ ಮಾಡಿತ್ತು ! ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿಯ ಸೂತ್ರ ಸಂಪೂರ್ಣ ಯಶಸ್ವಿಯಾಗಿತ್ತು.

ಅಂದಿನ ಸ್ತ್ರೀಯರಿಗೆ ಅಕ್ಷರ ವಿದ್ಯೆಯೂ ವಂಚಿತವಾಯಿತು. ಇಪ್ಪತ್ತನೆ ಶತಮಾನದ ಆದಿಯಲ್ಲಿ ಸಾವಿರಕ್ಕೊಬ್ಬ ಹುಡುಗಿ ಶಾಲೆಯ ಕಟ್ಟೆ ಹತ್ತಿದ್ದರೆ ದೊಡ್ಡ ಮಾತಾಗಿತ್ತು. 1920-30ರ ಕಾಲಾವಧಿಯಲ್ಲಿ ನಾವು ಕಂಡಂತೆ ಪ್ರಾಥಮಿಕ ಶಾಲೆಗಳಲ್ಲಿ ಹುಡುಗಿಯರು ಒಬ್ಬರಾದರೂ ಇರುತ್ತಿರಲಿಲ್ಲ! ಸಾಹುಕಾರರ ಮಕ್ಕಳು ಶಹರದಲ್ಲಿ ಬ್ರಾಹ್ಮಣರ ಹೆಣ್ಣುಮಕ್ಕಳು ಯಾರೊ ಒಬ್ಬಿಬ್ಬರು ಶಾಲೆಯಮುಖ ನೋಡುತ್ತಿದ್ದರು. ಅಂಥವರು ಪ್ರೌಢಶಾಲೆಗೆ ಕಾಲಿಡುತ್ತಿದ್ದುದು ಬಹುವಿರಳ. ನಾನು 1939ರಿಂದ 44ರ ವರೆಗೆ ಕಾಲೇಜಿನಲ್ಲಿದ್ದಾಗ ಒಟ್ಟು 600 ವಿದ್ಯಾರ್ಥಿ ಗಳಲ್ಲಿ ಕೇವಲ 8-10 ಹುಡುಗಿಯರು ಕಾಲೇಜಿನಲ್ಲಿ ಓದುತ್ತಿದ್ದರು! ಈಗಲಾದರೋ ಪ್ರತಿ ಗ್ರಾಮದಲ್ಲಿ ಬಾಲಕಿಯರಿಗಾಗಿಯೆ ಪ್ರತ್ಯೇಕ ಶಾಲೆಗಳಿವೆ. ಪ್ರೌಢಶಾಲೆಗಳೂ, ಮಹಾವಿದ್ಯಾಲಯಗಳೂ ಬಾಲಕಿಯರಿಗೆ, ಯುವತಿಯರಿಗೆ ಸ್ಥಾಪನೆ ಆಗಿವೆ. ದೇಶದಾದ್ಯಂತ ಶಾಲೆಯಿರುವ ಯಾವ ಊರಿನಲ್ಲಾದರು ಹುಡುಗಿಯರು ಸಾಲುಸಾಲಾಗಿ ಶಾಲೆಗೆ ಹೋಗುವ ದೃಶ್ಯ ನಯನ ಮನೋಹರ! ಮನಸ್ಸಿಗೆ ಹರ್ಷದಾಯಕ! ಅವರು ಪಬ್ಲಿಕ್ ಪರೀಕ್ಷೆಗಳಲ್ಲಿ, ಉನ್ನತ ಶಿಕ್ಷಣದಲ್ಲಿ, ತಾಂತ್ರಿಕ ಶಿಕ್ಷಣದಲ್ಲಿ ಹುಡುಗರನ್ನು ಮೀರಿಸಿ, ಅವರ ತಲೆಯ ಮೇಲೆ ಹೊಡೆದು-ಮುಂದಕ್ಕೆ ಬಂದಿದ್ದಾರೆ. ಸ್ವಾತಂತ್ರ್ಯಾನಂತರದ ಸತ್ಫಲಗಳಲ್ಲಿ ಇದೊಂದು ಮಹತ್ವದ ಸಿದ್ಧಿ. 'ಹೆಂಗಸರ ಬುದ್ಧಿ ಮೊಳಕಾಲು ಕೆಳಗೆ' ಎಂದು ಕಟ್ಟಿದ್ದ ಗಾದೆಯ ಮಾತನ್ನು ಸಂಪೂರ್ಣ ಸುಳ್ಳಾಗಿಸಿ 'ಶಿಕ್ಷಣದ ವಿಚಾರದಲ್ಲಿ ಸ್ತ್ರೀ ಪುರುಷರಿ ಗಿಂತ ಜಾಣೆ' ಎಂಬ ಮಟ್ಟಕ್ಕೆ ಮುಟ್ಟಿದ್ದಾರೆ.

ಅಂದು ಸ್ತ್ರೀ ವಿದ್ಯೆಯಿಲ್ಲದೆ, ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಗೃಹಬಂದಿ ಯಾಗಿದ್ದಳು. ಆಕೆ ಹೆರಿಗೆಯ ಯಂತ್ರವಾಗಿ ಸದೃಢ ಮೇಧಾವಿ ಮಕ್ಕಳನ್ನು ಹಡೆದು ದೇಶಕ್ಕೆ ಕೊಡುವ ಗೃಹಿಣಿಯಾಗಿ ಗೃಹದಲ್ಲಿಯೆ ಇದ್ದು ಹೊಸ್ತಿಲು ದಾಟದ, ಪರಪುರುಷರ ಮುಖನೋಡದ, ಅವರೊಡನೆ ಮಾತನ್ನೂ ಆಡದ ಸಾಧ್ವಿ. ಅವರು ಅಂದು ಸಂಪೂರ್ಣ ಪುರುಷಾಧೀನ ಪ್ರಾಣಿ - ಎತ್ತು, ಎಮ್ಮೆ, ಕುದುರೆಯಂತೆ. ಅಂದಿನ ಸ್ತ್ರೀಯರ ಈ ಸ್ಥಿತಿಯನ್ನು

ಕೇಳಿದರೆ ಇಂದಿನ ಯುವತಿಯರು ನಂಬಲಾರರು. ಅಂದ ಮೇಲೆ ಅಂದಿನ ಸ್ತ್ರೀಯರು ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲಿ, ನಾಡುನುಡಿಯ ಸೇವೆಯಲ್ಲಿ ಕಾಲಿಡುವ ಮಾತೆ ಇರಲಿಲ್ಲ. ಸುತರಾಂ ಸಾಧ್ಯವಿರಲಿಲ್ಲ.


ಆದರೆ ಇಂದು : ನಮ್ಮ ನೂತನ ರಾಷ್ಟ್ರಪತಿ ಮಹಿಳೆ ! ಜಗತ್ತಿನಲ್ಲಿ ಅದರಲ್ಲೂ ಅಮೇರಿಕೆಯಂಥ ಬೃಹತ್ ರಾಷ್ಟ್ರದಲ್ಲಿ ಅದರ 210 ವರ್ಷಗಳ ಇತಿಹಾಸದಲ್ಲಿ ಒಬ್ಬರೂ ಮಹಿಳಾ ಅಧ್ಯಕ್ಷಿಣಿ ಆಗಿಲ್ಲ. ನಮ್ಮ ದೇಶ ಸ್ವತಂತ್ರವಾಗಿ ಅರವತ್ತು ವರ್ಷಗಳಲ್ಲಿ ಓರ್ವ ಮಹಿಳೆ ಈ ದೇಶದ ರಾಷ್ಟ್ರಪತಿ ಆಗಿದ್ದಾರೆಂದಮೇಲೆ ಸ್ವಾತಂತ್ರ್ಯದ ಮಹಿಮೆ ಎಷ್ಟೆಂದು ಕೊಂಡಾಡಲಿ? ಅಮೆರಿಕೆಯಲ್ಲಿ ಮಹಿಳೆಯರಿಗೆ 1927ರ ವರೆಗೂ ಮತದಾನದ ಹಕ್ಕೇ ಇರಲಿಲ್ಲ ಎಂದರೆ ನಮ್ಮ ದೇಶದ ದಲಿತ ಅನಕ್ಷರಸ್ಥ ಹೆಣ್ಣುಮಕ್ಕಳು, ಹರಿಜನ ಯುವತಿಯರು, ಲಂಬಾಡಿ ಹಟ್ಟಿಯ ಹೆಂಗಳೆಯರು ನಂಬಲಾರರು. 1927ರಲ್ಲಿ ಅಮೆರಿಕೆಯ ಮಹಿಳೆಯರು ಅಂದಿನ ಅಧ್ಯಕ್ಷರ ನಿವಾಸದ ಮುಂದೆ 'ಅಧ್ಯಕ್ಷರೆ ನಮಗೆಂದು ಸ್ವಾತಂತ್ರ್ಯ' ಎಂಬ ಫಲಕ ಹಿಡಿದು ಧರಣಿ ಸತ್ಯಾಗ್ರಹ ಮಾಡಿದರು. ಆದರೆ ನಮ್ಮ ದೇಶ ಸ್ವತಂತ್ರವಾದ ನಂತರ, ನಮ್ಮ ಸಂವಿಧಾನ ಜಾರಿಯಲ್ಲಿ ಬಂದ ದಿನ ಹೊತ್ತು ಹುಟ್ಟುವ ಮುಂಚೆಯೆ ಸ್ತ್ರೀಯರು ಮತದಾನದ ಹಕ್ಕು ಪಡೆದರು. ಆ ಅಮೂಲ್ಯ ಪವಿತ್ರ ಮತದಾನದ ಹಕ್ಕಿನ ಅಮೋಘವಾದ ಫಲವೆ ರಾಷ್ಟ್ರಪತಿ ಪ್ರತಿಭಾತಾಯಿ ಪಾಟೀಲ್!

ಈ ಪವಾಡ ಹೇಗಾಯಿತು ? ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ಸ್ತ್ರೀ ಸಮುದಾಯ ವಹಿಸಿದ ಪಾತ್ರ, ಆ ತರುವಾಯ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಮಹಿಳಾಮಣಿಯರು ವಹಿಸಿದ ಪಾತ್ರ ಈ ಪವಾಡ ಸಿದ್ಧಿಸಲು ನೆರವಾಯಿತು. ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀಜಿಯ ನಾಯಕತ್ವದಲ್ಲಿ ಸ್ತ್ರೀಯರು ಸತ್ಯಾಗ್ರಹದಲ್ಲಿ ಪಾಲ್ಗೊಂಡ ಮಹತ್ವ ಸ್ತುತ್ಯರ್ಹ. ಗಾಂಧೀಜಿಯ ಸತ್ಯಾಗ್ರಹ ತಂತ್ರಕ್ಕೆ ಮಂತ್ರಕ್ಕೆ ಓಗೊಟ್ಟ ಪ್ರಥಮ ಅವಿದ್ಯಾವಂತ ಮಹಿಳೆ ಆಂಧ್ರ ಪ್ರಾಂತದ ಮಂಗಮ್ಮ. ಆಕೆಯಿಂದ ಮೊದಲಾದ ಸ್ತ್ರೀ ಸಾಹಸ ಬೃಹದಾಕಾರವಾಗಿ ಬೆಳೆಯಿತು. ಸ್ವಾತಂತ್ರ್ಯಾನಂತರ ಹಿಂದೂ ಶಾಸನ ಸಂಹಿತೆ, ಪ್ರಜಾಪ್ರಾತಿನಿಧ್ಯ ಕಾಯಿದೆ, ಹಿಂದೂ ವಿವಾಹ ಕಾಯಿದೆ, ಹಿಂದೂ ಮಹಿಳಾ ಆಸ್ತಿ ಹಕ್ಕು ಕೊಟ್ಟ ಶಾಸನ ಮುಂತಾದ ಪ್ರಗತಿಶೀಲ ಶಾಸನಗಳಿಂದ ಇಂದಿನ ಮಹಿಳೆಯರು ಅವಕಾಶ ಸಿಕ್ಕರೆ ಯಾವ ಉನ್ನತಮಟ್ಟಕ್ಕೆ ಎಲ್ಲ ಕ್ಷೇತ್ರಗಳಲ್ಲೂ ಏರಬಲ್ಲರೆಂಬುದನ್ನು ಸಾಬೀತುಪಡಿಸಿದ್ದಾರೆ. ಚುನಾವಣೆಯ ಕಾಲಕ್ಕೆ ಮಹಿಳೆಯರು, ಅದರಲ್ಲೂ ಹಳ್ಳಿಯ ಬಡ ಅನಕ್ಷರಸ್ಥ ಸ್ತ್ರೀಯರು ಮತ ಚಲಾವಣೆಯಲ್ಲಿ ತೋರಿಸುತ್ತಿರುವ ಆಸಕ್ತಿ ಪ್ರಶಂಸಾರ್ಹವಾದುದು. ನಮ್ಮ ಪ್ರಜಾಸತ್ತೆ ಇಷ್ಟರಮಟ್ಟಿಗಾದರೂ ಉಳಿದಿರುವುದು ಮಹಿಳೆಯರ ಮತದಾನ ಶ್ರದ್ಧೆಯಿಂದ.

ಇಂದಿನ ಮಹಿಳೆಯರ ಸ್ಥಿತಿಗೆ ಕರ್ನಾಟಕ (ಮಂಡಲ) ಪಂಚಾಯ್ತಿ ರಾಜ್ ಕಾನೂನಿನಲ್ಲಿ ಮಹಿಳೆಯರಿಗೆ ಸ್ಥಾನಗಳನ್ನು ಶೇಕಡಾ 25ರಷ್ಟು ಮೀಸಲಿಡುವ ರಾಮಕೃಷ್ಣ ಹೆಗಡೆ ಸರ್ಕಾರದ ಮಹತ್ವದ ಕಾರ್ಯ ಸ್ಮರಣೀಯ. ಮಂಡಲಪಂಚಾಯ್ತಿ ಕಾಯಿದೆಯಲ್ಲಿ ಮೊಟ್ಟಮೊದಲ ಬಾರಿಗೆ ಮಹಿಳಾ ಸದಸ್ಯರಿಗೆ ಮೀಸಲಾತಿ ಕಲ್ಪಿಸಿ ಇಡೀ ದೇಶಕ್ಕೆ ಮಾದರಿಯಾಯಿತು. ಈ ಮಾದರಿಯನ್ನು ರಾಜೀವಗಾಂಧಿ ಸರ್ಕಾರ ಸಂವಿಧಾನ 73 ಮತ್ತು 74ನೇ ತಿದ್ದುಪಡಿಯ ಮೂಲಕ ಅಳವಡಿಸಿದ್ದು ಇಂದಿನ ಸ್ತ್ರೀಯರ ರಾಜಕೀಯ ಅಭ್ಯುದಯದ ಬುನಾದಿ. ಇದರಿಂದ ಜಾಗೃತರಾದ ಮಹಿಳೆಯರು - ಅನಕ್ಷರಸ್ಥರೂ ಸಹಿತ - ಆರ್ಥಿಕ ಸ್ವಾವಲಂಬನೆ ಸಾಧಿಸುತ್ತಿದ್ದಾರೆ. ಸ್ತ್ರೀ ಸ್ವಶಕ್ತಿ ಸಹಾಯಕ ಸಂಸ್ಥೆಗಳು ಅವರನ್ನು ಬಹುಬಲಶಾಲಿಗಳನ್ನಾಗಿ ಮಾಡಿವೆ. ಇದು ಇಂದಿನ ಸ್ತ್ರೀಯರ ಅಮೋಘ ಸಾಧನೆ.

ಇಂದಿನ ಸ್ತ್ರೀಯರು ಸಾಹಿತ್ಯ ಕ್ಷೇತ್ರದಲ್ಲೂ ದೊಡ್ಡ ಎತ್ತರಕ್ಕೆ ಏರಿದ್ದಾರೆ. ಅವರು ಅಭಿನಂದನಾರ್ಹರು. ಕಾಲಾನುಕಾಲಕ್ಕೆ ನಮ್ಮ ಸ್ತ್ರೀಯರು ಪುರುಷರನ್ನು ಮೀರಿ ಮುಂದುವರಿದು ಪೂಜನೀಯರಾಗುತ್ತಾರೆ. ಆಗ "ಯತ್ರನಾರ್ಯಸ್ತು ಪೂಜ್ಯಂತೆ ರಮಂತೇ ತತ್ರದೇವತಾಃ" ಎಂಬ ಆರ್ಷೇಯ ಉಕ್ತಿ ನಿಜವಾದೀತು. ❑

ಸ್ವಾತಂತ್ರ್ಯ ಹೋರಾಟ ಮಾಡುತ್ತಿದ್ದ ಜನರ ಜಮೀನು, ಮನೆ, ವಶಪಡಿಸಿಕೊಂಡು ಸೀಲು ಮಾಡಲಾಗುತ್ತಿದ್ದು, ಅಂತಹ ಸೀಲು ಮಾಡಿದ ಮನೆಗಳನ್ನು ನುಗ್ಗಿ ಸೀಲು ಮುರಿಯುತ್ತಿದ್ದ ಕಾರ್ಯವನ್ನು ಮಹಿಳೆಯರೇ ಹೆಚ್ಚಾಗಿ ಮಾಡುತ್ತಿದ್ದರು. ಉತ್ತರ ಕರ್ನಾಟಕದ ಮನೆಯಲ್ಲಿ ಬೊಮ್ಮಯ್ಯನಾಯಕರ ಮನೆ ಸೀಲಾಗಿರಲು, ಮಾಣುದೇವಿ ಸೀಲು ಒಡೆದು ಒಳಹೋದಳು. ಅವಳ ರಟ್ಟೆಯನ್ನು ಹಿಡಿದು ಪೊಲೀಸರು ಹೊರಕ್ಕೆಳೆದರು. ಆಕೆ ಮತ್ತೆ ಒಳ ಹೊಕ್ಕಳು. ಉಳಿದ ಹೆಂಗಸರನ್ನೂ ಒಳಹೋಗಗೊಡದೆ ಪೊಲೀಸರು ಅವಳನ್ನು ಮತ್ತೆ ಹೊರಕ್ಕೆ ಎಳೆದು ತಂದರು. ಪೊಲೀಸರ ಕೈ ಕೊಸರಿ ಆಕೆ ಮತ್ತೆ ಒಳ ನುಗ್ಗುವಾಗ



ಪೊಲೀಸರು ಆಕೆಯ ಚಂಡಿಕೆ ಹಿಡಿದು ಕೆಡವಿ ಬೂಟುಕಾಲಿನಿಂದ ಒದ್ದು, ಕಪಾಳಕ್ಕೆ ಏಟು ಕೊಡಲು, ಆಕೆ ಮೂರ್ಛೆ ಹೋದಳು. ಆಕೆಯ ಕಣ್ಣಿಗೆ ಮೆಣಸಿನ ಪುಡಿಯನ್ನು ತೂರಿದರು. ಆಕೆಗೆ ಮೂರ್ಛೆ ಬಂದಿದ್ದರಿಂದ ಆಕೆ ಸತ್ತಿರಬಹುದೆಂದು ಪೊಲೀಸರು ಭಾವಿಸಿದರು. ಅಲ್ಲಿದ್ದವರ ನೆರವಿನಿಂದ ಆಕೆಗೆ ಚಿಕಿತ್ಸೆ ನೀಡಲಾಯಿತು. ಮರುದಿನವಷ್ಟೆ ಅವಳಿಗೆ ಸ್ಮೃತಿ ಬಂದು 3-4 ದಿನಗಳ ಅನಂತರ ಮತ್ತೆ ಅದೇ ಮನೆಗೆ ನುಗ್ಗಿ ಜೈಲು ಕಂಡಳು.

ಆಧಾರ : ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು

ನೀವೂ ಓದಿ

ಒಡೆದ ಹೃದಯದ ಕನ್ನಡಿ 'ಟ್ರೈನ್ ಟು ಪಾಕಿಸ್ತಾನ್'

ಡಾ. ಪಿ. ಚಂದ್ರಿಕಾ

ಭವ್ಯ ಭಾರತದ ಕಲ್ಪನೆಯನ್ನು ಕಣ್ಣಲ್ಲಿರಿಸಿಕೊಂಡವರಿಗೆ ಇಂದಿಗೂ ಕಾಡುವ ದುಃಸ್ವಪ್ನ ವಿಭಜನೆಯದ್ದು. ಅಖಂಡ ಭಾರತದ ಕಲ್ಪನೆಗೆ ಬೆನ್ನಲ್ಲೇ ಚೂರಿ ಹಾಕಿದ ವಿಭಜನೆಯ ಹಿಂದೆ ಇದ್ದದ್ದು ರಾಜಕೀಯ ಉದ್ದೇಶವೇ ಹೊರತು, ಸಾಮಾನ್ಯ ಮನಸ್ಸುಗಳದ್ದಲ್ಲ. ಭಾರತದ ಚರಿತ್ರೆಗೆ ಬ್ರಿಟಿಷರ ಕೊಡುಗೆಯಾಗಿ ದಕ್ಕಿದ ಪ್ರಜಾಪ್ರಭುತ್ವದ ಕಲ್ಪನೆಯ ಜೊತೆಗೆ ಕೋಮುದ್ವೇಷದ ನಿರಂತರವಾದ ಉದ್ವೇಗ ಭಾರತದಂತಹ ದೇಶದ ಆತ್ಮಸಾಕ್ಷಿಯನ್ನು ಪದೇಪದೇ ಪ್ರಶ್ನಿಸುತ್ತಾ ನಮ್ಮ ಎದುರಿಗೆ ನಿಂತಿದೆ. ಯಾರಿಗೆ ಬೇಕಿತ್ತು ಇಂಥ ವಿಭಜನೆ? ಇದರ ಬೇರುಗಳು ಎಲ್ಲಿವೆ ಎನ್ನುವ ಇತಿಹಾಸವನ್ನು ಕೆದಕುತ್ತಾ ಹೊರಟಂತೆಲ್ಲಾ ನಮ್ಮೆದುರಿಗೆ ತೆರೆದುಕೊಳ್ಳುವ ಚಿತ್ರ ಬೇರೆಯದ್ದೇ ಬಣ್ಣವನ್ನು ಕೊಡುತ್ತದೆ.

ಈ ದೇಶದ ಚರಿತ್ರೆಯನ್ನು ನೋಡುವಾಗ ಒಂದುಕಾಲಕ್ಕೆ ದಂಡಯಾತ್ರೆಗಳ ಮೂಲಕ ಭಾರತವನ್ನು ಅತಿಕ್ರಮಿಸುವ ಪ್ರಯತ್ನವನ್ನು ಮಾಡಿದ ಮುಸ್ಲಿಂ ಧರ್ಮೀಯರು ಅನಂತರದ ಚರಿತ್ರೆಯ ಒಂದು ಭಾಗವಾಗಿ ಕಾಣುತ್ತಾರೆ. ಈ ನೆಲದ ಗುಣಕ್ಕೆ ಹೊಂದಿಕೊಂಡು ಇಲ್ಲಿ ಸಂಸ್ಕೃತಿಯ ಮತ್ತೊಂದು ಮಜಲನ್ನು ಬೆಳೆಸಲು ಕಾರಣರೂ ಆಗಿದ್ದಾರೆ. ಇಷ್ಟಾದರೂ ದಂಡಯಾತ್ರೆಯ ಮೂಲಕವೇ ಭಾರತದ ನೆಲಕ್ಕೆ ಕಾಲಿರಿಸಿದ ಅವರನ್ನು ನಮ್ಮ ಅನುಮಾನದ ಕಣ್ಣುಗಳಿಂದಲೇ ನೋಡುವಂತಾದದ್ದು ಮಾತ್ರ ದುರಂತ. ಇದಕ್ಕೆ ಕಾರಣ ಕಳೆದ ಚರಿತ್ರೆಯ ಪುಟಗಳನ್ನು ಇರುವುದಕ್ಕಿಂತ ಬೇರೆಯಾಗಿ ಚಿತ್ರಿಸುತ್ತಾ ಬಂದಿದ್ದು.

ಅನೇಕ ಶತಮಾನಗಳ ಹಿಂದೆ ನಡೆದ ದಂಡಯಾತ್ರೆಯ ಅನಂತರ ಅವರನ್ನ ನಮ್ಮವರನ್ನಾಗಿ ಮಾಡಿಕೊಳ್ಳಲು ಈ ನೆಲವನ್ನು ಅವರ ಕೈಗೆ ಒಪ್ಪಿಸಿ ಆಡಳಿತವನ್ನು ನಡೆಸಲು ಸಹಕರಿಸಿದ್ದು, ಎಲ್ಲದರ ಅನಂತರವೂ ಭಾರತ ಪಾಕಿಸ್ತಾನದ ವಿಭಜನೆಯ ಕರಾಳವಾದ ಘಟನೆಯನ್ನು ನಮ್ಮ ಜನ ಹೇಗೆ ಸ್ವೀಕರಿಸಿದ್ದಾರೆ ಎನ್ನುವುದು ಅಚ್ಚರಿಯ ಸಂಗತಿಯೇ.

ಬಾಬ್ರಿ ಮಸೀದಿ ಬಿದ್ದ ನೆನಪಲ್ಲೇ ದರ್ಗಾವೊಂದರಲ್ಲಿ ಗಣಪತಿಯ ಆರಾಧನೆಯನ್ನು ಕಂಡು ಮಾತಿಲ್ಲದಂತಾಗುತ್ತೇವೆ. ನನ್ನೂರಿನಲ್ಲಿ ಜನಿವಾರ ನೇಯುತ್ತಿದ್ದುದು ಮುಸ್ಲಿಮರೆ ಎಂದು ನಾಮವನ್ನು ತೀಡಿ ಕೊಳ್ಳುತ್ತಾ ಪುತಿನ ಹೇಳಿದ ವಿಷಯ, ದರ್ಗಾದಲ್ಲಿ ಪೂಜೆ ಎಂದರೆ ಊರ ಶ್ಯಾನುಭೋಗನ ಮನೆಯಿಂದ ಸಕ್ಕರೆ ಓದಿಸಿದ ನಂತರವೇ ಆ ಧರ್ಮೀಯರು ಸಕ್ಕರೆ ಓದಿಸುವ ಪದ್ಧತಿ ಇನ್ನೂ ಜೀವಂತ. ಇಂದಿಗೂ ಹಳ್ಳಿಗಳಲ್ಲಿ ಚಿಕ್ಕ ಮಕ್ಕಳು ಹೆದರಿಕೊಂಡರೆ ದರ್ಗಾಕ್ಕೆ ಹೋಗಿ ತಾಬೀಜನ್ನು ಕಟ್ಟಿಸಿಕೊಂಡು ಬರುವ ರಿವಾಜನ್ನು ನೋಡುತ್ತೇವೆ. ನಮ್ಮ ಜೀವನದ ಜೊತೆಜೊತೆಗೇ ಒಂದಾಗಿ ಬೆರೆತುಹೋಗಿರುವ ನಮ್ಮದನ್ನಾಗಿಸಿಕೊಂಡಿರುವ ಅನೇಕ ಪದ್ಧತಿಗಳುಂಟು. ಇದೇ ಅಲ್ಲದೆ ಹಿಂದೂ ಮುಸ್ಲಿಮರು ಸೇರಿಯೇ ಆಚರಿಸುವ ಅನೇಕ ಹಬ್ಬಗಳೂ ನಮ್ಮಲ್ಲಿವೆ. ಇನ್ನು ಕಲೆಯ ವಿಚಾರವಾಗಿ ಹಿಂದೂ ಸಾರ್ಸೆನಿಕ್ ಪದ್ಧತಿಯನ್ನಂತೂ ಭಾರತದ ಬಹುಮುಖ್ಯ ವಾಸ್ತುಶಿಲ್ಪ ಮಾದರಿ ಎಂದು ಪರಿಗಣಿಸಲಾಗಿದೆ.

ಇಂಥಾ ಇತಿಹಾಸವಿರುವ ಭಾರತದ ಇತಿಹಾಸದಲ್ಲಿ ಇಂಥದ್ದೊಂದು ಮರೆಯಲಾಗದ, ಮರೆತರೂ ಮತ್ತೆಮತ್ತೆ ಕೆದಕುವ ಈ ಇಬ್ಭಾಗವನ್ನು ಇಂದಿಗೂ ಭಾರತದ ಮನಸ್ಸುಗಳು ಖಂಡಿಸುತ್ತಲೇ ಬಂದಿವೆ. ಹಿಂದೂ, ಸಿಖ್ಖ್ ಅಥವಾ ಮುಸ್ಲಿಮರ ಪ್ರತ್ಯೇಕತಾ ವಾದಗಳನ್ನ ಬೇರೆಬೇರೆಯವರು ಬೇರೆಬೇರೆ ಥರದಲ್ಲಿ (ಅಥವಾ ತಮಗೆ ಬೇಕಾದ ರೀತಿಯಲ್ಲಿ) ಹೇಳುತ್ತಾ ಬಂದಿದ್ದಾರೆ. ಆದರೆ ಇಂದಿಗೂ ಇರುವ ಒಂದು ವಾದವೆಂದರೆ ಎರಡೂ ಧರ್ಮದ ಗಣ್ಯರು ನಿರ್ದಿಷ್ಟವಾದ ಮತ್ತು ತೃಪ್ತಿಕರವಾದ ಒಂದು ಒಪ್ಪಂದಕ್ಕೆ ಬಂದಿದ್ದರೆ ವಿಭಜನೆಯನ್ನು ಖಂಡಿತಾ ತಪ್ಪಿಸಬಹುದಾಗಿತ್ತು. ಆದರೆ ಹಾಗೆ ಬರುವುದು ರಾಜಕಾರಣಕ್ಕೆ ಬೇಕಾಗಿರಲಿಲ್ಲ. ಈ ನಡುವೆ ಏನೂ ಬೇಕಿರದ ಈ ತನ್ನ ಪಾಡಿಗೆ ತಾನು ಬದುಕುತ್ತಿದ್ದವರ ಕಥೆ ಏನಾಯಿತು ಎನ್ನುವುದು ಇತಿಹಾಸ ಬಲ್ಲ ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಬ್ರಿಟಿಷರು ಬಿತ್ತಿಹೋದ ಈ ಪ್ರತ್ಯೇಕತಾವಾದ ಅನಂತರ ಭಾರತದ ಎಲ್ಲಾ ಅವಘಡಗಳಿಗೂ ಕಾರಣವಾಯಿತು.

ಭಾರತದ ಈ ವಿಭಜನೆಯನ್ನು ಕುರಿತಂತೆ ಅನೇಕ ಕಾದಂಬರಿಗಳು ಕಥೆ ಕವಿತೆಗಳೂ ಬಂದಿವೆ. ಸೃಜನಶೀಲ ಮನಸ್ಸುಗಳಿಗೆ ಯಾವತ್ತೂ ವಸ್ತುವಾಗಬಲ್ಲ ಮತ್ತು ಮರೆಯದ ನೋವಿನ ಮೂಲವಾಗಿರುವ ಈ ಘಟನೆ ಮೇಲೆ ಕಾಣಿಸುವಷ್ಟು ಸರಳವಾಗಿಲ್ಲ. ಅದು ಸೂಕ್ಷ್ಮಜ್ಞನಾದ ಪ್ರತಿಯೊಬ್ಬ ಭಾರತೀಯನ ಮನಸ್ಸಿನಲ್ಲೂ ಉಳಿದಿರುವ ಸಂಗತಿಯೇ. ಭೌಗೋಳಿಕವಾದ ಈ ವಿಭಾಗೀಕರಣದ ಮೂಲಕ ಮನಸ್ಸುಗಳನ್ನು ಒಡೆಯುವ ಕುತಂತ್ರ ಭಾರತದ ಒಟ್ಟೂ ಪರಿಸರದ ಮೇಲೆ ಬೀರಿರುವ ಪರಿಣಾಮ ತ್ರಾಸದಾಯಕವಾದ್ದೇ. ರಾಷ್ಟ್ರ ವಿಭಜನೆಯ ಈ ದುರಂತದ ಕಥನ ಅಷ್ಟಕ್ಕೇ ನಿಲ್ಲಲಿಲ್ಲ. ಅವಕಾಶವಾದೀ ಜನರ ಕೈಗೆ ಸಿಕ್ಕು ಆತ್ಮಶಾಂತಿಯನ್ನೇ ಕಲಕಿತು. ಇಂತಹ ಘಟನೆಯನ್ನು ಮುಖ್ಯವಾಗಿರಿಸಿಕೊಂಡ ಕಾದಂಬರಿ ಖುಷ್‌ವಂತ್‌ಸಿಂಗ್‌ರ 'ಟ್ರೈನ್ ಟು ಪಾಕಿಸ್ತಾನ್'.



ಭಾರತ ಕಂಡ ಅತೀ ಜನಪ್ರಿಯ ಪತ್ರಕರ್ತ ಖುಷ್‌ವಂತ್‌ಸಿಂಗ್. ಜೀವನವನ್ನು ಅತಿಯಾದ ಪ್ರೀತಿಯಿಂದ ಕಾಣುವ ಖುಷ್‌ವಂತ್‌ಸಿಂಗ್‌ಗೆ ಮನುಷ್ಯತ್ವದ ಎತ್ತರಗಳು ಮುಖ್ಯವಾಗುತ್ತವೆ. ಹಾಗಾಗಿ ಅವರಿಗೆ ಹಿಂದೂ ಮುಸ್ಲಿಂ ಎನ್ನುವ ವಿಭಾಗದ ಬಗ್ಗೆ ನಂಬಿಕೆ ಇಲ್ಲ. ಅವಕಾಶವಾದೀ ಮನುಷ್ಯ ಎಲ್ಲಾದರೂ ಸರಿ ಒಂದು ಅವಕಾಶಕ್ಕಾಗೇ ಕಾಯುತ್ತಾನೆ ಎನ್ನುವುದು ಅವರ ನಂಬಿಕೆ. ಹೀಗಾಗಿ ಅವರು ಅಂದಿನ ಜೀವನದ ಹತ್ತಿರಕ್ಕೆ ಹೋಗಿಯೇ ಬರೆಯುತ್ತಾರೆ. ತಾವು ಜೀವನದಲ್ಲಿ ಕಂಡ ಅತ್ಯಂತ ತಲ್ಲಣದ ಬದುಕಿಗೆ ಜೀವಕೊಡಲು ಹವಣಿಸುತ್ತಾರೆ. ಒಂದು ಕಾಲ್ಪನಿಕ ಗ್ರಾಮವೊಂದರಲ್ಲಿ ನಡೆಯುವ ಘಟನೆಗಳು ನಮ್ಮ ಮನ ಕಲಕುತ್ತವೆ. ತಲತಲಾಂತರದಿಂದಲೂ ಒಂದೇ ಹಳ್ಳಿಯಲ್ಲಿ ಬದುಕುತ್ತಿರುವ ಎಲ್ಲಾ ಕೋಮಿನ ಜನರ ನಡುವೆ ಅನಿವಾರ್ಯವಾಗಿ ಒಂದು ಸಂಬಂಧ ಏರ್ಪಟ್ಟಿರುತ್ತದೆ. ಅದು ಕೆಲಸದ ಕಾರಣದಿಂದ, ಅವಲಂಬನೆಯ ಕಾರಣದಿಂದ ಹುಟ್ಟಿದ್ದರೂ ಅವುಗಳನ್ನ ಮೀರಿ ಒಂದು ಭಾವನಾತ್ಮಕ ಸಂಬಂಧವಾಗಿರುತ್ತದೆ. ತಲೆಮಾರುಗಳಿಂದ ಒಂದೇ ಹಳ್ಳಿಯಲ್ಲಿ ಇದ್ದು ಆ ನೆಲದೊಂದಿಗೆ ಹೊಂದಿದ ಸಂಬಂಧವನ್ನು ಅಷ್ಟು ಸುಲಭಕ್ಕೆ ಇದು ನಿನ್ನದಲ್ಲ ಎಂದಾಗ ಆಗುವ ಆಘಾತವನ್ನು ಸಹಿಸಿಕೊಳ್ಳುವುದು ಕಷ್ಟವೇ. ಆಗ ಜೀವ ತಲ್ಲಣಿಸಿ ಹೋಗುತ್ತದೆ. ಸಂಬಂಧಗಳನ್ನ ಕಡಿದುಕೊಳ್ಳಲೂ ಆಗದೇ ಉಳಿಸಿಕೊಳ್ಳಲೂ ಆಗದೇ ಅತಂತ್ರವಾಗುವ ಮನಸ್ಸಿನ ತಾಕಲಾಟವೆ ಈ ಕಾದಂಬರಿಯ ವಸ್ತು. ಭಾರತದ ಪ್ರಸ್ತುತ ಸಮಸ್ಯೆಯ ಇನ್ನೊಂದು ಮುಖ ಕಾಣಿಸಿಕೊಳ್ಳುವುದು ವಿಭಜನೆಯಲ್ಲಿ. ಭಾರತ ಮತ್ತು ಪಾಕಿಸ್ತಾನ ಎನ್ನುವ ಎರಡು ದೇಶಗಳು ಹುಟ್ಟಿಕೊಂಡಿದ್ದು ಯಾಕೆ ಎಂದು ಅರಿಯದ ಸಾಮಾನ್ಯ ಜನರು ಸ್ವಾತಂತ್ರ್ಯ ಬಂದ ಸುಖವನ್ನೂ ಅನುಭವಿಸಲಾಗದೇ ಒದ್ದಾಡುತ್ತಾರೆ. ದೇಶ ಒಡೆದದ್ದು ನಿಮ್ಮ ಒಳ್ಳೆಯದಕ್ಕೇ ಎಂದು ಎಷ್ಟೇ ಹೇಳಿದರೂ ಈ ಬದುಕನ್ನು ಕಳೆದುಕೊಂಡು ಸಾಗುವ ಜನರಿಗೆ ಹಿಂಸೆಯ ಪರಮಾವಧಿಯಲ್ಲಿ ಇಡೀ ದೇಶ ಮುಳುಗಿದ್ದು, ಎದೆಯಾಂತರಾಳದಲ್ಲಿ ಗೆರೆಯನ್ನು ಕೊರೆದುಕೊಂಡಿದ್ದು ಗೊತ್ತೇ ಆಗುವುದಿಲ್ಲ. ಆ ಮೂಲಕ ವಿಕೃತಿಗಳಿಗೆ ಎಡೆಮಾಡಿಕೊಟ್ಟ ಅನೇಕ ಸಂಗತಿಗಳಲ್ಲಿ ಡಕಾಯಿತಿಯೂ ಒಂದು. ಮನುಷ್ಯ ಸಹಜ ವ್ಯಾಪಾರಗಳ ನಡುವೆ ಅದನ್ನ ಅರಿಯದಂತೆ ನಟಿಸುವ ಧರ್ಮದ ನಿಲುವುಗಳನ್ನ ಎಂದಿಗೂ ಒಪ್ಪಲಾಗುವುದಿಲ್ಲ. ದೇಹದ ಆತುರಕ್ಕೆ ಧರ್ಮದ ಹೆಸರನ್ನ ತೊಡಿಸಿ ಆದ ಅತ್ಯಾಚಾರಕ್ಕೆ ಕೊನೆಯೇ ಇಲ್ಲ.

ಕೊನೆಗೂ ಧರ್ಮ ಇಂತಹ ಅವಘಡಗಳ ಅವಕಾಶವನ್ನು ಒದಗಿಸಿಕೊಡುವ ಸಂಗತಿಯಾಗಿ ಕಾಣುತ್ತದೆ. ಲೂಟಿ, ಸುಲಿಗೆ ಮುಂತಾದವುಗಳು ಸರಿ ಎನ್ನುವ ಭಾವನೆಯನ್ನ ಬಿತ್ತುತ್ತದೆ. ಧರ್ಮದ ರಂಗು ಕಳೆದ ಬದುಕಿನ ಬವಣೆಗಳ ಒಟ್ಟು ಮೊತ್ತವೇ 'ಟ್ರೈನ್ ಟು ಪಾಕಿಸ್ತಾನ್'. ಪಾಕಿಸ್ತಾನದಿಂದ ಇಲ್ಲಿಯ ಜನರನ್ನ ಕರೆದೊಯ್ಯಲು ಅಲ್ಲಿನ ಜನರನ್ನು ಇಲ್ಲಿಗೆ ಬಿಡಲು ಬರುವ ಟ್ರೈನನ್ನು ಜನ ಕಾಯುತ್ತಾರೆ. ಅಲ್ಲಿನ ಟ್ರೈನ್ ಜೀವಂತ ಜನರ ಬದಲು ಸತ್ತ ಜನರನ್ನ ಹೊತ್ತು ಬಂದಿರುತ್ತದೆ ಎನ್ನುವ ಸುದ್ದಿಯೇ ಉದ್ವಿಗ್ನ ವಾತಾವರಣಕ್ಕೆ ಕಾರಣವಾಗುತ್ತದೆ. ಸಿಖ್ಖನಾದ ಜಗ್ಗನ ಮಗುವನ್ನು ಹೊತ್ತ ಭವಿಷ್ಯದ ಭರವಸೆಯಾಗಿ ಕಾಣುವ ಮುಸ್ಲಿಂ ಹುಡುಗಿ ನೂರನ್, ಅವಳನ್ನ ಒಪ್ಪಿಕೊಂಡರೂ ಒಪ್ಪದಂತೆ ಕಾಣುವ ಜಗ್ಗನ ತಾಯಿ, ತನ್ನ ಧರ್ಮದ ಬಗ್ಗೆ ಗುಟ್ಟನ್ನು ಬಿಟ್ಟುಕೊಡದ ಸಮಾಜ ಕಾರ್ಯಕರ್ತ ಇಕ್ಬಾಲ್, ತನ್ನ ಜನರ ಒಳಿತಿನ ಬಗ್ಗೆ ಚಿಂತಿಸುತ್ತಲೇ ಅಧಿಕಾರದ ಅಮಲಿನಲ್ಲಿ ಮಗಳ ವಯಸ್ಸಿನ ಹುಡುಗಿಯನ್ನ ಅಪ್ಪಿಕೊಳ್ಳಲು ಮುಂದಾಗುವ ಮ್ಯಾಜಿಸ್ಟ್ರೇಟ್ ಹುಕುಂ ಚಂದ್, ಅಧಿಕಾರದ ಎದುರು ತಲೆ ತಗ್ಗಿಸಿ ನಿಲ್ಲುವ ಇನ್‌ಸ್ಪೆಕ್ಟರ್, ದರ್ಗಾದ ಹಕೀಮ, ಡಕಾಯಿತ ಮಲ್ಲಿ ಹೀಗೆ ಅನನ್ಯವಾದ ಒಂದು ಜಗತ್ತನ್ನೇ ಸೃಷ್ಟಿಸುತ್ತಾ ಹೋಗುತ್ತಾರೆ.

ಸ್ವತಂತ್ರ ಬಂದ ಇಷ್ಟು ವರ್ಷಗಳ ಅನಂತರವೂ ಭಾರತದ ಪರಿಸ್ಥಿತಿ ಇದಕ್ಕಿಂತ ಬೇರೆ ಆಗಿಲ್ಲ. ಇಂದಿಗೂ ಟ್ರೈನ್ ಟು ಪಾಕಿಸ್ತಾನದ ವಾತಾವರಣ ಬದಲಾಗಿಲ್ಲ. ಅವಮಾನದ ರೀತಿ, ಅನುಮಾನದ ಮಾನದಂಡ ಎಲ್ಲವೂ ಹಾಗೇ ಇದೆ. ಆದರೆ ಇಂದು ಸೌಹಾರ್ದದ ಹೆಸರಿನಲ್ಲಿ ಭಾರತದಿಂದ ಪಾಕಿಸ್ತಾನಕ್ಕೂ ಪಾಕಿಸ್ತಾನದಿಂದ ಭಾರತಕ್ಕೂ ಬಸ್ಸು ರೈಲುಗಳು ರಾಜಕೀಯ ಕಾರಣಕ್ಕಾಗಿ ಓಡಾಡುತ್ತಿವೆ. ಆದರೆ ಅನುಮಾನದ ಹದ್ದಿನ ಕಣ್ಣುಗಳು ಮಾತ್ರ ಬದಲಾಗಿಲ್ಲ. ಖುಷ್‌ವಂತ್ ಸಿಂಗ್‌ರ 'ಟ್ರೈನ್ ಟು ಪಾಕಿಸ್ತಾನ್'ನ ತಲ್ಲಣಗಳು ಕಡಿಮೆಯಾದಂದು, ಮನಸ್ಸುಗಳ ಬಿರುಕು ಕಡಿಮೆಯಾಗುತ್ತದೆ. ಮನಸ್ಸುಗಳು ಸ್ವಾತಂತ್ರ್ಯದ ಸವಿಯನ್ನ ಸವಿಯುವವರೆಗೂ ಕೊಳೆಯದೇ ಉಳಿದರೆ ಅಷ್ಟೇ ಸಾಕು.

'ಟ್ರೈನ್ ಟು ಪಾಕಿಸ್ತಾನ್' ಲೇ: ಖುಷವಂತ್‌ಸಿಂಗ್,
ಅನು: ಎಂ.ಬಿ. ರಾಮಮೂರ್ತಿ, ಲಂಕೇಶ್ ಪ್ರಕಾಶನ, ಬೆಂಗಳೂರು. (2007)

❑

ಸರಯೂ ನದಿಯಾಳದಲ್ಲಿ

ಸರಯೂ ನದಿಯಾಳದಲ್ಲಿ
ಪುಳಕ್ಕನೆ ಸುತ್ತುತಿದೆ ಪುಟ್ಟಮೀನು
ಹಾಯಾಗಿ
ಇರುವಷ್ಟಗಲಕ್ಕೆ ಮೈಚಾಚಿ.
ಹೊತ್ತು ಮೂಡುವ ಮೊದಲೇ
ಕ್ರೌರ್ಯ ಹರಿಸಿದ ರಕ್ತ
ಸತ್ತ ಸಾವಿನ ಸುದ್ದಿ
ರುಂಡವಿದ್ದರೆ ಮುಂಡವೆಲ್ಲಿ?
ಹುಡುಕಾಡುವ ಬಂಧುಗಳು
ಚರಂಡಿಯಲಿ ಕೊಳೆತು ಎಂದೋ ಬಯಲಾಗುವ ಗುಟ್ಟು
ವರ್ತಮಾನಕ್ಕೆ ಭೂತದ ಕೊಂಡಿ.
ಅಜ್ಜ ಮೂಲೆಯಲಿ ಕುಳಿತು ಗೊಣಗುತ್ತಾನೆ
ಗೋಡೆ ಕೆಡವಿದರೋ ಹೇಗೆ?
ಸರಯೂ ನದಿಯಾಳದಲಿ ಮೆಲ್ಲನ್ನ ಮುಲುಕಾಟ,
ಕಣ್ಣೀರು ಕಲಕಿದ್ದ ಲಕ್ಷ ಲಕ್ಷ ತಾಯಂದಿರ ಶೋಕ
ದಿಕ್ಕುತೋಚದೆ ಮೀನು ಓಡುತ್ತದೆ.
ಅನುಮಾನ ಹದ್ದುಗಳ ಸುತ್ತಾಟ,
ಕತ್ತಿಗಳ ಮಸೆದಾಟ
ಹೀಗಿರುವುದರ ನಡುವೆಯೇ
ಪುಟ್ಟ ತಂಗಿ ಪಕ್ಕದ ಮನೆಯ ಫಾತಿಮಾಳ ಜೊತೆ
ಕುಂಟಾಬಿಲ್ಲೆಯಾಡುತ್ತಾಳೆ.
ದಟ್ಟವಿಸಿದೀ ಮೋಡಗಳು
ಹಗಲ ಹೊತ್ತೇ ಹರಡಿಕೊಂಡ ಮಿಂಚು
ಅಪ್ಪ ಗದರುತ್ತಾನೆ, ಆ ಎಡಚಳ ಜೊತೆ ಹೋದೀಯ ಜೋಕೆ.
ತಟ್ಟನೆ ನುಡಿಯುತ್ತಾಳೆ ತಂಗಿ,
ಅವ್ಳೇನೂ ಕುಂಟಾಬಿಲ್ಲೆ ಹಿಂದು ಮುಂದಾಡುವುದಿಲ್ಲ.
ಸರಯೂನದಿಯಾಳದಲ್ಲಿ ಮೂರ್ತಗೊಂಡಿದ್ದು ನಗುತ್ತದೆ,
ಮೀನು ಮೆತ್ತಗೆ ಅತ್ತಿಂದಿತ್ತ ಚಲಿಸುತ್ತದೆ
ಹೊರಗೆ ಮತ್ತೆ ಕುಂಟಬಿಲ್ಲೆ
ಮುಗ್ಧ ಕಣ್ಣುಗಳಲ್ಲಿ
ಮತ್ತೊಂದು ಕ್ಷಣದ ಬದುಕು
ಕಾಯುತ್ತಾ ಕುಳಿತಿದೆ.

– ಚಂದ್ರಿಕಾ



ಕಲಾ ಇತಿಹಾಸ ಮತ್ತು ಸ್ತ್ರೀ ಸಂವೇದನೆ

ಪ್ರೊ. ಎಂ.ಎಚ್. ಕೃಷ್ಣಯ್ಯ

ಸಾವಿರಾರು ವರ್ಷಗಳ ಪರಂಪರೆಯಿಂದ ಬಂದ ವಿಚಾರಗಳನ್ನು, ಪರಿಕಲ್ಪನೆಗಳನ್ನು, ತತ್ತ್ವ-ಸಿದ್ಧಾಂತಗಳನ್ನು ಇಪ್ಪತ್ತನೇ ಶತಮಾನದ ವಿಚಾರವಾದಿಗಳು, ಚಿಂತಕರು ಬದಲಿಸಿದರು. ಅದರಲ್ಲೂ ಸಾಹಿತ್ಯ, ಕಲೆ, ಸೌಂದರ್ಯ ಮೀಮಾಂಸೆಗಳಿಗೆ ಸಂಬಂಧಿಸಿದ ಭಾಷೆ, ಅರ್ಥ, ವ್ಯಕ್ತಿತೆ, ದೃಶ್ಯತೆ, ಪಠ್ಯಗುಣ, ದೇಹ, ಚರಿತ್ರೆ, ಸೌಂದರ್ಯ ಮುಂತಾದ ವಿಷಯಗಳ ಬಗ್ಗೆ ಸಸ್ಸೂರ್, ಫ್ರಾಯ್ಡ್, ಲೆವಿ-ಸ್ಟ್ರಾಸ್, ಬಾರ್ಥೆ, ಡೆರಿಡಾ, ಲೆಕಾನ್, ಲ್ಯೋತಾರ್ಡ್, ಬೆಂಜಾಮಿನ್, ಫುಕೊ, ಅಡೆರ್ನೊ ಮುಂತಾದವರು ಪ್ರಶ್ನಿಸಿ, ಚರ್ಚಿಸುತ್ತಾ, ಆಲೋಚನಾ ವಿಧಾನಗಳನ್ನೇ ಬದಲಿಸಿದರು. ಸ್ತ್ರೀ ಚಳವಳಿಯ ಪ್ರಭಾವವೂ ಸಾಹಿತ್ಯದಂತೆ ಕಲೆಯ ಕ್ಷೇತ್ರದಲ್ಲೂ ಆಯಿತು. ಹೀಗಾಗಿ, ಕಲೆಯ ಇತಿಹಾಸವೆಂಬುದು ಅಲುಗಿಸಲಾರದ ಅಖಂಡ ಬಂಡೆಯೇನಲ್ಲ, ಕಲಾ ಇತಿಹಾಸಕ್ಕೂ ಒಂದು ಇತಿಹಾಸವಿದೆ, ಅದು ಕಾಲದುದ್ದಕ್ಕೂ ಪಕ್ಷಪಾತದಿಂದ ಕೂಡಿದೆ ಎಂದು ಕಲಾ ವಿಮರ್ಶಕಿಯರು ತೋರಿದರು.

ಲಿಂಡಾನಾಖ್‌ಲಿನ್ ಎಂಬ ಕಲಾವಿಮರ್ಶಕಿ 1971ರಷ್ಟು ಹಿಂದೆ, 'ವುಮನ್ ಇನ್ ಎ ಸೆಕ್ಸಿಸ್ಟ್ ಸೊಸೈಟಿ', ಅನಂತರ ಬಂದ 'ಆರ್ಟ್ ಅಂಡ್ ಸೆಕ್ಸುಯಲ್ ಪಾಲಿಟಿಕ್ಸ್' ಎಂಬ ಸಂಪಾದಿತ ಗ್ರಂಥಗಳಲ್ಲಿ "ಮಹಾನ್ ಕಲಾವಿದೆಯರು ಏಕಿಲ್ಲ" ಎಂಬ ಲೇಖನ ಬರೆದರು. ಆ ಲೇಖನ ತುಂಬ ವಾದವಿವಾದ ಎಬ್ಬಿಸಿತು. ಅದಕ್ಕೆ ಆಕೆ ನೀಡಿದ ಕಾರಣ ಪುರುಷ ದೃಷ್ಟಿಯ ಕಲಾ ಇತಿಹಾಸ. ಇದಕ್ಕೂ ಮೂಲಭೂತವಾಗಿ ಪ್ರಶ್ನಿಸಿದಾಕೆ ಗ್ರಿಸೆಲ್ಡಾ ಪೊಲಾಕ್. ಆಕೆ 'ಈಸ್ಥೆಟಿಕ್ಸ್ ಆಫ್ ಡಿಫರೆನ್ಸ್' ಲೇಖನ ಬರೆದು ಸೌಂದರ್ಯ ಪರಿಕಲ್ಪನೆಗಳನ್ನೇ ಪ್ರಶ್ನಿಸಿದರು. ಅದಕ್ಕೂ ಮುನ್ನ 1981ರಲ್ಲಿ ರೋಜಿಕಾ ಪಾರ್ಕರ್ ಜೊತೆಗೂಡಿ 'ಓಲ್ಡ್ ಮಿಸ್ಟ್ರೆಸಸ್ : ವುಮೆನ್, ಆರ್ಟ್ ಅಂಡ್ ಐಡಿಯಾಲಜಿ' ಗ್ರಂಥ ಬರೆದು ಬಂಡಾಯ ಸಾರಿದರು. ಪಾಶ್ಚಾತ್ಯ ಕಲಾ ಇತಿಹಾಸದಲ್ಲಿ ಓಲ್ಡ್ ಮಾಸ್ಟರ್ಸ್ ಎಂಬುದು ಹಿರಿಯ ಮಹಾನ್ ಕಲಾವಿದರಿಗೆ, ಅವರ ಪ್ರತಿಭಾ ಔನ್ನತ್ಯದ ಸಂಕೇತವಾಗಿ ಸೂಚಿಸುವಂತಹುದು. ಅದು ಡಾವಿಂಚಿ, ಮೈಖೆಲ್ ಏಂಜೆಲೊ, ರೆಂಬ್ರಾಂಟ್ ಮುಂತಾದವರ ಪ್ರತಿಭೆ, ಕೊಡುಗೆಯನ್ನು ನೆನಪಿಸುತ್ತದೆ. ಆ ಹೆಸರಿನ ಗ್ರಂಥಗಳೂ ಬಂದಿವೆ. ಕಲಾ ಇತಿಹಾಸ, ಸೌಂದರ್ಯ ಮೀಮಾಂಸೆಗಳ ದೃಷ್ಟಿ ಪುರುಷಕೇಂದ್ರಿತವಾಗಿ, ಆ ಕಣ್ಣಪಟ್ಟಿಯ ಸಂಕುಚಿತ ದೃಷ್ಟಿಯಿಂದ ರೂಪಿಸಿದ ಸೂತ್ರಗಳೇ ಸಾರ್ವತ್ರಿಕ ಪ್ರಮಾಣಗಳಾಗಿ ಪರಿಣಮಿಸಿವೆ. ಸೌಂದರ್ಯದ ಪರಿಕಲ್ಪನೆಯೂ ಗಂಡಿನ ಕಣ್ಣಿನದು. 'ಜೀನಿಯಸ್' ಪದದ ವಿವರಣೆಯೂ ಪಕ್ಷಪಾತದ ದೃಷ್ಟಿಯದು. ಆದ್ದರಿಂದಲೇ, ಕಲೆಯ ಕ್ಷೇತ್ರಕ್ಕೆ ಸ್ತ್ರೀಯರ ಪ್ರವೇಶವನ್ನು ನಿರಾಕರಿಸಲಾಯಿತು. ಸ್ಟುಡಿಯೋಗಳಲ್ಲಿ ನಗ್ನಶರೀರದ ಅಧ್ಯಯನಾವಕಾಶವನ್ನು ನಿಷೇಧಿಸಲಾಯಿತು. ಕಲಾ ಇತಿಹಾಸ ಎಂಬುದು ಕಲೆಯನ್ನು ಮ್ಯೂಸಿಯಂ, ಸಂಗ್ರಹಕಾರರುಗಳಿಗೆ ಸೀಮಿತಗೊಳಿಸಿತು. ಪುರುಷ ಕಲಾವಿದರ ಈ ಆದರ್ಶ, ಆತ್ಮಪ್ರತ್ಯಯಗಳನ್ನು ವರ್ಗಭೇದ, ಲಿಂಗಭೇದ, ಸಂಸ್ಕೃತಿ ಇತ್ಯಾದಿ ವ್ಯತ್ಯಾಸಗಳ ಮೂಲಕ ಪ್ರಶ್ನಿಸಿದರೆ ಇದು ಕಲೆಯನ್ನು ಕಲುಷಿತಗೊಳಿಸುವ ಪ್ರಯತ್ನ ಎಂದು ಇಪ್ಪತ್ತನೇ ಶತಮಾನದಲ್ಲೂ ವಿರೋಧಿಸಲಾಯಿತು. ಸ್ತ್ರೀ ಚಳವಳಿಯಲ್ಲಿ ಭಾಗಿಗಳಾಗಿರುವ ಈ ಕಲಾವಿದೆಯರು ಅಲೌಕಿಕ ಸೌಂದರ್ಯವನ್ನು ಲೌಕಿಕ ಜೀವನದಿಂದ ಹೊಲಸು ಮಾಡುತ್ತಿದ್ದಾರೆ ಎಂದೂ ಆರೋಪಿಸಲಾಯಿತು ಎನ್ನುತ್ತಾರೆ ಪೊಲಾಕ್.

ಹಾಗೆ ನೋಡಿದರೆ ಕಲೆಯ ಇತಿಹಾಸ ಗ್ರಂಥಗಳು ಪುರುಷಕೇಂದ್ರಿತ ಮಾತ್ರವೇ ಅಲ್ಲ, ಯೂರೋಪು ಕೇಂದ್ರಿತ ಸಹ. ಇಂದು ನಮ್ಮ ಕಲಾಶಾಲೆಗಳಲ್ಲಿ ಬೋಧಿಸುವುದೂ ಅದನ್ನೆ. ಎಲ್ಲೋ ಕೊನೆಯಲ್ಲಿ, ಪ್ರಪಂಚದ ಕಲಾಇತಿಹಾಸ ಎಂದು ಕರೆದಿರುವ ಕಾರಣ, ಹೆಸರಿಗೆ ಪೂರ್ವದೇಶಗಳ ಕಲಾ ಪರಿಕಲ್ಪನೆಗಳ ಅಥವಾ ಕಾಲಕಾಲದ ಶೈಲಿಗಳ ಉಲ್ಲೇಖ ಮಾತ್ರ ಸೇರಿಸಲಾಗುತ್ತದೆ. ಸಾವಿರಾರು ವರ್ಷಗಳಿಂದ ವಾಸ್ತವತೆ, ವಾಸ್ತವ ಭ್ರಾಮಕತೆಯ ಸೃಷ್ಟಿಯೇ ಕಲೆಯ ಗುರಿ, ಆದರ್ಶವಾಗಿದ್ದ ಪಾಶ್ಚಾತ್ಯ ಕಲಾ ಇತಿಹಾಸಕಾರರಿಗೆ ಚೈನಾ, ಭಾರತ, ಜಪಾನ್ ದೇಶಗಳ ಶೈಲೀಕೃತ ಪ್ರತೀಕಾತ್ಮಕ ಕಲಾದೃಷ್ಟಿಯ ಮಹತ್ವದ ಅರಿವಾಗಲು ಎರಡುಸಾವಿರವರ್ಷ ಬೇಕಾಯಿತು. ನಮ್ಮಲ್ಲಿ ದಾಖಲಾತಿಯ ಪರಂಪರೆ, ಇತಿಹಾಸ ರಚನೆ ಬರಲೇ ಇಲ್ಲ. ಕಲಾಕೃತಿ ಮುಂದೆ, ಕಲಾವಿದ ಹಿಂದೆ ಎಂಬ ದೃಷ್ಟಿ. ಕಲಾವಿದರು, ಶಿಲ್ಪಿಗಳು ಅನಾಮಧೇಯರೇ. ಹೊಯ್ಸಳರ ಕಾಲದಲ್ಲಿ ಅಲ್ಲಿ ಇಲ್ಲಿ ಹೆಸರುಗಳು ಕಾಣಸಿಗುತ್ತವೆ, ಅಷ್ಟೆ. ಇಲ್ಲಿ ಇತಿಹಾಸ, ಐತಿಹ್ಯ, ದಂತಕತೆಗಳೆಲ್ಲವೂ ಒಟ್ಟಿಗೆ ಸೇರಿ ಗೊಂದಲಮಯವಾಗಿಯೇ ಉಳಿದು ಬಂದಿದೆ. ಶಾಸ್ತ್ರಗ್ರಂಥಗಳೂ ಸಾಂಪ್ರದಾಯಕ ಪಾರಂಪರಿಕ ರೂಢಿಗತ ಸೂತ್ರಗಳಿಗೆ ಸೀಮಿತವಾಗಿವೆ. ಶಾಸ್ತ್ರವಿವರಣೆಗೇ ಮೀಸಲಾಗಿ ವಿವೇಚನೆ, ವಿಮರ್ಶೆ ದೂರವೇ ಉಳಿದುವು. ಕಳೆದ ಶತಮಾನದ ಪ್ರಾರಂಭದಲ್ಲಿ ಬಂದ ಭಾರತೀಯ ಕಲಾ ಇತಿಹಾಸ ಗ್ರಂಥಗಳು ಕಾಲ ಕಾಲದ ಶೈಲಿ, ಬದಲಾವಣೆಗಳು, ಅವುಗಳ ಹಿಂದಿನ ವಿಚಾರಸರಣಿಯನ್ನು ವಿವರಿಸುತ್ತವೆ ಮಾತ್ರ. ಕಲಾವಿದರ ವೈಯಕ್ತಿಕ ವೈಶಿಷ್ಟ್ಯ ಕೊಡುಗೆಗಳ ಚರ್ಚೆ ಇಲ್ಲ. ಅದಕ್ಕೆ ಅಗತ್ಯ ಆಧಾರಗಳ ಅಭಾವ ಮುಖ್ಯ ಕಾರಣ ಎಂಬುದೂ ವಾಸ್ತವ. ಇನ್ನು ಸ್ತ್ರೀಯರ ಕೊಡುಗೆಯ ಬಗ್ಗೆ ವಿವೇಚನೆ ಅಚಿಂತ್ಯವೇ ಆಗುತ್ತದೆ.

ಪಾಶ್ಚಾತ್ಯರ ದೃಷ್ಟಿಯಿಂದಲೇ ಆದರೂ ಪೊಲಾಕ್ ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತಾರೆ. ಪುರುಷ ಕೇಂದ್ರಿತ ಎಂಬುದಿರಲಿ ಸಾರ್ವತ್ರಿಕ, ಜನರಲ್ ಎಂಬ ಸೂತ್ರಗಳೂ ಪಕ್ಷಪಾತದಿಂದ ಕೂಡಿವೆ, ತಮ್ಮ ಸಂಕುಚಿತ

ವಿಚಾರಗಳನ್ನೇ ಎಲ್ಲ ಮಾನವಕುಲಕ್ಕೂ ಅನ್ವಯವಾಗುವ ಸಿದ್ಧಾಂತ ಗಳೆಂಬಂತೆ ಬಿಂಬಿಸಲಾಗಿದೆ ಎನ್ನುತ್ತಾರೆ. ಆದ್ದರಿಂದ ಕಲಾ ಇತಿಹಾಸ ವನ್ನೇ ಬೇರೆಯ ದೃಷ್ಟಿಯಿಂದ, ಎಂದರೆ ಹೊಸ ಪರಿಕಲ್ಪನೆಗಳ ದೃಷ್ಟಿ ಯಿಂದ ಬರೆಯಬೇಕಿದೆ ಎನ್ನುತ್ತಾರೆ. ಇದು ಸ್ತ್ರೀ ಚಳವಳಿಯ ಪ್ರಶ್ನೆಯಲ್ಲ. ಏಕೆಂದರೆ ಕಾಲದುದ್ದಕ್ಕೂ ಜ್ಞಾನವೆಂಬುದು ಅಧಿಕಾರಶಕ್ತಿಯಿಂದ, ರಾಜಕೀಯ, ಮನೋವೈಜ್ಞಾನಿಕ ವೈಯಕ್ತಿಕ ಆಸಕ್ತಿಗಳಿಂದ ಸಾಪೇಕ್ಷವಾಗಿ ರೂಪುಗೊಂಡಿವೆ. ಅದರಾಚೆಗೆ ಚಿಂತಿಸಬೇಕಿದೆ ಎನ್ನುತ್ತಾರೆ ಪೊಲಾಕ್. ದೃಶ್ಯಕಲೆಯ ವಿಶ್ಲೇಷಣೆಯಲ್ಲಿ ನೋಡುವ ತಿಳಿಯುವ ಅರ್ಥೈಸುವ ಬಗೆಯಲ್ಲಿ, ಎಂದರೆ ಸಾಂಸ್ಕೃತಿಕ ಐತಿಹಾಸಿಕ ಸಂಜ್ಞಾತ್ಮಕ ಮನೋ ವಿಶ್ಲೇಷಣಾತ್ಮಕವಾದ ವಿಷಯಗಳ ಸಂಕೀರ್ಣತೆಯನ್ನು ಅಭ್ಯಸಿಸಿ ವಿವೇಚಿಸುವಲ್ಲಿ ಒಂದು ಹೊಸ ವ್ಯವಸ್ಥೆಯನ್ನೇ ರೂಪಿಸಬೇಕಿದೆ ಎನ್ನುತ್ತಾರೆ. ಸ್ತ್ರೀ ಸಂವೇದನೆಯ ದೃಷ್ಟಿಯ ಅರ್ಥೈಸುವಿಕೆ, ನೋಟ, ಓದು ಎಂದರೆ ಅದೂ ಸೀಮಿತ, ಸಂಕುಚಿತ ದೃಷ್ಟಿಯೆ. ಆಗ ಮತ್ತೆ 'ಸಾರ್ವತ್ರಿಕ' ಶಬ್ದ ಕಾಡತೊಡಗುತ್ತೆ. ಕಲೆ ಮತ್ತು ಸಂಸ್ಕೃತಿಯ ಇತಿಹಾಸದ ಪುನರ್ ನಿರ್ವಚನೆಯಾಗಬೇಕಿದ್ದರೆ ನಾವು ನೋಡುವ ವಸ್ತು-ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಯನ ವಿಧಾನ, ಸಿದ್ಧಾಂತಗಳು ಆಯಾ ಕಾಲದ ಕಲೆ ಮತ್ತು ಸಾಂಸ್ಕೃತಿಕ ರೂಢಿಗಳು ಮುಂತಾದುವನ್ನು ವಿಶಾಲ ನೆಲೆಯಲ್ಲಿ ಇಡೀ ಮಾನವಕುಲಕ್ಕೆ ಅನ್ವಯಿಸುವಂತೆ ರೂಪಿಸ ಬೇಕಾಗುತ್ತದೆ ಎನ್ನುತ್ತಾರೆ.

1988ರಲ್ಲಿ 'ವಿಷನ್ ಅಂಡ್ ಡಿಫರೆನ್ಸ್' ಗ್ರಂಥ ಬರೆದು ಪೊಲಾಕ್ ಕಲಾ ಇತಿಹಾಸ ರಚನೆ ಬದಲಾಗಬೇಕಿರುವುದನ್ನು ವಿವರಿಸಿದರು. ಮಹಾಯುದ್ಧಾನಂತರದ ಆಧುನಿಕೋತ್ತರ ಕಾಲದಲ್ಲೂ ಆಗುತ್ತಿರುವು ದನ್ನು ಗಮನಿಸಿ 'ಕಲಿಂಗ್ ಮೆನ್ ಅಂಡ್ ಡೈಯಿಂಗ್ ಮೆನ್' ಮಾದರಿ ಯನ್ನು ವಿವರಿಸಿದರು. ವಾಸ್ತವ ಸ್ಥಿತಿ ಮತ್ತು ವಾತಾವರಣದ ವಿವರಣೆ ಅವರ ಉದ್ದೇಶ. 2003ರಲ್ಲಿ 'ವಿಷನ್ ಅಂಡ್ ಡಿಫರೆನ್ಸ್' ಗ್ರಂಥದ ಪುನರಾವೃತ್ತಿಯಲ್ಲಿ ಸಾಕಷ್ಟು ಮಾಹಿತಿ ಒದಗಿಸುತ್ತಾರೆ, ಕಾಲ-ದೇಶಗಳ ಹಿನ್ನೆಲೆಯಲ್ಲಿ ಕಲಾ ಇತಿಹಾಸದ ಬಗ್ಗೆ ಚರ್ಚಿಸಿದ್ದಾರೆ. ಆಗ ರೂಪಿಸಿದ ಮಾದರಿ : ದೃಶ್ಯಕಲೆಗಳಲ್ಲಿ ತಲೆಮಾರುಗಳು ಮತ್ತು ಭೌಗೋಳಿಕ ನೆಲೆಗಳು. ಚರಿತ್ರೆ ಮತ್ತು ಸಮಾಜೋ-ಸಾಂಸ್ಕೃತಿಕ ಎಂಬ ಎರಡು ಅಕ್ಷಗಳ ಹಿನ್ನೆಲೆಯಲ್ಲಿ ಕಲೆಯ ಸೃಜನಶೀಲತೆ ತನ್ನ ಅಸ್ತಿತ್ವವನ್ನು ಸ್ಪಷ್ಟಪಡಿಸಿಕೊಳ್ಳುತ್ತದೆ. ಕಲಾವಿದ/ದೆ ಇದ್ದ ಕಾಲ ಮತ್ತು ಸ್ಥಳ ಅಲ್ಲಿನ ಕಲಾವಿಕಾಸದ ಇತಿಹಾಸದೊಡನೆ ಸಮಕಾಲೀನ ಭೌಗೋಳಿಕ ರಾಜಕೀಯ ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಪರಿಗಣಿಸಿ ವಿಶ್ಲೇಷಣೆ ಮಾಡಲು ಸಾಧ್ಯ. ಇದರಿಂದ ಕಲಾ ಇತಿಹಾಸಕ್ಕೆ ಅಂತರರಾಷ್ಟ್ರೀಯ ಕಣ್ಣೋಟ ಒದಗುತ್ತದೆ ಎಂಬುದು ಪೊಲಾಕ್ ಅಭಿಪ್ರಾಯ.

ನಾವು ಬಹಳ ದೂರ ಸಾಗಿ ಬಂದಿದ್ದೇವೆ. ರಂಗೋಲಿ, ಗೃಹಾಲಂಕಾರ, ಶೃಂಗರಿಸಿಕೊಳ್ಳುವ ಬಗೆಗಳ ಅರವತ್ತನಾಲ್ಕು ಕಲೆಗಳ ಕಾಲದಿಂದ ಇಂದು ಸೃಜನಶೀಲ ಅಭಿವ್ಯಕ್ತಿಯ ಮುಕ್ತವಾತಾವರಣದ ಕಾಲದಲ್ಲಿದ್ದೇವೆ. ಶಿಷ್ಟಕಲೆಯಲ್ಲಿ ಅಲ್ಲದಿದ್ದರೂ ಜನಪದ ಕಲೆಗಳಲ್ಲಿ, ಪಟಚಿತ್ರಗಳು, ಕಾಲಿಘಟ್ ಮಧುಬನ್ ಮುಂತಾದ ಚಿತ್ರಪದ್ಧತಿಗಳಲ್ಲಿ, ಕಲಾವಿದೆಯರ ಕೊಡುಗೆಯನ್ನು ಗುರುತಿಸಿದ್ದೇವೆ. ಶುದ್ಧ ಕಲೆ-ಕುಶಲಕಲೆಗಳ ಭೇದವಿದ್ದ ಕಾಲದಲ್ಲಿ ಸೃಜನಶೀಲತೆಯ ಸೊಗಸನ್ನು ಹೊಸತನವನ್ನು ಮೆಚ್ಚಿದ್ದೇವೆ. ಸ್ವಾತಂತ್ರ್ಯಪೂರ್ವದಲ್ಲಿ ಬಂಗಾಲಿ ಶೈಲಿಯ ಚಿತ್ರಕಲೆ ಭಾರತೀಯ (ಅಜಂತಾ ಇತ್ಯಾದಿ) ಪರಂಪರೆ ವೈಶಿಷ್ಟ್ಯವನ್ನು ಬಿಂಬಿಸುತ್ತದೆ ಎಂಬ ಕಾಲದಲ್ಲಿಯೇ ಅವನೀಂದ್ರನಾಥ ಠಾಕೂರ್, ನಂದಲಾಲ್ ಬೋಸ್ ಮೊದಲಾದವರೊಡನೆ ಭಿನ್ನ ಶೈಲಿಯ ಆದರೂ ಭಾರತೀಯ ಸಂವೇದನೆಯ ಅಮೃತಾಶೇರ್‌ಗಿಲ್‌ರ ಕಲಾಕೃತಿಗಳನ್ನು ಸ್ವಾಗತಿಸಿದ್ದೇವೆ. ಅರವತ್ತರ ದಶಕದ ನಂತರ ಅನೇಕ ಕಲಾವಿದೆಯರು ವೈವಿಧ್ಯಪೂರ್ಣ ಕಲಾಕೃತಿಗಳನ್ನು ರಚಿಸಿದ್ದಾರೆ. ಕುತೂಹಲಕರ ವಿಷಯ ವೆಂದರೆ ಕಲಾವಿದೆಯರ ರಚನೆಗಳನ್ನು ಪ್ರತ್ಯೇಕವಾಗಿ ಕಾಣುವ ಪಕ್ಷಪಾತ ದೃಷ್ಟಿ ಇಲ್ಲಿ ಬೆಳೆಯಲಿಲ್ಲ. ಸ್ತ್ರೀ ಸಂವೇದನೆಯ ರಚನೆ ಗಳೆಂದರೂ ಅದು ಪ್ರಜ್ಞೆಯ ಸ್ತರದ್ದಾಗುತ್ತದೆಯೇ ಹೊರತು ಕಲಾತ್ಮಕತೆಯಲ್ಲಿ ಪಕ್ಷಪಾತ ನೋಟ ಎನಿಸುವುದಿಲ್ಲ. ಅವರಲ್ಲಿ ಬಹಳಷ್ಟು ಕಲಾವಿದೆಯರು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಹೊಂದಿದ್ದಾರೆ. ಸಾಂಪ್ರದಾಯಿಕ ಚಿತ್ರಕಲೆ ಮತ್ತು ಮಹಿಳೆ ಎಂಬ ಸಂಬಂಧ ಕಳಚಿಹೋಗಿದೆ. ಸೃಜನಶೀಲ ಪ್ರತಿಭೆ ಎಲ್ಲ ಬಾಹ್ಯಭೇದಗಳನ್ನು ಒಡೆದು ಮುನ್ನೆಲೆಗೆ ಬಂದಿದೆ. ಭಾರತೀಯ ಆಧುನಿಕ ಕಲೆಯ ಗ್ರಂಥಗಳಲ್ಲಿ ಅವರ ಕೊಡುಗೆಯನ್ನು ಗುರುತಿಸಲಾಗಿದೆ. ಕರ್ನಾಟಕದಲ್ಲಿ 1970ರ ದಶಕದ ಅನಂತರ ಬಂದ ಕಲಾವಿದೆಯರ ಸ್ವಂತಿಕೆ, ಮಾಧ್ಯಮ ಸಾಧ್ಯತೆಗಳ ಅನ್ವೇಷಣೆ, ಅಭಿವ್ಯಕ್ತಿ ವಿಧಾನಗಳ ವೈವಿಧ್ಯ, ಎಲ್ಲಕ್ಕಿಂತ ಮುಖ್ಯವಾಗಿ ಅವರ ಚಿಂತನೆ ಮತ್ತು ವೈಚಾರಿಕತೆಗಳು ವರ್ತಮಾನವನ್ನು ಜೀವಂತವಾಗಿ ಸಾಕಾರಗೊಳಿಸುವ ಬಗೆ ಆಶ್ಚರ್ಯ ಮೂಡಿಸುತ್ತದೆ.

(ಸ್ತ್ರೀ ಸಂವೇದನೆಯ ಹಿನ್ನೆಲೆಯಲ್ಲಿ ಕಲಾವಿದೆಯರ ಅಭಿವ್ಯಕ್ತಿ ವಿಧಾನ ಕುರಿತ ಲೇಖನಗಳು ಮುಂದಿನ ಸಂಚಿಕೆಯಿಂದ ಪ್ರಕಟವಾಗುತ್ತವೆ.)

❑

೧೯೩೦ರ ಜುಲೈ-ಆಗಸ್ಟ್‌ನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಶೇಂದಿ ಗಿಂಡಿಗಳನ್ನು ಕಡಿದು ಹಾಕುವ ಚಳವಳಿ ರಭಸದಿಂದ ಶುರುವಾಯಿತು. ನಾಗೆನೂರಲ್ಲಿ (ಬೈಲಹೊಂಗಲ ತಾ||) ಶೇಂದಿ ಗಿಡ ಧ್ವಂಸದ ಕಾರ್ಯ ದೊಡ್ಡ ಪ್ರಮಾಣದಲ್ಲಿ ನಡೆದ್ದರಿಂದ ಇಡೀ ಊರ ಮೇಲೆ ಸಾಮುದಾಯಿಕ ದಂಡವನ್ನು ಹೇರಲಾಯಿತು. ಅದನ್ನು ಬಲವಂತದಿಂದ ವಸೂಲು ಮಾಡಲು ಅಸಿಸ್ಟೆಂಟ್ ಕಲೆಕ್ಟರ್ ವೆಲ್ಸ್ ಅವರು ಪೊಲೀಸರ ಪಾರ್ಟಿಯೊಂದಿಗೆ ನಾಗನೂರಿಗೆ ಹೋಗಿ ಮನೆಮನೆ ಹೊಕ್ಕು ವಸ್ತು ಒಡವೆಗಳನ್ನು ಜಪ್ತಿ ಮಾಡತೊಡಗಿದರು. ಒಂದು ಮನೆಯಲ್ಲಿ ಅವರಿಗೆ ಮಹಾತ್ಮಾ ಗಾಂಧಿಯವರ ಭಾವಚಿತ್ರ ಕಾಣಿಸಿತು. ಸಾಹೇಬನು ದುಷ್ಟತನದಿಂದ ಆ ಭಾವಚಿತ್ರವನ್ನು ನೆಲಕ್ಕೆ ಬಿಸಾಕಿ ಕಾಲಿನಿಂದ ತುಳಿದನು. ಇದನ್ನು ಕಂಡ ಮನೆಯ ಯಜಮಾನಿ ನಾಗವ್ವ ಕೆಂಡದಂತೆ ಸಿಡಿದೆದ್ದು ಕಾಲಲ್ಲಿಯ ಕೆರದಿಂದ ಸಾಹೇಬನ ಕಪಾಳಕ್ಕೆ ಎರಡೇಟು ಕೊಟ್ಟಳು. ನಾಗವ್ವನಿಗೆ ಶಿಕ್ಷೆಯಾಯಿತು.

ಆಧಾರ : ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು

ಬೆಳಕು ಅದೆಷ್ಟು ದೂರ !

ಪ್ರೀತಿಯ ವಿಜಯಮ್ಮ,

ನಮಸ್ಕಾರ

'ನಮ್ಮ ಮಾನಸ'ಕ್ಕೊಂದು ಲೇಖನ ಬರಿ ಅಂತ ಎರಡು ಸಲ ಫೋನ್ ಮಾಡಿದ್ರಿ... ಸಿದ್ಧಾಂತ-ಶೋಷಣೆ ಅಂತೆಲ್ಲಾ ಬರಿಯೋ ಮೂಡ್‌ನಲ್ಲಿ ನಾನಿಲ್ಲ. ಅದಕ್ಕಾಗಿ ಪ್ರಕಟ ಮಾಡ್ಲಿಕ್ಕಾಗಿ, ನಿಮಗೇ ಒಂದು ಪತ್ರ.

ನೋಡಿ ವಿಜಯಮ್ಮ ಬೆಂಗಳೂರಿನಲ್ಲಿದ್ದಾಗ ಸಿನಿಮಾ, ಸೀರಿಯಲ್ಲು ಅಂತ ಅಲೆದಾಡಿದ್ದುಂಟು. ಈಗ ಮಾತ್ರ ನಾನು ಅಪ್ಪಟ ನಾಟಕದ ಮನುಷ್ಯಳು. ರಂಗಕರ್ಮಿ ಅಲ್ಲ, ರಂಗಕ್ರಿಮಿ.

ನಾನೀಗ ಸುಖವಾಗಿದ್ದೇನೆ. ಪ್ರಪಂಚದ ವಿದ್ಯಮಾನಗಳು ಹಗಲಿರುಳೂ ಕಾಡುವುದುಂಟು... ಆದರೆ, ಮನಸ್ಸು ದೃಢವಾಗಿದೆ. ಉತ್ತರಗಳ ಹುಡುಕಾಟ ಸಾಗಿದೆ. ಆದರೆ, ನಮ್ಮೆಲ್ಲ ಸಮಸ್ಯೆಗಳಿಗೆ ನಾವೊಬ್ಬರೇ ಉತ್ತರ ಹುಡುಕಲು ಸಾಧ್ಯವಿಲ್ಲ. ಅದಕ್ಕೆ ಸಮಾನ ಮನಸ್ಕರ ದಂಡೇ ಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ 'ಮಾನಸ', 'ಅಚಲ' ನೆನಪಾಗುತ್ತವೆ. ಚಂಪಾ, ರಾಜೇಶ್ವರಿ, ವನಜ, ಸರಸ್ವತಿ - ನೀವು ಎಲ್ಲರೂ ಒಳಗಿನ ಬೆಂಕಿಯನ್ನು ಉಳಿಸಿಕೊಂಡಿದ್ದೀರಿ. 'ಅಚಲ' ನಿಂತುಹೋದದ್ದು ವಿಷಾದದ ಸಂಗತಿ. 'ಅಚಲ' ನಿಂತು ಹೋಗುತ್ತದೆ ಎಂದು ತಿಳಿದಾಗ, ಎನ್. ಗಾಯತ್ರಿಗೆ ಫೋನ್ ಮಾಡಿದೆ. 'ಬೇಸರವಾಯಿತು' ಎಂದೆ. 'ಬರೆಯುವವರಿಲ್ಲ, ಓದುವವರೂ ಕಡಿಮೆ, ಅಲ್ಲದೆ 70-80ರ ಹುಮ್ಮಸ್ಸು ಈಗ ಉಳಿದಿಲ್ಲ' ಎಂದರು. 'ಮಾನಸ'ದವರು, ಇಂತಹ ಸಂದರ್ಭದಲ್ಲಿ ಕ್ಷೇತ್ರ ವಿಸ್ತರಿಸಿಕೊಳ್ಳುತ್ತಿದ್ದೀರಿ - ಸಂತೋಷ.

ಸ್ವಾತಂತ್ರ್ಯ ಬಂದು 60 ವರ್ಷವಾಯಿತು. ಅಂದಿನಿಂದ ಇಂದಿನವರೆಗೆ ರಂಗಭೂಮಿಯಲ್ಲಿ ದುಡಿದ ಮಹಿಳೆಯರ ಸ್ಥಿತಿ-ಗತಿ ಕುರಿತು ಬರೆಯಿರಿ - ಎಂದಿರಿ. ಏನು ಹೇಳುವುದು? ನಮ್ಮ ವೃತ್ತಿರಂಗಭೂಮಿಯಲ್ಲಿ ದುಡಿದ ಯಾವ ಮಹಿಳೆ ಸುಖವಾಗಿದ್ದಾಳೆ? ಯಾರೂ ಇಲ್ಲ. ಬಣ್ಣ ಹಚ್ಚಿ, ರಂಗದ ಮೇಲೆ ಓಡಾಡುವಾಗ ಸಿಕ್ಕ ಸುಖವಷ್ಟೇ ಆಕೆಗೆ ದಕ್ಕಿದ್ದು. ಅದರ ಹೊರತು, ಬದುಕಿಗೊಂದು ನೆಲೆಯಿಲ್ಲ.

ಇನ್ನು, ನನ್ನಂಥವರು, ಆಧುನಿಕ ಶಿಕ್ಷಣ ಪಡೆದವರು - ನಮ್ಮ ಕತೆ ಹೇಗೆ? ರಂಗಭೂಮಿಯನ್ನು ನೆಚ್ಚಿ ಬದುಕುತ್ತೇವೆಂದರೆ ನಮಗೂ ಮೊದಮೊದಲು ಪ್ರೋತ್ಸಾಹ ಸಿಗಲಿಲ್ಲ. ನಾನು ಗಟ್ಟಿ ನಿಂತೆ, ನನ್ನದೇ ದಾರಿ ಕಂಡುಕೊಂಡೆ, ಈಗ ಎಲ್ಲೆಡೆಯೂ ಪ್ರೋತ್ಸಾಹದಾಯಕ ಪ್ರತಿಕ್ರಿಯೆ ಜನರಿಂದ ಬರುತ್ತಿದೆ.

ವಿಜಯಾ, ನಿಜ ಹೇಳಬೇಕೆಂದರೆ ನನ್ನ ಮೊದಲ ಗಂಡ ನಾಟಕದ ಮನುಷ್ಯ. ಅವನೇ, ನಾನು ನಾಟಕದಲ್ಲಿ ಅಭಿನಯಿಸಿದ್ದಕ್ಕಾಗಿ ನನ್ನನ್ನು 'Prostitute' ಎಂದಿದ್ದ. ನನಗೆ ಗೊಂದಲವಾಗುತ್ತಿತ್ತು. ಹೊರಗಿನ ಭಾಷಣಗಳು, ಮನೆಯೊಳಗಿನ ನಡವಳಿಕೆ ಎರಡಕ್ಕೂ ಅಜಗಜಾಂತರ ಇರುವಾಗ ಮನಸ್ಸು ಎಲ್ಲೂ ಬೇರೂರುವುದಿಲ್ಲ-ಹೂವಿಲ್ಲ-ಚಿಗುರಿಲ್ಲ. ಅಂತಹ ಮಾನಸಿಕ ಆಘಾತಗಳಿಂದ ಚೇತರಿಸಿಕೊಂಡದ್ದೇ ಒಂದು ಕಾದಂಬರಿಗಾಗುವಷ್ಟು ಅನುಭವ. ಪ್ರತಿಯೊಂದು ವ್ಯಕ್ತಿಯ ಒಳಗೂ ಒಂದು ಚೈತನ್ಯವಿರುತ್ತದೆ. ಅದು ಮುನ್ನೆಲೆಗೆ ಬರಬೇಕು. ಹೆಣ್ಣಿನ ಚೇತನ ಮುನ್ನೆಲೆಗೆ ಬರದಿರುವ ಹಾಗೆ, ಅದೆಷ್ಟು ಸಂಕೋಲೆಗಳು ! ಅದನ್ನೆಲ್ಲ ಮುರಿದು ಆಕೆ ಚೈತನ್ಯಸ್ವರೂಪಿಯಾಗಬೇಕೆಂದರೆ ಅದೆಷ್ಟು ಜನರ ಸಹಾಯಬೇಕು! ಅದೆಷ್ಟು ಚಿಂತನ-ಮಂಥನ ನಡೆಸಬೇಕು! 'ಬೆಳಕು' ಅದೆಷ್ಟು ದೂರ! ಆದರೆ, ಒಮ್ಮೆ ನಮ್ಮ ದಾರಿ ಕಂಡುಕೊಂಡೆವೆಂದರೆ ಅನಂತರ ಯಾರೂ ತಡೆಯುವವರಿಲ್ಲ.... ಗುರಿಯತ್ತ ಪಯಣ ನಿರಂತರ....

ಇವತ್ತಿನ ದಿನಗಳಲ್ಲಿ ನನ್ನನ್ನು ಗಾಢವಾಗಿ ಕಾಡುತ್ತಿರುವ ವಿಚಾರವೆಂದರೆ ಈ ಜಗತ್ತಿನಲ್ಲಿರುವ ಹಿಂಸೆ. ವ್ಯವಸ್ಥೆಯ ಹಿಂಸೆ, ನಕ್ಸಲೈಟರ ಹಿಂಸೆ, ಉಗ್ರಗಾಮಿಗಳ ಹಿಂಸೆ, ಭಯೋತ್ಪಾದಕರ ಹಿಂಸೆ... ಇವಷ್ಟೇ ಅಲ್ಲದೆ ಮರ್ಯಾದಸ್ಥರ ಮುಸುಕಿನಲ್ಲಿರುವ ವ್ಯಕ್ತಿಗಳೂ ಇನ್ನೊಂದು ವ್ಯಕ್ತಿಗೆ ನೀಡುವ ಮಾನಸಿಕ ಮತ್ತು ದೈಹಿಕ ಹಿಂಸೆ. ಈ ಎಲ್ಲ ಹಿಂಸೆಗಳನ್ನೂ ನೀಗುವ ದಾರಿಯಲ್ಲಿ ನಮ್ಮ ಪಯಣ ಸಾಗಬೇಕಲ್ಲವೇ? ಬುದ್ಧಿಜೀವಿಗಳ ಹೆಸರಿನಲ್ಲಿ ನಕ್ಸಲರನ್ನು ಬೆಂಬಲಿಸುವವರ ಬಗ್ಗೆ ನನ್ನ ತಿರಸ್ಕಾರವಿದೆ. ಗೌರಿಲಂಕೇಶರಂಥವರೂ ಇದಕ್ಕೆ ಹೊರತಲ್ಲ.


ಹೆಣ್ಣಿನ ಸಬಲತೆಗೆ ಮುಖ್ಯ ಕಾರಣವೆಂದರೆ ಆರ್ಥಿಕ ಸ್ವಾತಂತ್ರ್ಯ. ನನ್ನ ಮಾನಸಿಕ ಶಾಂತಿಗೆ ಕಾರಣ, ನಾನು ಆರ್ಥಿಕವಾಗಿ ಸ್ವತಂತ್ರಳಾಗಿರುವುದು. ಪ್ರತಿಯೊಂದು ಹೆಣ್ಣೂ ಆರ್ಥಿಕವಾಗಿ ಸ್ವತಂತ್ರಳಾಗಬೇಕು. ಆಗ ಜೀವನದ ಮುಕ್ಕಾಲು ಪಾಲು ಸಮಸ್ಯೆಗಳು ಇಲ್ಲವಾಗುತ್ತವೆ. ಮತ್ತುಳಿದಂತೆ, ಮಾನಸಿಕ ದಾಸ್ಯದಿಂದಲೂ ಹೊರಗೆ ಬರಬೇಕು. ಶಿಕ್ಷಣ ಬಹಳ ಮುಖ್ಯ. ವೃತ್ತಿರಂಗಭೂಮಿಯ ಬಹುತೇಕ ಕಲಾವಿದೆಯರಿಗೆ ಶಿಕ್ಷಣವಿರಲಿಲ್ಲ. ಆದ್ದರಿಂದಲೇ ಅವರು ಆರ್ಥಿಕವಾಗಿ, ದೈಹಿಕವಾಗಿ ಶೋಷಣೆಗೆ ಒಳಗಾದರು. ಶಿಕ್ಷಣ ಬೆಳೆಸುವ ಚಿಂತನಶಕ್ತಿ ಬದುಕಿನಲ್ಲಿ ದೃಢತೆಯನ್ನು ತಂದುಕೊಡಬಲ್ಲುದು. ರಂಗಭೂಮಿಯಲ್ಲಿ ದುಡಿಯುವ ಪ್ರತಿ ಮಹಿಳೆಯೂ ಉನ್ನತ ಶಿಕ್ಷಣವನ್ನು ಪಡೆದರೆ, ರಂಗಭೂಮಿಯ ದಿಕ್ಕೇ ಬದಲಾಗಬಹುದು.

ವಿಜಯಾ, ಮತ್ತೇನೂ ಬರೆಯಲು ತೋಚುತ್ತಿಲ್ಲ. 'ನಮ್ಮ ಮಾನಸ' ಗ್ರಾಮೀಣ ಮಹಿಳೆಯರಿಗೂ ತಲುಪಲಿ, ನೊಂದವರಿಗೆ ಸಾಂತ್ವನ ಹೇಳಲಿ ಎಂದು ಆಶಿಸುತ್ತ....

ನಿಮ್ಮ,

28-7-2007

ಎಸ್. ಮಾಲತಿ, ಸಾಗರ



ಮಹಿಳಾ ಸ್ವಾತಂತ್ರ್ಯ

ಶಿಕ್ಷಣ ಮತ್ತು ಹಣ : ನಿರ್ಣಾಯಕ ಅಂಶಗಳು

ಡಾ. ನಿರಂಜನ ವಾನಳ್ಳಿ

ನನ್ನ ಊಹೆ ಸುಳ್ಳೆಂದು ಅಥವಾ ತಪ್ಪೆಂದೂ ನೀವು ವಾದಿಸುವಿರಾದರೆ ನನಗೆ ಖುಷಿಯಾಗುತ್ತದೆ ! ಯಾಕೆಂದರೆ ಅದರಿಂದ ನಮ್ಮ ದೇಶ ಕೆಟ್ಟಿಲ್ಲ ಎಂದು ಸಾಬೀತಾಗುತ್ತದೆ!!

ಪಾಶ್ಚಾತ್ಯ ದೇಶಗಳ ಹಾಗೆ ನಮ್ಮ ದೇಶದಲ್ಲಿ ಕುಟುಂಬ ವ್ಯವಸ್ಥೆ ಮುರಿದು ಬೀಳದೇ ಗಂಡ-ಹೆಂಡತಿ ದಾಂಪತ್ಯದ ಬೆಳ್ಳಿಹಬ್ಬ, ಚಿನ್ನದ ಹಬ್ಬಗಳನ್ನು ಆಚರಿಸಿಕೊಳ್ಳುವುದು ಸಾಧ್ಯವಾಗುವುದು ನಮ್ಮ ಒಳ್ಳೆಯ ತನದಿಂದಲ್ಲ, ಹೆಂಗಸರು ಸ್ವತಂತ್ರರಾಗಿ, ತಮ್ಮ ಕಾಲಮೇಲೆ ತಾವು ನಿಲ್ಲದ ಸ್ಥಿತಿ ಇರುವುದೇ ಕಾರಣ ಎಂಬುದು ನನ್ನ ವಾದ. ಸುದೀರ್ಘ ದಾಂಪತ್ಯ ಅನುಭವಿಸಿಯೂ ಗಂಡನೊಟ್ಟಿಗೆ ಸರಿಸಮನಾಗಿ, ನಿರ್ಭಿಡೆ ಯಿಂದ ಮಾತನಾಡುವ ಸ್ವಾತಂತ್ರ್ಯ ಹೆಣ್ಣಿಗೆ ಇಲ್ಲವಾದರೆ ಅದೆಂಥಾ ಸ್ವಾತಂತ್ರ್ಯ ? ಭಾರತೀಯ ಮನೆಗಳಲ್ಲಿ ಹೆಚ್ಚಿನವುಗಳಲ್ಲಿ ಇದೇ ಪರಿಸ್ಥಿತಿಯಿದೆ. ಸಮಾಜಕ್ಕೆ ಹೆದರಿ, ಭವಿಷ್ಯದ ಭಯದಿಂದ ಬಹಳಕಾಲ ಹೆಣ್ಣು ಗಂಡಿನೊಟ್ಟಿಗೆ ಬಾಳುವೆ ಮಾಡುತ್ತಾಳೆಯೇ ವಿನಾ ಯಾವುದೋ ಆದರ್ಶದಿಂದಲ್ಲ. ಹೆಣ್ಣಿಗೆ ಆರ್ಥಿಕ ಸ್ವಾತಂತ್ರ್ಯವೊಂದು ಸಿಕ್ಕಿದ್ದರೆ.... ಈ ದೇಶದ ಬಹುಪಾಲು ಕುಟುಂಬಗಳು ಹೋಳಾಗುತ್ತಿದ್ದವು ಎಂಬುದು ನನ್ನ ಊಹೆ-ನಂಬಿಕೆ. ಈ ಊಹೆ **ತಪ್ಪಾಗಿರಲಿ** ಎಂಬುದೇ ನನ್ನ ಆಶಯ !

ಸ್ವಾತಂತ್ರ್ಯೋತ್ತರದಲ್ಲಿ ಮಹಿಳಾ ಸ್ವಾತಂತ್ರ್ಯದ ಬಗ್ಗೆ ಯೋಚಿಸುವಾಗ ಅಚಾನಕ್ ಹೀಗೆ ಅನ್ನಿಸಿದ್ದು ಆಕಸ್ಮಿಕವೇನಲ್ಲ. ಸಾಂವಿಧಾನಿಕವಾಗಿ ನಮ್ಮ ದೇಶದಲ್ಲಿ ಹೆಣ್ಣಿಗೆ ಗಂಡಿನಷ್ಟೇ ಸ್ಥಾನ-ಮಾನಗಳಿವೆ; ಸಮಾನ ಅವಕಾಶಗಳಿವೆ. ಆದರೆ ವಾಸ್ತವದಲ್ಲಿ ನಿರೀಕ್ಷಿತ ಮಟ್ಟದಲ್ಲಿ, ಸಾರ್ವತ್ರಿಕ ವಾಗಿ ಮಹಿಳೆ-ಪುರುಷನಿಗೆ ಸರಿಸಮಳಾಗಿಲ್ಲ ಎಂಬುದು ಎಲ್ಲೆಲ್ಲೂ ಎದ್ದು ಕಾಣುವ ಅಂಶ.

ಲೋಕಸಭೆ-ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಸ್ಥಾನಗಳನ್ನು ಮೀಸಲಿಡಬೇಕೆಂಬ ಚರ್ಚೆ ಆರಂಭವಾಗಿ ದಶಕವೇ ಕಳೆದಿದೆ. ಆದರೆ ಅದು ಕಾನೂನಾಗಿ ಜಾರಿಯಾಗುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ಶೇ. 33ರಷ್ಟು ಮಹಿಳೆಯರೂ ಆಯ್ಕೆಯಾಗುತ್ತಿಲ್ಲ ಎಂಬ ಕಾರಣಕ್ಕೇ ಮೀಸಲಾತಿಯ ಅಗತ್ಯ ಬಂದಿರುವುದು. ಜನಸಂಖ್ಯೆಯ ಶೇಕಡಾ 50ರಷ್ಟು ಜನ ಮಹಿಳೆಯರಾದರೂ ಶಾಸನಸಭೆಗಳಲ್ಲಿ ಅವರ ಮುಖ ನೋಡುವುದೇ ಅಪರೂಪ.

ಗಂಡಸರು ಅವಕಾಶ ಮಾಡಿಕೊಟ್ರೆ (ಭಾರೀ ಉಪಕಾರ ಮಾಡುವವರ ಹಾಗೆ!) ಉಂಟು, ಇಲ್ಲವಾದರೆ ಇಲ್ಲ ಎಂಬ ಪರಿಸ್ಥಿತಿ ಎಲ್ಲಾ ಕಡೆಗಳಲ್ಲಿ.

ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆ ತಂದ ಮೊದಲ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಆಗ ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯತುಗಳಲ್ಲಿ ಹಿಂದುಳಿದ ಜಾತಿ-ವರ್ಗಗಳಿಗೆ ಮೀಸಲು ಜಾರಿಕೊಡುವ ಜೊತೆಗೆ ಮಹಿಳಾ ಮೀಸಲಾತಿಯನ್ನೂ ಜಾರಿಗೆ ತರಲಾಯಿತು. ಇದರಿಂದಾಗಿ ಗ್ರಾಮ ಅಧಿಕಾರದ ಗದ್ದುಗೆಯಿಂದ ಸದಾ ದೂರ ಉಳಿದಿದ್ದ ಜಾತಿಗಳು ಹಾಗೂ ಮಹಿಳೆಯರು ತಾವು ಎಂದೆಂದೂ ನಿರೀಕ್ಷಿಸಿರದ ಸ್ಥಾನಮಾನಗಳನ್ನು ಪಡೆಯುವಂತಾಯಿತು. ಹೆಸರಿಗೆ ಹೆಂಗಸರಿಗೆ ಅಧಿಕಾರ, ವಾಸ್ತವವಾಗಿ ಅವರ ಗಂಡಂದಿರೇ ಆಳುವವರು ಎಂಬ ಆರೋಪಗಳು ಆಗಾಗ ಕೇಳಿ ಬರುವುದುಂಟು, ಚಿಂತೆಯಿಲ್ಲ. ಎಂದೆಂದೂ ಅಧಿಕಾರದ ಹಾಗೂ ಸ್ವಾತಂತ್ರ್ಯದ ಅನುಭವ ಪಡೆಯದ ಜನ ಹೊಸತಾಗಿ ಅಧಿಕಾರ ಅನುಭವಿಸುವಾಗ ಇಂಥ ಆರೋಪಗಳು ಸಹಜ. ಕೆಲವೊಮ್ಮೆ ಇದು ಹೊಟ್ಟೆಕಿಚ್ಚಿನ ಹೇಳಿಕೆಗಳೂ ಆಗಿರುವುದುಂಟು. ಯಾರದೋ ಕೈಗೊಂಬೆಗಳಾಗಿ ಗಂಡಸರೂ ಆಡಳಿತ ಮಾಡಿದ ಎಷ್ಟೋ ಉದಾಹರಣೆಗಳು ಉಂಟಲ್ಲ ? ಹೀಗಾಗಿ ಮಹಿಳೆಯರಿಗೆ ಅಧಿಕಾರ ಕೊಟ್ಟಾಕ್ಷಣ ಅಯೋಗ್ಯರಿಗೆ ಪಟ್ಟಕಟ್ಟಲಾಯಿತೆಂದು ಬೊಬ್ಬೆ ಹೊಡೆಯುವುದರಲ್ಲಿ ಅರ್ಥವಿಲ್ಲ. ಅಂತೂ ಕರ್ನಾಟಕ ದಲ್ಲಿ ವಿಕೇಂದ್ರಿತ ಆಡಳಿತದಲ್ಲಿ ಮಹಿಳೆಯರಿಗೆ ಮೀಸಲಿರಿಸಿದ್ದೊಂದು ಕ್ರಾಂತಿಕಾರಕ ತೀರ್ಮಾನ. ಮಹಿಳಾ ಸ್ವಾತಂತ್ರ್ಯದ ಸಂದರ್ಭದಲ್ಲಿ ಒಂದು ಮೈಲುಗಲ್ಲು.

ಭಾರತೀಯ ಸಾಂಪ್ರದಾಯಿಕ ಮನಸ್ಸಿನದು ಹೆಣ್ಣಿನ ಬಗ್ಗೆ ಕುತ್ಸಿತ ಅಥವಾ ತಿರಸ್ಕಾರದ ದೃಷ್ಟಿಯೆಂದು ನನಗನ್ನಿಸುವುದಿಲ್ಲ. ಚಿಕ್ಕಂದಿನಲ್ಲಿ ತಂದೆ-ತಾಯಿಯರ ಹಾಗೂ ಮದುವೆಯಾದ ಮೇಲೆ ಗಂಡನ ಆಶ್ರಯ ದಲ್ಲಿ ಅವಳು ಬೆಳೆಯಬೇಕಾದವಳು ಎಂಬಲ್ಲಿ ಅವಳನ್ನು ದಾಸ್ಯದಲ್ಲೇ ಇಡಬೇಕೆಂಬುದು ಸಮಾಜದ ಸಂಕಲ್ಪವಲ್ಲ. ಹೆಣ್ಣಿನ ಬಗ್ಗೆ ಇದ್ದ ರಕ್ಷಣಾ ಭಾವವೂ ಇದ್ಕಕೆ ಕಾರಣವೆಂದು ವಾದಿಸಬಹುದು.

ಆದರೆ ಈ ರೀತಿಯ ರಕ್ಷಣಾ ಭಾವವೇ ಅವಳ ಕೊರಳಿಗೆ ಉರುಳಾಗಿರುವುದನ್ನು ಒಪ್ಪಲೇಬೇಕು. ಹಿಂದೊಮ್ಮೆ ಸಮುದಾಯದತ್ತ ಶಾಲೆ ಕಾರ್ಯಕ್ರಮಕ್ಕಾಗಿ ಮೈಸೂರು ನಗರಕ್ಕೆ ಹತ್ತಿರದಲ್ಲೇ ಇರುವ ಹಳ್ಳಿಯೊಂದಕ್ಕೆ ಹೋಗಿದ್ದೆ. ಒಂದು ಮನೆಯಲ್ಲಿ ಮಗಳು ಸರ್ಕಾರಿ ಶಾಲೆಗೆ ಸೇರಿದ್ದಳು. ಮಗನೋ ನಗರದಲ್ಲಿ ಕಾನ್ವೆಂಟ್ ಶಾಲೆಗೆ ಸೇರಿದ್ದ. ಮಗನಿಗೆ ಷೂ, ಮಗಳಿಗೆ ಹವಾಯಿ ಚಪ್ಪಲಿ. ಮಕ್ಕಳ ಮಧ್ಯೆ ಯಾಕೆ ಇಂಥ ವ್ಯತ್ಯಾಸ ಮಾಡುತ್ತೀರಿ? ಎಂದು ಕೇಳಿದರೆ ಮಗಳು ಬೇರೆಯವರ ಮನೆ ಸೇರುವವಳು, ಅವಳಿಗ್ಯಾಕೆ ಒಳ್ಳೆ ಶಿಕ್ಷಣ? ಮಗನಾದರೆ ಚೆನ್ನಾಗಿ ಓದಿ ಕೆಲಸಕ್ಕೆ ಸೇರಿ, ವೃದ್ಧಾಪ್ಯದಲ್ಲಿ ನಮ್ಮನ್ನು ಸಾಕಬೇಕಾದವನು ಎಂಬ ಉತ್ತರ ಅಪ್ಪ ಎನ್ನಿಸಿಕೊಂಡವ ನಿಂದ ಬಂತು. ಇದು ಅನಾಗರಿಕ, ರಾಕ್ಷಸ ಮನಸ್ಸಿಗೆ ಮಾತ್ರ ಸಾಧ್ಯವಾಗುವ ಭೇದ. ಸಮಾಜದಲ್ಲಿ ಎಲ್ಲರೂ

ಹೀಗೆ ದುಷ್ಟರಲ್ಲ ಎಂದು ಸಮಾಧಾನ ಪಡಬಹುದು. ಆದರೆ ಸ್ವಲ್ಪ ಹೆಚ್ಚು, ಸ್ವಲ್ಪ ಕಡಿಮೆ, ಭಾರತೀಯರ ಬಹುಪಾಲು ಮನೆಗಳಲ್ಲಿ ಹೆಣ್ಣು ಮಗುವಿನ ಬಗ್ಗೆ ಇಂಥ ತಾತ್ಸಾರ. ಒಂದಲ್ಲ ಒಂದು ರೀತಿಯಲ್ಲಿ ಇರುವುದೇ ಎಂಬುದನ್ನು ಒಪ್ಪಬೇಕು. ಇತ್ತೀಚೆಗೆ ನನಗೆ ಪರಿಚಯದ ಹೆಣ್ಣು ಮಗಳೊಬ್ಬಳು ಅಳುತ್ತಾ ಫೋನು ಮಾಡಿದಳು. ಅವಳ ಪದವಿ ಮುಗಿದಿದೆ. ಸ್ನಾತಕೋತ್ತರ ಪದವಿಗೆ ಸೇರಿಸಲು ಅಪ್ಪ ಒಪ್ಪುತ್ತಿಲ್ಲ, ಯಾಕೆಂದರೆ ಮಗನನ್ನು ಸೇರಿಸಬೇಕಂತೆ ! ಹೀಗಾಗಿ ಮಗಳು ಓದು ಕೈದುಮಾಡಿ ಕೆಲಸಕ್ಕೆ ಸೇರುವ ಯೋಚನೆಯಲ್ಲಿದ್ದಾಳೆ. 'ಅಪ್ಪನಿಗೆ ಇಬ್ಬರನ್ನು ಓದಿಸಲಾಗದು. ತಮ್ಮನನ್ನು ಓದಿಸ್ತಾರಂತೆ, ನಾನು ಕೆಲಸ ಹುಡುಕುತ್ತೇನೆ' ಎನ್ನುವಾಗ ಅವಳು ಬಿಕ್ಕಳಿಸಿದಳು. ಆ ಕ್ಷಣಕ್ಕೆ ನನಗೆ ಇಬ್ಬರು ಹೆಣ್ಣುಮಕ್ಕಳು ಎಂಬ ಸಮಾಧಾನವಾಯ್ತು !

ಶಿಕ್ಷಣ ಹಾಗೂ ಆರ್ಥಿಕ ಭದ್ರತೆ ಇಂದಿನಕಾಲದಲ್ಲಿ ಮಹಿಳಾ ಸ್ವಾತಂತ್ರ್ಯದ ಎರಡು ಅಗತ್ಯಗಳು. ಶಿಕ್ಷಣಕ್ಕೂ ಆರ್ಥಿಕ ಭದ್ರತೆಗೂ ನೇರ ಸಂಬಂಧವಿಲ್ಲ ಎಂಬುದು ನಿಜ. ಆದರೆ ಸ್ವಾತಂತ್ರ್ಯಕ್ಕೂ ಆರ್ಥಿಕತೆಗೂ ಸಂಬಂಧವಿದೆ. ಆರ್ಥಿಕ ಭದ್ರತೆಯಿಲ್ಲದಿದ್ದರೆ ಸ್ವಾತಂತ್ರ್ಯಕ್ಕೆ ಅರ್ಥವೇ ಇಲ್ಲ ಎಂಬ ಸ್ಥಿತಿಯನ್ನು ನಾವಿಂದು ತಲುಪಿದ್ದೇವೆ. ದೇಶದಲ್ಲಿ ಬಹುಪಾಲು ಹೆಣ್ಣುಮಕ್ಕಳ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ ಎಂಬಂತಾಗಿರುವುದಕ್ಕೆ, ಅವರು ಆರ್ಥಿಕವಾಗಿ ದುರ್ಬಲರಾಗಿರುವುದೇ ಕಾರಣ. ಹಣವೊಂದೇ ಎಲ್ಲವನ್ನೂ ನಿರ್ಧರಿಸುತ್ತದೆ ಎಂಬುದನ್ನು ಒಪ್ಪಲು ವಿಷಾದವಾಗುತ್ತದೆ. ಹಣವೊಂದೆ ಮುಖ್ಯವಾಗುವ ಜಗತ್ತಿನಲ್ಲಿ ಮಾನವೀಯತೆ ನರಳುತ್ತದೆ ಎಂಬುದೂ ಗೊತ್ತಿದೆ. ಆದರೆ ಇಂದಿನ ಜಗತ್ತು ಹಣದ ಮೇಲೆ ನಿಂತಿದೆ ಎಂಬುದು ವಾಸ್ತವ.

ಒಟ್ಟಾರೆ, ಸಮೀಕರಿಸಿ ಹೇಳುವುದಾದರೆ ಭಾರತೀಯ ಮಹಿಳೆಯರ ಬಾಳಿನಲ್ಲಿ ಸ್ವಾತಂತ್ರ್ಯಕ್ಕೆ ಅರ್ಥಬರಬೇಕಾದರೆ ಶಿಕ್ಷಣ ಹಾಗೂ ಹಣ ಅವಳ ಕೈಯಲ್ಲಿರುವಂತಾಗಬೇಕು. ಅದಕ್ಕೆ ಸಾಗಬೇಕಾದ ದಾರಿ ದೂರವಿದೆ.

❑

ಮೂರ್ದನಿ

ಕದಳಿಯ ವನ ಹೊಕ್ಕ ಸಾಧನೆಗೂ
ಅರಳಿದ ಮೂಗುತಿ ಹೊತ್ತ ಸತಿಗೂ
ಒಡಲಲ್ಲಿ ಹಸಿದ ಬಾಣಲೆ ಅರಳಿಸಿ
ರೊಟ್ಟಿ ಸುಟ್ಟು ತಿನಿಸಿದ ನಿನ್ನ
ಒರಟು ಕೈಗಳ ಕಪ್ಪಿಗೂ ನೆನೆಯುತ್ತ
ಚಿಕ್ಕಿಯ ಬೆಳಕಲ್ಲಿ ಹರಡಲಿ ಈ ಸಾಲು

ಇಡೀ ಬೆಟ್ಟವ ಬಣ್ಣದಲಿ ತೋಯಿಸಿಬಿಡು,
ಗಂಟಲಲ್ಲಿ ಪಸೆ ಆರದಿರಲಿ
ಕಾಯುವುದು ಬೇಡ ನನಗೆ
ಹೇಳದೆ ಹೋಗಲಾರದಷ್ಟು ಕಟುಕನಲ್ಲ ನಾನು.

ಜೋಗತಿ ಹಾಡಿದಳು
ಗಲ್ಲಿ, ಗೋಪುರ, ಗುಡಿ, ಗುಹೆಗಳಲ್ಲಿ
ನಿನ್ನ ನೆನೆಯುತ್ತ, ಮರುಕಪಡುತ್ತ
ಕೋಪದಲಿ ಪ್ರೀತಿಯಿಂದ
ಸವೆಯಲಾರದ ಕ್ಷಿತಿಜ,
ಹಿಂತಿರುಗಿದರೆ ಭೋರ್ಗರೆಯುವ ಸಮುದ್ರ
ಕಪ್ಪಿಟ್ಟ ಕಾಡು, ಕಣ್ಣಲ್ಲಿ ರಕ್ತ
ಕ್ಷಮಿಸು
ಗೆಳೆಯ ಮುಂದೆ ನೋಡು

ಮುರಿದ ಹಡಗಿನಲ್ಲಿ ಹುಡುಕು
ನೀ ಕಟ್ಟಿದ, ಮನೆಯ
ಮನೆಯ, ನನ್ನೊಂದಿಗೆ
ಹೂಡಿದ ಒಲೆಯ,
ಅಕ್ಷರಗಳ ಹೊತ್ತಿಸಿ ಬೇಯಿಸಿದ ಅಡುಗೆ
ಎಲ್ಲರಿಗೂ ಬಡಿಸುವೆ

ಆಡು ಕಚ್ಚಿದ ಬಳ್ಳಿ
ಸಿಟ್ಟು ಬಂದಂತೆ ಚಿಗುರಿ
ಮನೆಯ ತಬ್ಬಲಿ....!
ಹಾಡುವುದದೇಕೆ ನಿಲ್ಲಿಸಿದೆ ನೀ ?
ಕಪಟತನ, ಅಪ್ರಮಾಣಿಕತೆಯ
ಮರಿ ಎದ್ದವಲೇ ನಿನ್ನ ನಗೆಯ ಅಲೆ


ಯಾರಿಗಿದು ಉತ್ತರ ?
ಪಿತೃಹತ್ಯೆಯ ಪಾಪ ತಟ್ಟದಿರಲಿ ನನಗೆ !

ನನ್ನೊಳಗಿನ ಬೆಂಕಿಯಿಂದ
ಸ್ಫುಟಗೊಂಡ ಕಲ್ಪನೆ ನೀನು,
ನಿನ್ನೊಳಗಿದೆ ಹತಾಶೆ, ಕರಾಳತೆ,
ತಂಗಾಳಿಯ ಬತ್ತಿಸುವ ಭೀಕರತೆ
ಮನುಷ್ಯರಲ್ಲವೇ ನಾನು ನೀನು ?

ನನ್ನ ಕಾಪಾಡಬಲ್ಲ ಧೀರ, ವೀರ
ಬಿಳಿ ಕುದುರೆಯನೇರಿ ಬರುವ
ರಾಜಕುಮಾರ ನೀನಾಗಿದ್ದರೆ
ನನ್ನವಳ ಒಂದು ಕುಹಕದ
ಕಿರುನಗೆ ನಿನ್ನ ಹೀರಿ,
ಅಳಿಸಿಬಿಡುತ್ತಿತ್ತು.

ಕೇಳುತಿದೆ ಅವಳ ಹಾಡು,
ಕೇಕೆಯ ನಗೆ, ಬದುಕೇ
ಸುಸ್ತಾಗಿ ಬವಳಿ ಬಂದಂತೆ
ವನವ ಹೊಕ್ಕು, ಬೆಂಕಿಯಲಿ
ಮಲಗುವುದಕ್ಕಿಂತ, ಕೈಯಲ್ಲಿ
ಬೊಕ್ಕೆ ಎದ್ದು, ರಕ್ತಹರಿದು
ನೆನೆಯಲಿ ನನ್ನ ಅಕ್ಷರ,

– *ಕೆ.ಟಿ. ಸರಸ್ವತಿ*, ತುಮಕೂರು



ಬಿತ್ತಾಕಿಗೇ ಗೊತ್ತು ಬೀಜದ ಗುಟ್ಟು

ನಿರೂಪಣೆ : ವಿ. ಗಾಯತ್ರಿ

ಕಾಳಮ್ಮ, ಕೊಟ್ರಮ್ಮ, ಮೂಗಮ್ಮ, ಭಾಗ್ಯಮ್ಮ, ದೇವಿಕ, ಸರಸ್ವತಮ್ಮ, ಸರೋಜಮ್ಮ, ವಸಂತ, ಬಿ. ಕಾಳಮ್ಮ, ಜಿ. ಕೊಟ್ರಮ್ಮ, ಗೌರಮ್ಮ, ಬುಜಗಮ್ಮ, ಮಂಗಳಮ್ಮ, ಸಾವಿತ್ರಮ್ಮ, ಮಲ್ಲಮ್ಮ, ಮಹಾಲಕ್ಷ್ಮಿ, ಸರೋಜಮ್ಮ, ದೇವಮ್ಮ. ಸುವರ್ಣಮ್ಮ

'ಕೃಷಿಯಲ್ಲಿ ಮಹಿಳೆ'ಬಗ್ಗೆ ಆಗಿರುವಷ್ಟು ವಿಸ್ತೃತ ಚರ್ಚೆ ನಮ್ಮಲ್ಲಿ ಪ್ರಾಯಶಃ ಕೆಲವೇ ವಿಷಯಗಳಲ್ಲಷ್ಟೆ ಆಗಿದೆಯೆನ್ನಬಹುದು. ಅನೇಕಾನೇಕ ಅಧ್ಯಯನಗಳ ಮೂಲಕ ಇದರ ವಿವಿಧ ಆಯಾಮಗಳನ್ನು, ನಿರ್ದಿಷ್ಟ ಸಮಸ್ಯೆಗಳನ್ನು ಗುರುತಿಸಲಾಗಿದೆ. ಮತ್ತು ಅದನ್ನು ಮುಖ್ಯ ರಂಗಕ್ಕೆ ತಂದು ಮಹಿಳಾಬೇಸಾಯಿಗಳ ಪರವಾಗಿ ದನಿ ಎತ್ತುವ ಪ್ರಯತ್ನಗಳು ಸಾಕಷ್ಟಾಗಿವೆ. ಕೃಷಿಯ ಕೇಂದ್ರ ಮಹಿಳೆಯರು ಎಂಬುದನ್ನಂತೂ ಇಂದು ಯಾರೂ ಅಲ್ಲಗಳೆಯಲಾರರು. ಆದರೆ ಅದನ್ನು ಗುರುತಿಸುವ ಅವಸರದಲ್ಲಿ ಅವರನ್ನು ಅನವಶ್ಯಕವಾಗಿ ಓಲೈಸಲಾಗುತ್ತಿದೆಯೇ ಹೊರತು ಮಹಿಳೆಯರ ದೃಷ್ಟಿಕೋನದಿಂದ ಕೃಷಿಯಲ್ಲಿ ಮರುಚಿಂತನೆಗಳನ್ನು, ಬದಲಾವಣೆಗಳನ್ನು ತರುವ ಬಗ್ಗೆ ಅಂಥ ಕಾಳಜಿ ಕಾಣುತ್ತಿಲ್ಲ. ಜಾಗತೀಕರಣದ ಯುಗದಲ್ಲಿ ಕೃಷಿ ರಂಗದಲ್ಲಿ ಉಂಟಾಗುತ್ತಿರುವ ಆರ್ಥಿಕ ಮರುರಚನೆಗಳಿಂದ ಮಹಿಳೆಯರ ಮೇಲೆ ಆಗುತ್ತಿರುವ ಪರಿಣಾಮವನ್ನು ಗುರುತಿಸಿ ಅದನ್ನು ಕೈಗೆತ್ತಿಕೊಳ್ಳುವ ಕಾಳಜಿಯಂತೂ ಬಹಳ ಕಡಮೆ.

ಕೃಷಿಯಲ್ಲಿ ಮಹಿಳೆಯರ ಪಾತ್ರ ಮತ್ತು ಅದರ ಹರಹು(ನಿರ್ವಹಣೆಯಿಂದ ಹಿಡಿದು ಕಾರ್ಮಿಕರವರೆಗೆ) ಬಹು ವಿಸ್ತಾರವಾದದ್ದು, ಸಂಕೀರ್ಣವಾದದ್ದು. ಇದೆಲ್ಲವನ್ನೂ ಕುರಿತು ಅವರೇ ಸ್ವತಃ ಮಾತನಾಡಿದಾಗ ವ್ಯಕ್ತವಾಗುವ ಕಾಳಜಿಗಳು ಸಂಬಂಧಪಟ್ಟ ಎಲ್ಲರ ಕಣ್ಣೂ ತೆರೆಸುತ್ತವೆ. ಮತ್ತು ಆ ಕ್ಷೇತ್ರದಲ್ಲಿ ಇಡಬೇಕಾದ ಹೆಜ್ಜೆಗಳಿಗೆ ಜಾಡು ಸಿಕ್ಕಿದಂತಾಗುತ್ತದೆ. ಆ ಕಾರಣಕ್ಕಾಗಿಯೆ ಅಂಥ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಇಲ್ಲಿ ಮಾತನಾಡಿರುವವರು ಕೂಡ್ಲಗಿ ತಾಲೂಕಿನ ಹಲವು ಗ್ರಾಮಗಳಲ್ಲಿ ಸ್ಥಳೀಯವಾಗಿ ಸಂಘಗಳನ್ನು ರಚಿಸಿಕೊಂಡು ತಮ್ಮ ಜಮೀನಲ್ಲಿ ಸಾವಯವ ಕೃಷಿ ಅಳವಡಿಸಿಕೊಂಡಿರುವ ಮಹಿಳೆಯರು. ತಾಲೂಕು ಮಟ್ಟದ 'ಪ್ರಯೋಗ ಪರಿವಾರ'ದ ಸದಸ್ಯರು.

ಬೇಸಾಯದಲ್ಲಿ ಹೆಂಗಸರ ಕೆಲಸ

ನಾವು ಹೆಂಗಸರು ಬೇಸಾಯದಲ್ಲಿ ಎಲ್ಲ ಕೆಲಸ ಮಾಡುತ್ತೇವೆ. ಹೊಲದ ಕೆಲಸ ಹೆಂಗಸರಿಗೆ ಇಂಥದ್ದು ಬರಲ್ಲ ಅನ್ನಂಗಿಲ್ಲ. ಬಿತ್ತನೆ, ಕಳೆ ಕೀಳದು, ನೆಲಗಡಲೆ ಕೀಳದು, ಸೊಪ್ಪ ಕೊಯ್ಯದು, ಹತ್ತಿ ಬಿಡಿಸದು, ಜೋಳ ಕುಯ್ಯದು–ದುಂಡಿಗಾಕದು, ಸೂಡು ಕಟ್ಟಿ ಹೊತ್ತು ತರದು ಎಲ್ಲ ಮಾಡುತ್ತೇವೆ. ಹೆಣಮಕ್ಕಳು ನೇಗಲ, ಕುಂಟಿ ಹಿಡಿಯುವುದಿಲ್ಲ ಅನ್ನುವುದು ತಪ್ಪು. ನಾವು ನೇಗಲ, ಕುಂಟಿ ಎಲ್ಲ ಹಿಡಿತೀವಿ. ಗಂಡು ಮಕ್ಕಳ ಸಮಕ್ಕ ಕೊಯ್ಯತೀವಿ. ಹತ್ತಿ ಹೊಲಾನು ಹರಗ್ತೀವಿ, ಆ ರೀತಿ ಗಂಡಸುಮಕ್ಕಳು ಏನು ಮಾಡ್ಯಾರೋ ಅದನೆಲ್ಲ ಮಾಡೀವಿ ನಾವು. ನಾವು ಚನಕೆ ಹಿಡದು ನೀರೂ ಹಾಯಸೀವಿ, ಸೇಂಗಾಗೆ ಎಡೆಕುಂಟಿ ಹೊಡಿತಾರಲ್ರಿ, ನಾವು ಕುಂಟಿ ಹಿಡೀತೀವಿ, ಎತ್ತು ಹಿಡಿದು ನಾವು ಹೆಂಗಸರು ಬೇಸಾಯ ಮಾಡ್ತೀವಿ. ಎತ್ತನ್ನ ಹೆಂಗಸರಿಗೆ ಹಿಡಿಯಕ್ಕ ಆಗಲ್ಲ ಅಂತಾರ. ನಾವು ಎತ್ತು ಗಿತ್ತು ಎಲ್ಲ ಹೊಡೀತೀವಿ.

ಬಿತ್ತನೆ ಬೀಜ ಎಲ್ಲ ಹೆಣಮಕ್ಕಳೇ ಮಾಡುವುದು. ನಾವೇ ಹಿಂದೆ ಅಕಡಿ ಹಾಕದು. ಹೊಲದ ಕೆಲಸ ಇದ್ದಾಗ ನಾವು ಬೆಳ್ಳಿಗ್ಗೆ ಅಷ್ಟೊತ್ತಿಗೆ ಅಡಿಗೆ ಮಾಡಿಕೊಂಡು ಒಬ್ಬೊಬ್ಬರೇ ಹೊರಟು ಬಿಡುತ್ತೇವೆ. ಕೆಲಸಕ್ಕ ಆಳು ಇಕ್ಕದಂಗ ಕೆಲಸ ಮಾಡಿಕೊಂಡು ಹೋಗುತ್ತೇವೆ. ಗಂಡಸುಮಕ್ಕಳು ಗಳ ಹೊಡಕೊಂಡು ಹೊಲಕ್ಕೆ ಹೋಗ್ಯಾರ ಅಂದರ ಹೆಣಮಕ್ಕಳು ಹೋಗದೆ ಅಲ್ಲಿ ಕೆಲ್ಸ ಚಾಲೂ ಆಗೂದಿಲ್ಲ. ನಾವು ಅಡಿಗೆ ಮಾಡಿಕೊಂಡು ಬುತ್ತಿ ಕಟ್ಟಿಕೊಂಡು ಹೋಗೋವರೆಗೂನೂ ಅವರು ನೇಗಿಲು ಕಟ್ಟಂಗಿಲ್ಲ. ಬಿತ್ತನೆಗೆ ಆಗಲಿ, ಹತ್ತಿ ಹೊಲ ಹರಗಕ್ಕೆ ಹೋಗಲಿ, ಮಡಿಕಿ ಹೊಡೆಯಕ್ಕ ಹೋಗಲಿ, ಎತ್ತು ಇಲ್ಲಿ ಬಂತು ಅಂದ್ರೆ ಬುತ್ತಿ ಅಲ್ಲಿ ರೆಡಿ ಇರಬೇಕು, ಇಲ್ಲದಿದ್ದರೆ 'ಏನು ತಡ ಮಾಡೀರಿ ನೀವು' ಅಂತ ಅವ್ವ ಅಪ್ಪ ಎಲ್ಲ ಬಾಯಲ್ಲಿ ಬರ್ತಾರ.

ನಾವು ಹೆಂಗಸರು ಸುಮ್ಮಗ ಅಡಿಗೆ, ಮನೆಕೆಲಸ ಮಾಡಿಕೊಂಡು ಇರಲಕ್ಕ ರೈತರ ಮನಿಯಾಗ ಆಗ್ತದ? ನಾನು ಹೊಲಕ್ಕೆ ಹೋಗಲ್ಲ ಅಂತ ಇಲ್ಲಿ ಕುಂತವರು ನಾವು ಯಾರಾರು ಹೇಳಿದರೆ ನಡಿತದಾ? ನಡೆಯಲ್ಲ. ಹೊಲಕ್ಕೆ ಹೋಗೇ ತೀರಬೇಕು. ಗಡಾ ಗಡಾ ಹೋಗತಿರಬೇಕು. ಇಲ್ಲ ಅಂದರ ಒದ್ದರೂ ಒದಿಸ್ಕಂಬೇಕು.

ತಮ್ಮ ಹೊಲ ನೋಡದೇ ಇರೋವಂತ ಹೆಂಗಸರೂ ಇರತಾರ. ಅಂತವರು ಎಲ್ಲೋ ನೂರಕ್ಕೆ ಒಬ್ಬರು. ನಮಗೆ ಹೊಲದ ಬದುಕು ಸುಧಾರಿಸ್ಕಣಕ್ಕೆ ಆಗಲಪ್ಪ, ಮನೆಲಷ್ಟೇ ಮಾಡಿಕೊಂಡು ಹೋಗ್ತೀನಿ ಅನ್ನುವವರೂ ಇರುತ್ತಾರ. ಹಾಗೆನೇ ತಮ್ಮ ಹೊಲದ ಮೊಕ ನೋಡದ ಗಂಡಸ್ರೂ ಓಸು ಮಂದಿ ಇರತಾರ. ನನ್ನ ಹೊಲದಲ್ಲಿ ಇಲ್ಲಿ ಕಾಲುವೆ ಐತಿ, ಇಲ್ಲಿ ಕಣ ಐತಿ ಅನ್ನಿಲ್ಲದಂಗೂ ಇರ್ತಾರ. ಇತ್ತ ಗಂಡಮಕ್ಕಳಿಗೂ ಜವಾಬ್ದಾರಿ ಇಲ್ಲ, ಅತ್ತ ಹೆಣಮಕ್ಕಳಿಗೂ ಜವಾಬ್ದಾರಿ ಇಲ್ಲ ಅಂದರ ಎಲ್ಲ ಹಾಳಾದಂಗೆ. ಬರೀ ಸಾಲದಲ್ಲಿ ಮುಳುಗ್ತೇವು. ಮಗ, ಸೊಸಿ

ಯಾರೂ ಜವಾಬ್ದಾರಿ ತಗತಾ ಇಲ್ಲ ಅಂದರ, ಆಗ ಮನೆಗೆ ಯಜಮಾನರು ಅಂತ ಯಾರು ಇರ್ತಾರ ಅವರೇ ಹೋಗಿ ನೋಡಿ ಬರಬೇಕು. ಇನ್ನು ಹೆಣಮಕ್ಕಳು ಆಳುಪಾಳು ಕರಕಂಡು ಮಾಡಿಕೊಂಡು ಹೋಗುವವರೂ ಇದ್ದಾರ ಬಿಡ್ರೀ.

ಒಟ್ಟಿನಲ್ಲಿ ಬೇಸಾಯದಲ್ಲಿ ಹೆಣಮಕ್ಕಳೇ ಹೆಚ್ಚು ಕೆಲಸ ಮಾಡುವುದು. ಆದರ ರೈತರು ಅಂದ ತಕ್ಷಣ ಗಂಡಸರು ಅನ್ನುವ ಭಾವನೆ ಇದೆ. ನಮ್ಮ ಮನಸ್ಸಿನಲ್ಲೂ ಅದೇ ಇದೆ. ಆ ಥರ ಬಂದು ಬಿಟ್ಟಿದೆ. ಇಬ್ಬರೂ ಸಮನಾಗಿ ಮಾಡಿದರೇನೆ ರೈತರ ಕೆಲಸ ಮುಂದಕ್ಕ ಹೋಗದು.

ಬಿತ್ತನೆ– ಬೀಜ ಸಾಮ್ರಾಜ್ಯ

ಮಹಿಳೆಯರ ಮುಖ್ಯ ಪಾತ್ರ ಬಿತ್ತನೆ–ಬೀಜದಲ್ಲಿ. ಇದರ ಬಗ್ಗೆಯೇ ಈಗ ಮಾತನಾಡೋಣ. ಈಗ ನಮ್ಮ ಬಿತ್ತನೆ ಕಾಲ ಬರತಾ ಇದೆ. ಈಗ ಏನು ಮಾಡಬೇಕು ಅನ್ನೋದನ್ನ ಎಲ್ಲ ಕುಂತು ಮಾತುಕತೆ ಮಾಡಿಯೇ ಹಾಕ್ತೀವಿ. ಯಾವ ಬಿತ್ತನೆ ಬೀಜ ಹಾಕಬೇಕು? ಹಾಕಬಾರದು ಅನ್ನೋ ತೀರ್ಮಾನ ಸಾಮಾನ್ಯವಾಗಿ ನಾವು ಮನಿ ಮಂದಿ ಎಲ್ಲ ಮಾತ್ಯಾಡ್ಕಂಡೇ ಹಾಕ್ತೀವಿ. ಹಿಂದೆ ನಮ್ಮ ಅಜ್ಜರ ಕಾಲದಲ್ಲಿ ಗಂಡಸುಮಕ್ಕಳೇ ತೀರ್ಮಾನ ತಗಂಡು ತಂದು ಹಾಕದು ಎಲ್ಲ ಇತ್ತು. ಈಗ ಅದೆಲ್ಲ ಇಲ್ಲ. ಆಗ ಹೆಂಗಸರು ಎಲ್ಲೂ ಹೊರಗ ಹೋಗತಿದ್ದಿಲ್ಲಂತೆ. ಏನಾರ ತರಕ್ಕೆ ಹೋದರೆ, 'ನೀನೇನು ಗಂಡಸೇನು ಬಾ, ಅಂಗಡಿ ಮನೆಗೆ ಯಾಕ್ ಹೋಗ್ತಿ' ಅನ್ನೋರಂತೆ. ಸಂತೆಗೆ ಹೋಗದು, ಅಂಗಡಿ ಮನೆಗೆ ಹೋಗಿ ಬೀಜ ತರದು ಅವರೇ. ಗೊಬ್ಬರ ತರದು, ಮಾರ್ಕೆಟ್ಟಿಗೆ ಮಾಲು ಬಿಡದು ಇದೆಲ್ಲ ಈಗ್ಲೂ ಗಂಡಸುಮಕ್ಕಳೇ ಮಾಡ್ತಾರ. ಅವ್ರೇ ಅಂಗಡಿಗೆ ಹೋಗಿ ಬೀಜ ತರಬಹುದು. ಆದರೆ ಇವತ್ತು ಯಾವ ಬೀಜ ಹಾಕಬೇಕು ಅನ್ನುವ ತೀರ್ಮಾನ ಹೆಂಗಸರು, ಗಂಡಸರು ಕೂಡೇ ಮಾಡುವುದು.


'ಶೇಂಗಾ ಸುಲಿರಿ, ಬೀಜ ಕ್ಲೀನ್ ಮಾಡಿ ಇಡಿ, ಆ ಹೊಲಕ್ಕ ಜೋಳ ಹಾಕನು, ಈ ಹೊಲಕ್ಕ ಹೈಬ್ರಿಡ್ ಜೋಳ ಹಾಕನು, ಇಲ್ಲಿ ನವಣೆ ಬಿತ್ತೋಣು' ಹಿಂಗೆಲ್ಲ ಮಾತಾನಾಡಿಕೊಂಡೆ ಮಾಡ್ತೀವಿ. ನಮ್ಮ ಅಭಿಪ್ರಾಯ ಅವರು ಕೇಳ್ತಾರ. ನಾವು ಬಿತ್ತಬೇಕು ಅಂತ ಇಷ್ಟ ಪಟ್ಟಿದ್ದನ್ನೇ ಬಿತ್ತತಾರ. 'ಅದು ಬ್ಯಾಡ್ರಿ, ಇದನ್ನೇ ಬಿತ್ತೋಣು' ಅಂದ್ರೂ ಬಿತ್ತಕ್ಕೆ ರೆಡಿನೆ. ಹೆಚ್ಚು ಕಡಿಮೆ ಎಲ್ಲ ಮನೇಲೂ ಹೆಣಮಕ್ಕಳ ಮಾತು ಬಿಟ್ಟು ಹೋಗಲ್ಲ.

ಇನ್ನ ಒಬ್ಬೊಬ್ಬರು, "ಏಯ್, ನಿನಗೇನು ಗೊತ್ತದ, ಸುಮ್ಮನೆ ಕೂತ್ಕೋ" ಅನ್ನುವವವರೂ ಇರ್ತಾರ.

ಬೀಜ ಯಾವುದೆಂದು ಬಿತ್ತಾಕಿಗೇ ಗೊತ್ತು

ಅಂತೂ ಕೊನೆಗೆ ನಾವು ಉಡಿಯಾಗ ಕಟ್ಟಿಕೊಂಡಿದ್ದು ಬಿತ್ತಿದ ಮೇಲೆ ಅವರು ಏನೂ ಮಾಡಕ್ಕಾಗಲ್ಲ. ಹೆಣಮಕ್ಕಳು ಎಲ್ಲ ಬೀಜ ಗಂಟು ಗಂಟು ಗಂಟು ಕಟ್ಕ್ಯಂದು ಕಾದು ಇಟಕಂಡಿರ್ತೀವಿ. ಯಾವ ಯಾವ ಬೆಳೇದಾಗ ಯಾವ ಯಾವ ಅಕ್ಕಡಿ ಹಾಕಬೇಕು, ನಮ್ಮ ಹತ್ರ ಯಾವ ಅಕ್ಕಡಿ ಕಾಳಿಲ್ಲ, ಯಾವ ಯಾವ ಜಾಗಕ್ಕೆ ಯಾವದು ಹಾಕಬೇಕು ಅನ್ನದು ಹೆಣ ಮಕ್ಕಳಿಗೆ ಗೊತ್ತಿದ್ದಷ್ಟು ಅವರಿಗೆ ಗೊತ್ತಾಗದಿಲ್ಲ. ಅವರಿಗೆ ಗೊತ್ತಾಗದು ಬಿತ್ತಿದ ನಂತರ ಮಾತ್ರ. ಮಡಿಕಿ, ಎಳ್ಳು, ಉದ್ದು ಪ್ರತಿಯೊಂದು ಬೀಜನೂ ಗಂಟು ಕಟ್ಟಿಕಂಡಿರ್ತೀವಿ. ಬಿತ್ತ ದಿವಸ ಎಲ್ಲ ಪುಟ್ಟಿಯಾಗೆ ಇಟ್ಕಂಡು ಹೋಗಿ ಎಲ್ಲಿ ಯಾವ ಬೀಜ ಹಾಕಬೇಕೋ ಹೆಣಮಕ್ಕಳು ಉಡಿಯಾಗ ಕಟ್ಕೊಂಡು ಹಾಕದು. ಎಷ್ಟು ಎಷ್ಟು ಸಾಲಿಗೆ ಯಾವದು ಹಾಕಬೇಕು ಅನ್ನದು ನಮಗೇ ಗೊತ್ತಿರದು. ಬೆಳಿ ಹ್ಯಾಂಗ ಇರ್ತಾವೋ ಹಂಗ ನಾವು ಅಕ್ಕಡಿ ಸಾಲು ಹಾಕ್ಕೊತಾ ಹೋಗ್ತೀವಿ. ಗಳ ಹೊಡೆಯದು ಒಂದು ಬಿಟ್ಟರೆ ಗಂಡಮಕ್ಕಳಿಗೆ ಏನೂ ಗೊತ್ತಿರಲ್ರಿ. ಅಕ್ಕಡಿ ಬೀಜದ ವಿಚಾರ ಗಂಡ 'ಮಕ್ಕಳು ಏನೂ ಹೇಳಕ್ಕ ಹೋಗಲ್ರಿ. 'ಅವರಿಗೆ ಗೊತ್ತದ ಬಿಡು, ಅವರು ಹಾಕತರ' ಅಂತಾರ. ಅಕ್ಕಡಿ ಹಾಕದ್ರಿಂದ ಒಳಗಿರೋ ಪೈರಿಗೆ ಏಟಾಗಬಾರದು, ಇಷ್ಟು ಸಾಲಿಗೆ ಇಷ್ಟಿಷ್ಟು ಹಾಕಬೇಕು ಅಂಬದು ನಮಗ ಅನುಭವ ಇರತ್ತಲ್ರಿ, ಆ ಪ್ರಕಾರವಾಗಿ ಹಾಕ್ತೇವು. ಆ ಅನುಭವದ ಮೇಲೆ ನಾವು ಬಿತ್ತದು. ಇಲ್ಲಿ ಹಾಕಿದರೆ ನಮ್ಮ ಹೊಲದಾಗ ಇರ್ತಾವು, ಇಲ್ಲಿ ಹಾಕಿದರೆ ಹರಕೊಂಡು ಹೋಗಕ್ಕೆ ಅನುಕೂಲ ಆಕೇತಿ ಅನ್ನದು ನಮಗೆ ಹೆಣಮಕ್ಕಳಿಗೆ ಗೊತ್ತಿರ್ತಾವು. ಪ್ರತಿ ಸಾಲಿಗೆ ಹಾಕಬೇಕಾದರೂ ಅಥವಾ ಮಿಶ್ರ ಮಾಡಿ ಹಾಕಬೇಕಾದರೂ ನಾವು ಈ ಬೀಜ ಇದಕ್ಕೆ ಬಂದದು ಅಂತ ಲೆಕ್ಕ ಇಟಕೊಂಡಿರ್ತಿವಿ. ಮಡಿಕಿ, ಹುರಳಿ, ಅಲಸಂದಿ, ಬದನಿ ಬೀಜ, ಅವರಿ, ಬೆಂಡಿ, ಪುಂಡಿ, ಟೊಮಟಿ ಬೀಜ ಇದೆಲ್ಲ ಜೋಳದಲ್ಲಿ ಹಾಕ್ತೀವಿ.

ನಾವು ಬಿತ್ತನೆಗೆ ಹೊರಟಾಗ, ಏನು ಬೀಜ ತಗಂಡೀವಿ, ಯಾವ ಯಾವ ಸಾಲಿಗೆ ಯಾವ ಯಾವ ಬೀಜ ಹಾಕ್ತೀವಿ ಇದ್ಯಾವುದೂ ಗಂಡುಮಕ್ಕಳಿಗೆ ಗೊತ್ತೇ ಇರಂಗಿಲ್ಲ. 'ಕಾಲಿಗೆ ತೊಡರೋ ಬಳ್ಳಿ ಹಾಕಬೇಡ್ರವ್ವ' ಅಂತ ಹೇಳ್ತಾ ಇರ್ತಾರ. **ನಾವು ಬಿತ್ತನೆ ಮಾಡಿರ್ತೀವಲ್ಲ, ಅದರ ಸಸಿ ಬಂದಮೇಲೆ ಗಂಡಸರಿಗೆ ಗೊತ್ತಾಗದು ಯಾವ ಯಾವ ಬೀಜ ಹಾಕಿದ್ದೇವಂತ.** ಯಾವ ಬೀಜ ಹಾಕ್ತೀವಿ ಅನ್ನದು ಬಿತ್ತಾಕಿಗೆ ಮಾತ್ರ ಗೊತ್ತಿರದು. ಅದನ್ನ ಹ್ಯಾಂಗ ಕಾಪಾಡ್ಕ್ಯಂಬೇಕು? ಎಷ್ಟು ಸಾಲಿಗೆ ಏನು ಹಾಕಬೇಕು? ಎಲ್ಲ ನಮಗೆ ಚನ್ನಾಗಿ ಗೊತ್ತು. ಒಂದು ಬೆಂಡಿ ಬೀಜ ಆಗಲಿ, ಅವರಿ ಬೀಜ ಆಗಲಿ ಬೀಜ ಸಂಗ್ರಹಣೆ ಮಾಡವ್ರು ನಾವೆ.



'ಏನು ಬಿತ್ತಿದ್ರಪ್ಪ ಇವತ್ತು' ಅಂತ ಕೇಳಿದರೆ ಗಂಡು ಮಕ್ಕಳು, 'ಶೇಂಗಾ ಬಿತ್ತ್ಕ್ಯಂದು ಬಂದೆವಪ್ಪ ಇವತ್ತು' ಅಂತಾರ. ಶೇಂಗಾ ಬಿತ್ತಿದ ಒತ್ತಟ್ಟಿಗೆ 5–6 ಬೀಜ ಬಿದ್ದಿರ್ತಾವಲ್ಲ ಹೊಲದಲ್ಲಿ ಅದೆಲ್ಲ ಅವರಿಗೆ ಗೊತ್ತಿರಲ್ಲ. ಶೇಂಗಾ ಮಧ್ಯದಲ್ಲಿ ಬೆಂಡಿ ಸಾಲು ಇದೆಲ್ಲ ಹಾಕಿರದು ಅವರಿಗೆ ಗೊತ್ತಿರಲ್ಲ. ಹೇಳಬೇಕೆಂದರ, ಮಿಶ್ರ ಬೆಳೆ ಬಗ್ಗೆ ನಮ್ಮ ಗಂಡಸುಮಕ್ಕಳಿಗೆ ಅಷ್ಟೇನೂ ತಿಳಿದಿಲ್ಲ. 'ಎಲ್ಲನೂ ಕಲಸಿ ಬಿತ್ತಿ ಬಿಡ್ರಿ ಅತ್ತಗ' ಅಂತಾರ.

ಅಕ್ಕಡಿ ಬೀಜ ನಮಗೆ ಜೀವದಂತೆ

ಅವರು ರೊಕ್ಕ ಬರದು, ಕ್ಯಾಶ್ ಎಣಿಸ್ಕ್ಯಣದು ನೋಡ್ಕ್ಯಂತಾರ, ನಾವು ಉಣ್ಣದು ನೋಡ್ಕ್ಯಂತೀವಿ. ಹೆಚ್ಚಿಗೆ



ನಾನು ಹಾಕುವ ಬೀಜ ನಮಗೇ ಗೊತ್ತು

ಆಗಿದ್ದು ಮಾರತೀವಿ. ಮನೆಗೆ ಊಟಕ್ಕೆ ಆಗಲಿ ಅಂತ ಒಂದು ವಿಚಾರ. ಇನ್ನು ಕಷ್ಟ ಸುಖಕ್ಕೆ ಹೆಂಗಸರ ಕೈಯಲ್ಲೂ ಸ್ವಲ್ಪ ದುಡ್ಡಿರಲಿ, ಅದನ್ನು ಮಾರಾಟ ಮಾಡಿಕೊಂಡು ನಾಲ್ಕು ಕಾಸು ಬರುತ್ತೆ ಅಂತಾನೂ ಹಾಕ್ತೀರ್ವಿ. ದೊಡ್ಡ ಬಂಡವಾಳ ಗಂಡಸುಮಕ್ಕಳ ಕೈಯಲ್ಲಿ ಹೋಗುತ್ತೆ. ಇದು ಸಣ್ಣ ಬಂಡವಾಳ. ಅದು ಹೆಣಮಕ್ಕಳ ಕೈಗೆ. ಅವರದ್ದು ಏನಿದ್ರೂ ದೊಡ್ಡ ಬೆಳೆ. ರೊಕ್ಕ ಬಾಳ ಬರದು ನೋಡ್ತಾರ. ಅವರಿಗೆ ಏನಿದ್ರೂ ಮೂರು ಬೆಳೆ ಕೈಯಾಗ ಸೇರಬೇಕು. ಮೂರು ಬೆಳೆ ಏನಾದರೂ ಎಡವಟ್ಟು ಆಯಿತಂದ್ರ ಮೂರು ನಾಮ ಸೇರ್ತಾವು. ಸಾಲ ಸೋಲ ಮಾಡಿ ಗೊಬ್ರ ತಂದು ಹಾಕಿರ್ತಾರ, ಬೆಳೆ ಕೈ ಕೊಡ್ತು ಅಂದ್ರ ಮೂರು ನಾಮವೇ. ಬಂಡವಾಳ, ಅಮಾನಿ ಮೇಲೆ ಬಡ್ಡಿ ಸೇರಿ ಕಳಿಸಿರ್ತಾರ. ಮತ್ತ ಹ್ಯಾಂಗ ಉದ್ಧಾರ ಆಗದು?

ನಮಗೆ ಯಾರೂ ಒಂದು ಹತ್ತು ಪೈಸ ಕೊಟ್ಟು ಖರ್ಚು ಮಾಡಿ ಅಂತ ಹೇಳಿಲ್ಲ. ನಾವೇ ಎಲ್ಲನಾ ಹೋಗದು, ಕೂಲಿ ಮಾಡದು ತರದು. ಈ ಅಕ್ಕಡಿ ಬೆಳೆ ನಮಗೆ ಕಷ್ಟದಲ್ಲಿ ಜೀವ ಬಂದಂಗ. ಆದರೆ ಈಗ ಈ ಅಕ್ಕಡಿ ಬೀಜಗಳೆಲ್ಲ ಬಾಳ ಹೋಗಿಬಿಟ್ಯಾವ್ರಿ, ಉಚ್ಚೆಳ್ಳು ಅಂತೂ ಚೀಲಗಟ್ಟಲೆ ಬೆಳಿತಿದ್ದೆವು. ಈಗ 2–3– ಸೇರೂ ಇಲ್ಲದಂಗಾಗಿದೆ. ಈ ಅಲಸಂದಿ ಆಗಲಿ, ಮಡಿಕಿ, ಹೆಸರಾಗಲಿ ಇವೆಲ್ಲ ಕಡಿಮಿ ಆಗಿಬಿಟ್ಟವೆ. ತೊಗರಿ ಎಷ್ಟೊಂದು ಹಾಕುತ್ತಿದ್ದೆವು, ಎಲ್ಲ ಮಾರಿಬಿದ್ದು ಹೋಗಿಬಿಟ್ಟವು.

ಅಕ್ಕಡಿ ಸಾಲಿನ ಬೀಜಗಳ ವಿಚಾರದಲ್ಲಿ ನಮಗೆ ಗೊತ್ತಿರುವಷ್ಟು ಹೈಬ್ರಿಡ್ ಬೀಜಗಳ ಬಗ್ಗೆನೂ ಗೊತ್ತಿದೆಯಾ ಎಂದರೆ ಇಲ್ಲ ಅಂತಲೇ ಹೇಳಬೇಕು. ಅದು ನಮ್ಮ ಜವಾರಿ ಬೀಜಗಳ ಥರ ಕೂಡಿ ಇಟ್ಕಳಕ್ಕೆ ಬರುದಿಲ್ಲ. ಅದು ನಮ್ಮ ಜವಾರಿ ಬೀಜಳಿಗಿಂತ ಬೇಗ ಬಂದು ಬಿಡತೈತಿ.

ನಮ್ಮಲ್ಲಿದ್ದ, ಹೋದ, ಇರುವ ಬೀಜಗಳು

ನಮ್ಮ ಹಳ್ಳಿಗಳಲ್ಲೇ ತೆಗೆದುಕೊಂಡರೆ ಹಿಂದಿನವೆಲ್ಲ ಜವಾರಿ ಬೀಜಗಳೇ. ನಾಡು ತೊಗರಿ ಅಂತಾರಲ್ಲ, ಮಾಡು ತೊಗರಿ, ಅದು ಇಬ್ಬನಿಗೇ ಆಗುತ್ತೆ. ಮಳಿ ಬೇಕಿಲ್ಲ ಅದಕ್ಕೆ. ಅದಕ್ಕೆ ಹೆಚ್ಚಿನ ಹುಳನು ಬೀಳಲ್ಲ. ಸಣ್ಣ ಕಾಳು. ಎಲ್ಲ ಮಳಿ ಹೋದಮೇಲೆ ಬರುತ್ತೆ. ಅದೀಗ ನಮ್ಮಲ್ಲಿ ಯಾರೂ ಬೆಳೆಯಲ್ಲ. ಈ ಊರಲ್ಲೇ ಸುಮಾರು ಥರ ಬೀಜಗಳು ಈಗ ಸಿಕ್ಕುತ್ತಾ ಇಲ್ಲ. ಮಡಿಕಿ, ಹೆಸರು, ತೊಗರಿ, ಅಲಸಂದಿ, ಉದ್ದು, ಹುರಳಿ, ಗುರೆಳ್ಳು, ಕೊತ್ತಂಬರಿ ಇವೆಲ್ಲ ಹಿಂದೆ ಇದ್ದ ಬೀಜಗಳು ಈಗಲೂ ಅವ, ಆದರೆ ಯಾರೋ ಒಬ್ಬೊಬ್ಬರ ಮನೆಯಲ್ಲಿ. ಎಲ್ಲೋ ಸ್ವಲ್ಪ ಸ್ವಲ್ಪ ಹಾಕ್ತಾರ. ಅದರ ಬಗ್ಗೆ ಬಾಳ ಕಾಳಜಿ ಇಲ್ಲ ಜನರಲ್ಲಿ. ಹಳೆ ನವಣಿ ಒಂದು ಬೆಳೀತಿದ್ದೆವು, ಬಿಳಿ ನವಣಿ ದಪ್ಪ ತೆನೆದು. ಆ ಸಣ್ಣ ನವಣಿ ಹೋಯಿತು. ಈಗ ಇಲ್ಲ. ಈಗ ಎಲ್ಲ ಹೈಬ್ರಿಡ್ ನವಣಿನೇ. ಹಿಂದಕ್ಕೆ 5 ತಿಂಗಳಿಂದು ಗುರೆಳ್ಳು ಹಾಕುತ್ತಿದ್ದೆವು. ಅದನ್ನ ಈಗ ಯಾರೂ ಹಾಕೂದಿಲ್ಲ. ಈಗ ಎಲ್ಲ 3 ತಿಂಗಳದ್ದೇ.

ಈಗ ನಾವೆಲ್ಲ ಒಬ್ಬರತ್ರ ಒಬ್ಬರು ಈಸಕೊಂಡು ಹಾಕದು. ನಿಮ್ಮತ್ರ ಇರದು ನಮ್ಗೆ ಕೊಡ್ರವಾ ಅಂತ ಕೇಳದು. ಹೆಚ್ಚೆಚ್ಚು ಬೆಳೆದವರ ಹತ್ತಿರ ಹೋಗಿ ತಗೊಳ್ಳದು. ಇರುವವರ ಹತ್ತಿರ 'ಸೇರೋ ಅಚ್ಚೇರೋ ಕೊಡ್ರಿ, ಕೊಡ್ತಿವಿ ಬೆಳೀತಲೆ' ಅಂತ ಈಸ್ಕಳದು. ಅವರು ಕೊಡಲಿಲ್ಲ ಅಂದರ ಅಂಗಡಿಲಿ ತಂದು ಬಿತ್ತತೀವಿ. ಎಲ್ಲ ಅಂಗಡಿಲೇ ತರೋ ಪರಿಸ್ಥಿತಿ ಇನ್ನೂ ಬಂದಿಲ್ಲ. ಸಾಕಷ್ಟು ನಮ್ಮಲ್ಲೆ ಅವ.

ಅಪರೂಪದ ತಳಿಗಳು

ನಮ್ಮ ಊರಲ್ಲಿ(ಚಪ್ಪರದಹಳ್ಳಿ) ಜವಾರಿ ಬೀಜಗಳು ಉಳಿದಿವೆ. ಹಿಂದೆ ದೊಡ್ಡ ಕಾಳು ತೊಗರಿ ಇರದು. ಈಗ ಸಣ್ಣ ಕಾಳಿಂದು ಮಾತ್ರ ಅದಾವು. ಸುರೇಳು ಜೋಳ, ಇದು ಬಿಳಿಜೋಳ. ಗಿಡ ಎತ್ತರ ಜಾಸ್ತಿ. ಇದು ನಮ್ಮಲ್ಲಿ ಇದೆ. ಇನ್ನೊಂದು ಹಸಿರು ಭೂಮಿ ಜೋಳ. ಅದು ಒಳ್ಳೆ ಎತ್ತರ ಬೆಳೆಯದು. ದುಂಡು ತೆನೆ. ತೆನೆ ಒಳ್ಳೆ ಕಲ್ಲಿದ್ದಂಗೆ ಇರದು. ಕಾಳು ಗಟ್ಟಿ ಕಾಳು, ಬೀಸಕ್ಕೆ ಕುತಕಂಡ್ರ ಕಲ್ಲು ಬಡ ಬಡ ಅನ್ನದು. ಅಷ್ಟು ಕಲ್ಲಂತ ಜೋಳ. ಅದಿಲ್ಲ ಈಗ ನಮ್ಮಲ್ಲಿ. ಅದು ನಮ್ಮ (ಮೂಗಮ್ಮೋರ) ಮನ್ಯಾಗ ಮೊದಲು ಇತ್ತು. ಅಲ್ಲಿಂದಲೇ ಕೊಟ್ರಮ್ಮನ ಮನಿಗೆ ಒಯ್ದದ್ದು. ನಮ್ಮನೆಲಿ ಎಲ್ಲ ಕಳಕಂಡ ಮೇಲೆ ಮತ್ತೆ ಅವರಲ್ಲಿಂದ ತಂದೆವು. ಅದನ್ನ ನಾನು 2–3 ವರ್ಷ ಹಿಡಕೊಂಡೆ. ಈಗ ನನ್ನ ಹತ್ರವೂ ಇಲ್ಲ, ಅವರ ಮನ್ಯಾಗ ಅದಾವು. ಆದರೆ ಈಗ ಅವರ ಮನ್ಯಾಗ ಇರದು ಅದಕ್ಕಿಂತ ಸ್ವಲ್ಪ ತಳ ಮಟ್ಟದ್ದು. ಇದು ಸೆಕೆಂಡ್ ಕ್ವಾಲಿಟಿ. ಫಸ್ಟ್ ಕ್ವಾಲಿಟಿ ಅಂದರ ಹಸಿರು ಭೂಮಿ ಜೋಳ. ಅದೀಗ ಎಲ್ಲೂ ಇಲ್ಲ.

ಈಗ ನಮ್ಮಲ್ಲಿ ನವಣಿ, ತೊಗರಿ, ಸಜ್ಜೆ ಎಲ್ಲ ಅವ. ಜೋಳ ಅನ್ನದು ಅರಬೆರಕೆಯಾಗಿ ಐತಿ. ಸುರೇಳು ಜೋಳ ಬೇಕಾದಷ್ಟಿದೆ. ಉಳಿದದ್ದೆಲ್ಲ ಬಹಳ ಹಿಂದಿಂದ ಉಳಿಸಿಕೊಂಡು ಬಂದದ್ದು, 25 ವರ್ಷದ ಮೇಲಿಂದಲೂ ಇರುವುದು ಅವ ಶೇಂಗಾ, ಹತ್ತಿ ಬೀಜ, ಸೂರ್ಯಕಾಂತಿ. ಇದೆಲ್ಲ ಅಂಗಡಿಯಿಂದ ತರತೀವಿ. ಕೆಲವರು ಶೇಂಗಾ ಒಂದು ಸಾರಿ ಅಂಗಡಿಯಿಂದ ತಂದದ್ದು ಇಟ್ಟುಕೊಂಡಿರ್ತಾರ. ಹೆಸರು, ಹೈಬ್ರಿಡ್ ಜೋಳ. ಅಂಗಡಿಯಿಂದಲೆ ತರದು.

ಆದರೂ ಹೈಬ್ರಿಡ್ ಬೀಜ ಹಾಕಿದರೆ ಚನ್ನಾಗಿ ಬೆಳೆ ಬರುತ್ತ. ನಮ್ಮವು ಅಂತ ಹಾಕ್ತೀವಲ್ಲ, ಅವು ಸೇರು ಹಾಕಿದರ ಮೂರು ಪಾವು ಅಷ್ಟೆ ಬರದು. ಇದರಿಂದ ಈಗ ಯಾರಿಗೂ ಇದರ ಮೇಲೆ ಆಸೆ ಇಲ್ಲ. ಎಲ್ಲೋ ಅಕ್ಕಡಿ ಸಾಲಾಗಿ ಒಂದು ಹಿಡಿ ಹಾಕದು ಅಷ್ಟೆ

ನಮ್ಮ ಬೀಜಗಳು ಏಕೆ ಹೋದವು?

ನಾನು ಕಾಳಮ್ಮನ ಹತ್ತಿರ ಬೀಜ ತೆಗೆದುಕೊಂಡಿರುತ್ತೇನೆ. ಬೆಳೆದು ವಾಪಸ್ಸು ನಮಗೆ ಕೊಡು ಅಂತ ಕೊಟ್ಟಿರ್ತಾಳ ಕಾಳಮ್ಮ. ಅದನ್ನ ಕಳಕಂಬಿಡ್ತೀವ್ರಿ. ಬಂದದ್ದೆಲ್ಲಾ ಮಾರಿಬಿಡ್ತೀವಿ. ಮತ್ತೆ ಬಿತ್ತೋ ಟೈಮಿಗೆ ಆಕಿನ ಕೇಳಕ್ಕ ಹೋಗ್ತೀವಿ. ಆಗ ಏನಂತಾಳಾಕಿ, "ಇಷ್ಟೆಲ್ಲ ಮಾತಾಡ್ತಾಳ, ಬೀಜ ಕೇಳಕ್ಕೆ ಬಂದಾಳ, ಮಾರಕಂದು ತಿನ್ಬಿಡ್ತಾರ, ಈಗ ನನ್ನ ಹತ್ತಿರ ಕೇಳಕ್ಕ ಬರ್ತಾಳ" ಅಂತಾರ. ನಮ್ಮ ಬೀಜ ಹಾಳಾಗಲು ಕಾರಣ ನೂರಕ್ಕೆ 90 ಮಂದಿ ಎಲ್ಲ ಬೀಜ ಮಾರಿಬಿಡ್ತಾರ. ಎಲ್ಲೋ 10 ಪೈಸದಷ್ಟು ಮಂದಿ ಮಾತ್ರ ಇಟಕಂಡಾರ. ಸುಳ್ಳು ಯಾಕೆ ಹೇಳಬೇಕು. ವರ್ಷ ವರ್ಷ ಕಾಳಜಿಯಿಂದ ಇಟಕೊಳ್ಳುವವರು ಯಾರೋ 10 ಪೈಸ ಮಂದಿ ಮಾತ್ರ. ಹೆಂಗಿದ್ರೂ ಮುಂದಿನ ವರ್ಷಕ್ಕೆ ತಾನೆ. ಸುಬ್ಬಣ್ಣನ ಅಂಗಡ್ಯಾಗೆ ರೊಕ್ಕ ಕೊಟ್ರೆ ಸಿಗಲ್ವ ಅನ್ನೋ ಭಾವನೆನವರೇ ಹೆಚ್ಚಿರ್ತಾರ. ಹೆಂಗಸರಿಗೂ ಈ ಬುದ್ಧಿ ಇದೆ.

ನಮ್ಮ ಮನೆಯಲ್ಲಿ ಹಿರಿಯರಿದ್ದರೆ, 'ಅವ್ರಿವರ ಮನೆಗೆ ಯಾಕೆ ಹೋಗ್ತೀಯವ್ವ, ನೀನೆ ಜೋಪಾನ ಮಾಡಿ ಇಟಗಾ' ಅಂತ ಹೇಳ್ತಾರ. ಬೀಜ ಸಂರಕ್ಷಣೆ ಮಾಡದು ಕಷ್ಟ ಆಕೇತಿ ಅಂತ, ಗಂಡಸುಮಕ್ಕಳು ಏನಾರ ಮಾಡ್ಕ್ಯಂದು ಬರಲಿ, ಅವರು ಅಂಗಡಿಯಿಂದ ತಂದು ಬಿತ್ತಾರ ಅಂದು ಬಿಟ್ಟು ನಾವು ಸುಮ್ಮನಾಗಿ ಬಿಡ್ತೀವಿ. ಆರಿಸ್ಬೇಕು, ಒಣಗಿಸಬೇಕು, ಕಟ್ಟಿ ಇಡಬೇಕು ಇದೆಲ್ಲ ಯಾರು ಮಾಡ್ತಾರೆ ಅನ್ನೋ ಭಾವನೆ ಇರೋರು ಮಾರತಾರು. ಆದರೆ ನಾವೆಲ್ಲ ಒಂದು ಸೇರಾರು ಇಟ್ಟುಕೊಂಡಿರ್ತೀವಿ. ತೀರ ಮಾರ್ಕಬೇಕು ಅನ್ನೋವರು ಯಾರೂ ಇಲ್ಲ. ಒಟ್ಟಿನಲ್ಲಿ ಗಂಡ್ಸರು ಹೈಬ್ರಿಡ್ ಬೀಜದ ಆಸೆಗೆ ಬಿದ್ದು ಹೆಂಗಸರಲ್ಲೂ ಬೀಜದ ಬಗ್ಗೆ ನಿರ್ಲಕ್ಷ್ಯ ಪ್ರಾರಂಭವಾಯಿತು.

ಬೇಸಾಯದಲ್ಲಿ ಹೆಂಗಸರದ್ದು ಹೇಳಿ ತೀರದ ಕಷ್ಟ

ಬೇಸಾಯದಲ್ಲಿ ರಾಸಾಯನಿಕ, ಹೈಬ್ರಿಡ್ ಬೀಜ ಎಲ್ಲ ಬಂದ ಮೇಲೆ ಹೆಂಗಸರ ಕಷ್ಟ ಹೆಚ್ಚಾಯಿತು. ಮೊಟ್ಟಮೊದಲನೆಯದಾಗಿ ನೀರು ಕಡಿಮಿಯಾತು. ಮತ್ತು ಕಳಿ(ಕಳೆ) ಹೆಚ್ಚಾತು. ಎಲ್ಲಕ್ಕಿಂತ ಹೆಚ್ಚು ಮೊದಲು ಕಳಿನೆ. ಯಾಕಂದ್ರ ಕಳಿ ಕೀಳೂದು ಪೂರ್ತಿ ಹೆಣಮಕ್ಕಳೇ. ಗಂಡಸಮಕ್ಕಳು ಕಳಿ ಕೀಳಂಗಿಲ್ಲ. ನಮ್ಮ ಕಡಿ ಕಾಂಗ್ರೆಸ್ ಗಿಡನೇ ಇದ್ದಿಲ್ಲ. ಈಗ ಸಿಕ್ಕಾಪಟ್ಟೆ ಕಾಂಗ್ರೆಸ್ ಗಿಡ. ಅದು ಯಾವ ದೇಸದಿಂದ ಬಂತೋ ಏನೋ. 1975-76ನೇ ಇಸವಿಯಲ್ಲಿ ಕೆಂಪು ಜೋಳ ಬಂತು. ಅದು ಈಗ ನಮ್ಮ ಜವಾರಿ ಬೀಜದ ಥರನೇ ಆಗಿದೆ. ಅದರ ಒಳಗ ಇದರ ಬೀಜ ಇತ್ತು ಅಂತ ಹೇಳ್ತಾರ. ಅದನ್ನ ಆಗ ಸೊಸೈಟಿಯಲ್ಲಿ ತಂದು ಕೊಟ್ಟರು. ಅದು ಯಾವ ಕಡಿಯಿಂದ ಬಂದದ್ದೋ, ಅದೇನು ಜಪಾನ್ ಜರ್ಮನಿಯಿಂದ ಬರದೋ ಗೊತ್ತಿಲ್ಲ. ಇನ್ನು ಕೆಲವರು ಗೋಧಿ ಜತೆ ಬಂತು ಅಂತಲೂ ಹೇಳ್ತಾರ. ಈ ಕಾಂಗ್ರೆಸ್ ಗಿಡ ಒಂದು ಗಿಡ ಒಂದು ಹೊಲದಲ್ಲಿ ಇತ್ತಪ್ಪ ಅಂದ್ರ ಒಂದು ಕೋಟ್ಯಂತರ ಬೀಜ ಆಗತೈತಿ. ಕಾಂಗ್ರೆಸ್ ಗಿಡ ಈ ಥರ ಕಳೆ ಬರದು ಜಾಸ್ತಿ ಆದಮೇಲೆ ಹೆಂಗಸರ ಕೆಲಸ ಜಾಸ್ತಿಯಾಯ್ತು; ಬೆಳೆನೂ ಕಡಿಮೆಯಾಯ್ತು. ಅದು ಬಂದರೆ ನಮ್ಮ ಬೆಳೆ ನಾಶ. ನಮ್ಮ ಬೆಳೆ ಸೊರಗಿದ್ದರೆ ಅದು ಒಳ್ಳೆ ಪುಷ್ಕಳವಾಗಿ ಬೆಳೆದಿರುತ್ತೆ. ಒಟ್ಟಿನಲ್ಲಿ ಈಗ ಯಾವ ಬೆಳೆ ಹಾಕಿದರೂ ಕಳಿನೇ ಜಾಸ್ತಿ.

ನೀರು

ರಾಸಾಯನಿಕ ಕೃಷಿ ಬಂದಮೇಲೆ ಬೋರು ಕೊರೆದು, ಕೊರೆದು ನೀರಿನ ಅಭಾವ ಜಾಸ್ತಿಯಾಗ್ತಾ ಬಂತು. ಮಳೆ ಕಮ್ಮಿಯಾತು. ಬೋರಲ್ಲೂ ನೀರು ಹೋಗಾಕತ್ತು. ಹಿಂಗಾಗಿ ಹೆಣಮಕ್ಕಳಿಗೆ ತ್ರಾಸ ಹೆಚ್ಚಾತು. ನೀರು ಕಡಿಮೆಯಾಯ್ತು, ಕೃಷಿಗೆ ಮಾತ್ರ ಅಲ್ಲ. ಎಲ್ಲದಕ್ಕೂ. ನಮ್ಮ ಹಳ್ಳಿಗಳಲ್ಲಿ ಮುಕ್ಕಾಲು ಭಾಗ ಬಾವಿ ತುಂಬಿರದು ಮುಂಚೆ ಎಲ್ಲ. ಈಗ ಯಾವ ಬಾವಿಲೂ ನೀರಿಲ್ಲ. ಸೇದ ಬಾವಿಲಿ ನೀರೇ ಇಲ್ಲ.

ಹೆಣಮಕ್ಕಳಿಗೆ ಎಲ್ಲದಕ್ಕೂ ನೀರು ಬೇಕು. ಪ್ರತಿಯೊಂದು ಕೆಲಸಕ್ಕೂ ನೀರು ಬೇಕು. ನೀರಿಲ್ಲದೆ ಹೆಣಮಕ್ಕಳ ಪ್ರಪಂಚವೇ ಇಲ್ಲ. ಗಂಡಸುಮಕ್ಕಳು ಒಂದು ಕಪ್ಪು ಎಲ್ಲಾನಾ ಕುಡದು ಕಾಲ ಕಳಕಂತಾರ. ಹೆಣಮಕ್ಕಳು ಕಾಲ ಕಳಯಕ್ಕ ಆಗತದಾ? ಒಂದು ಬಟ್ಟೆ ಒಗಿಯಕ್ಕ, ಒಂದು ಅಡಿಗಿ ಮಾಡಲಕ್ಕ, ಮನಿಗೆ ಹೋಗಿ ಬಂದವರಿಗೆ ಅನುಸರಿಸಕ್ಕೆ ನೀರು ಬೇಕು; ಮಕ್ಕಳುಮರಿ ಸ್ನಾನ, ನಮಗೆ ಸ್ನಾನ ಎಲ್ಲಕ್ಕೂ ನೀರು ಬೇಕು. ಗಂಡಸು ಮಕ್ಕಳಿಗೇನು, ಅವರು ಮೈತೊಳೀದಲ ಇರ್ತಾರ, ಅವರಿಗೆ ಸ್ನಾನ ಇಲ್ಲದೆ ಎಷ್ಟು ದಿನ ಇದ್ರೂ ನಡಿತದ. ಹೆಂಗ್ಸರಿಗೆ ಹಾಗಲ್ಲ. ನಮಗೆ ಸ್ನಾನ ಇಲ್ಲದಿದ್ದರೆ ಹ್ಯಾಂಗ ನಡಿತತಿ? ತಿಂಗಳಿಗೊಂದು ಸಲ ಹೊರಗಾಗ್ತಿವಿ. ನಾವು ಮಾಡೋ ಕೆಲಸನೂ ಹಂಗ ಇರತೈತಿ. ನಾವು ಅಡಿಗೆ ಮಾಡ್ಕ್ಯಂತ, ರೊಟ್ಟಿ ಸುಡತಿರ್ತೀವಿ, ಮಕ್ಕಳ ಮರಿ ನೋಡತಿರ್ತೀವಿ, ಸ್ನಾನ ಮಾಡಲೇಬೇಕಲ್ರಿ ನಾವು. ಒಟ್ಟು ಅಂತೂ ನಮ್ಮ ಇಡೀ ಬದುಕೇ ನೀರಿನ ಸುತ್ಲೇ ಮತ್ತೆ.

ಗಂಡಸುಮಕ್ಕಳಿಗೆ ನೀರಿನ ಮಹತ್ವ ಇರಲ್ಲ. ಬೀದಿ ನಲ್ಲಿನಲ್ಲಿ ಹೆಣ ಮಕ್ಕಳೇ ನಿಂತಿರ್ತಾರ. ಗಂಡಸುಮಕ್ಕಳು ಒಬ್ರೂ ಅಲ್ಲಿ ಕಾಣಕ್ಕೆ ಸಿಗಂಗಿಲ್ರಿ. ಎಲ್ಲಿ ಗುಂಪಿರತೈತಿ ಅವರು ಅಲ್ಲಿ ನಿಂತಿರ್ತಾರ, ಇಲ್ಲ ಬೀಡಿ ವಗೈರೆ ಸೇದಿಕೊಂತಾ ನಿಂತಿರ್ತಾರ. ಒಂದು ಕೊಡ ನೀರು ಹೊತ್ಕ ಬರ್ರಿ ಅಂದ್ರ, ಅಲ್ಲಿ ಯಾರಾರು ಸಿಕ್ತಾರ ಅಲ್ಲೇ ಬೀಡಿ ಸೇದಿಕೊಂತ ನಿಂತ್ಕತಾರ. ಹೇಳಿದರ ' ನೀ ಹೊತ್ಕ ಬಂದ್ರೆ ಬಾ, ಬಿಟ್ರೆ ಬಿಡು' ಅಂತಾರ.



ಈಗೆಲ್ಲ 300, 400, 600 ಅಡಿ ಬೋರು ಹೊಡಾಸ್ತಾರ. ಅದರಿಂದ ಜಲ ಎಲ್ಲ ಎತ್ಲಾಗೆ ತಿರಗ್ತದ ಹೇಳಕ್ಕಾಗಲ್ಲ. ಅದೇ ಕಾರಣ ನಮ್ಮ ಬಾವಿ ಎಲ್ಲ ಬತ್ತಕ್ಕ. ಈಗ ಕೆಲ ವರ್ಷದಿಂದ ನೀರಿಗೆ ಬಹಳ ಕಷ್ಟ ಆಗಿ ಹೆಂಗಸರಿಗೆ ತ್ರಾಸಾಗ್ಯದ.

ಮೊದಲು ಕುಟ್ಟ ಬೋರು ಅಂತ ಇತ್ತು. ಅದಕ್ಕೂ ಮೊದಲು ಬಾವಿ ತೋಡಿಸವ್ರು, ನೀರು ಹೆಚ್ಚು ಒಳಗೋಗತ್ಲೇ ಕುಟ್ಟ ಬೋರೂ ಬಿಟ್ರು, ಬಾವಿನೂ ಬಿಟ್ರು. ಈಗ ನಾನು 500 ಅಡಿ ಹೊಡಿಸ್ದೆ, 600 ಅಡಿ ಹೊಡಿಸ್ದೆ, 700 ಅಡಿ ಹೊಡಸ್ದೆ ಅನ್ನದೇ ದೊಡ್ಡ ಜಂಬ. 20 ಸಾವಿರ ಆದ್ರೂ ಲಕ್ಷಿಲ್ಲ, 40 ಸಾವಿರ ಆದ್ರೂ ಲಕ್ಷಿಲ್ಲ. ಕುಟ್ಟ ಬೋರು, ಬಾವಿ ಎಲ್ಲ 15-20 ದಿವಸ ತೋಡವ್ರು, ಈಗ ಬೋರೆಲ್ಲ ಒಂದೇ ದಿನದಲ್ಲಿ ಹೊಡಿತಾರ.

(ಮುಂದುವರಿಯುವುದು)

ಸ್ವಾತಂತ್ರ್ಯದ ಹಾಡುಗಳು....

(7ನೇ ಪುಟದಿಂದ)

'ಕತ್ತಲೆಯ ಸಮಯದಲ್ಲಿ ಹಾಡುಗಾರಿಕೆ ಇರುತ್ತದೆಯೇ?' ಎನ್ನುತ್ತಾರೆ ಬೆಟ್ರೋಲ್ಡ್ ಬ್ರೆಕ್ಟ್. 'ಹೌದು' ಎನ್ನುವುದು ಆತನ ಉತ್ತರ. 'ಕತ್ತಲ ಸಮಯದ ಬಗ್ಗೆ ಹಾಡುಗಾರಿಕೆ ಇರುತ್ತದೆ' ಎನ್ನುತ್ತಾನೆ ಆತ.

ಕತ್ತಲ ಸಮಯದಿಂದ ಸ್ವಾತಂತ್ರ್ಯದ ಬಗ್ಗೆ ಹಾಡಬೇಕೆಂದರೆ ಸ್ವಾತಂತ್ರ್ಯ ಹಾಗೂ ಹಾಡಿನ ಅರ್ಥಗಳನ್ನು ನಾವು ಮತ್ತೆ ಶೋಧಿಸಬೇಕಾಗಿದೆ. ನಮ್ಮಗೆ ಹೊಸ ಭಾಷೆಗಳು ಬೇಕು, ಹೊಸ ಧ್ವನಿಗಳು ಬೇಕು, ಹೊಸ ಸಂಪರ್ಕಗಳು ಬೇಕು, ಹೊಸ ಸ್ಫೂರ್ತಿ ಬೇಕು. ಈ ರೀತಿಯ ಸ್ಫೂರ್ತಿಯನ್ನು ನೇಪಾಳದ ಮಹಿಳಾ ಗುಂಪು ಇತ್ತೀಚೆಗೆ ನೀಡಿದ ಘೋಷಣಾಪತ್ರದಲ್ಲಿ ಕಾಣುತ್ತದೆ. ಜಾನ್ 'ಚರಿತ್ರ ಹೀನ್ ಚೇಲಿ (Girls of even worse character)' ಗುಂಪು ಮೂಲ ಗುಂಪಾದ ಚರಿತ್ರ ಹೀನ್ ಚೇಲಿಯಿಂದ (Girls of Bad Character) ತಾವು ದೂರ ಸರಿದಿದ್ದಾಗಿ ಹೇಳಿದರು. ಹೀಗೆ ಗುಂಪಿನಿಂದ ದೂರ ಸರಿದುದಕ್ಕೆ ಕಾರಣ ನೀಡುತ್ತಾ ಅವರು ಹೇಳುತ್ತಾರೆ -- ನಮ್ಮ ತಾಯಿ ಗುಂಪಿನ ಮಕ್ಕಳು ಕೆಟ್ಟದ್ದಾಗಿ ವರ್ತಿಸುವುದಿಲ್ಲ. ಅವರು ವಿವಾಹವಾಗಿದ್ದಾರೆ. ಸಂತೋಷವಾಗಿದ್ದಾರೆ.... ಚೆನ್ನಾಗಿ ಬೆಳೆಸಿದ ಮಕ್ಕಳನ್ನು ಹೊಂದಿದ್ದಾರೆ..... ಇದನ್ನು ನಾವು ಅಗಾಧ ಸಂಚು ಎಂದು ಭಾವಿಸುತ್ತೇವೆ. ಈ ಘೋಷಣೆಯ 11ನೇ ಅಂಶ ಇನ್ನೂ ಚೆನ್ನಾಗಿದೆ : "ದಾನಿಗಳೇ ಹೊರಟು ಹೋಗಿ! ನಿಮ್ಮೆಲ್ಲ ಯೋಜನೆಗಳು, ಸಂಪರ್ಕ ಜಾಲಗಳು, ವಿಚಾರ ಸಂಕಿರಣಗಳು ನಮ್ಮ ಅತ್ಯುತ್ತಮ ಮಹಿಳೆಯರನ್ನು ಮಹಿಳಾ ಚಳವಳಿಯನ್ನು ನಡೆಸಲಾಗದಷ್ಟು ಬಿಡುವಿಲ್ಲದವರನ್ನಾಗಿಸಿವೆ. ಹೊರಟುಹೋಗಿ ನಿಮ್ಮ ದೇಶಕ್ಕಿಂತ ಅವರ ದೇಶಕ್ಕೆ ಅವರ ಅಗತ್ಯ ಹೆಚ್ಚಿದೆ. ಒಳ್ಳೆಯ ನಡತೆಯ ಬಗ್ಗೆ ಕಡಿಮೆ ಸಹನೆ, ಸ್ವಲ್ಪ ಹೆಚ್ಚಿನ ನಗು, ಹೆಚ್ಚಿನ ಕೋಪ, ಬಹುಶಃ ಕಡಿಮೆ ಅನುದಾನ - ವಿಶೇಷವಾಗಿ ಜಾಗತೀಕರಣದ ವಿಚಾರಧಾರೆಗೆ ತಳಕು ಹಾಕಿಕೊಂಡ ಅನುದಾನ.... ಆಗ ಖಂಡಿತವಾಗಿ ನಮ್ಮ ಮಕ್ಕಳಿಗೆ ಕಲಿಸಲು ಹೊಸ ಸ್ವಾತಂತ್ರ್ಯದ ಹಾಡುಗಳನ್ನು ನಾವು ಹೊಂದಬಹುದಾಗಿದೆ.

❑

ಸ್ತ್ರೀ ಮುಕ್ತಿಪಥ....

(20ನೇ ಪುಟದಿಂದ)

ಸ್ತ್ರೀಯರ ನಡೆನುಡಿಗಳ ಮೇಲೆ ಹೇರುವ ಕಟ್ಟುಪಾಡುಗಳನ್ನು ಪ್ರಶ್ನಿಸುವ ಅವರ ಪದ್ಯ 'ಸನಾತನಿಯ ಜೊತೆ ಸಂಭಾಷಣೆ'ಯ ಕೊನೆಯ ಸಾಲುಗಳು ಗಮನಾರ್ಹ :

'ಹೆಪ್ಪಿಗೆ ಬಂದವರು ಹಸುವಿನ ಬೆಲೆ ಕೇಳಬಾರದು
ತಪ್ಪಿಗೆ ತಡಕುವವರು ಮೊಲೆ ನೋಡಬಾರದು"

ಡಾ. ಕವಿತಾ ರೈ ತಮ್ಮ 'ಪ್ರತಿಭಾ ಕಾವ್ಯ : ಒಂದು ಮರು ಓದು' ಲೇಖನದಲ್ಲಿ ಈ ಅಂಶಗಳನ್ನು ಗಮನಿಸುತ್ತಾ ಬರೆಯುತ್ತಾರೆ : "ಪ್ರತಿಭಾ ಅವರ ಕವನಗಳಲ್ಲಿ ಅನಾವರಣಗೊಳ್ಳುವ ಸಂಭೋಗಾನುಭವದ ಪರಸ್ಪರ ವೈರುಧ್ಯಗಳೇ ಸ್ತ್ರೀವಾದ ನಿರೂಪಿಸುವ ಭಿನ್ನತೆಯ ಆಯಾಮವಾಗಿದೆ.... ಅವರ ಕವನಗಳು ಸ್ಥಾಯೀಭಾವ ಅಥವಾ ಕೇಂದ್ರರೂಪೀ ಸಂಚಲನ ಎಂದು ಕರೆಯಬಹುದಾದ 'ಫ್ಯಾಲಿಕ್' ಸಂಕೇತಗಳನ್ನು ಒಡೆಯುತ್ತವೆ. ಭಂಜಿಸುತ್ತವೆ...."

ಈ ಮೊದಲೇ ಪ್ರಸ್ತಾಪಿಸಿದ ಹಾಗೆ, ಸಂವಹನ ಮಾಧ್ಯಮಗಳ ಮೂಲಕ ಪ್ರಧಾನ ಸಂಸ್ಕೃತಿಗೆ ಪ್ರತಿರೋಧ ವ್ಯಕ್ತಪಡಿಸುವ ಕೆಲಸ ನಮ್ಮ ಲೇಖಕಿಯರ ಸಾಹಿತ್ಯದಲ್ಲಿ ಸ್ವಲ್ಪಮಟ್ಟಿಗೆ ಆಗುತ್ತಿದೆ. ಆದರೆ ಪ್ರತಿರೋಧ ವನ್ನು ಬೇರೆಬೇರೆ ರೂಪಗಳಲ್ಲಿ ತನ್ನ ಅನುಕೂಲಕ್ಕೆ ಬಳಸಿಕೊಳ್ಳುವ ವ್ಯವಸ್ಥೆಯ ವಿರುದ್ಧ ಪೂರ್ತಿ ಜಾಗೃತಿ ಅಥವಾ ಆ ಎಚ್ಚರಿಕೆಯ ಅಭಾವ ಸಮಕಾಲೀನ ಸಾಮಾಜಿಕ ಸಂದರ್ಭದಲ್ಲಿದೆ.

ಮಹಿಳೆ ರಾಷ್ಟ್ರಾಧ್ಯಕ್ಷೆಯಾಗಿದ್ದಾಳೆ, ಪ್ರಧಾನಮಂತ್ರಿಯಾಗಿದ್ದಾಳೆ, ಆಫೀಸರ್ ಆಗಿದ್ದಾಳೆ, ಆರ್ಥಿಕವಾಗಿ ಪ್ರಗತಿ ಹೊಂದಿದ್ದಾಳೆ ಎನ್ನುತ್ತಲೆ, ಇನ್ನೊಂದೆಡೆ ಸ್ತ್ರೀದೇಹ, ಲೈಂಗಿಕತೆಯನ್ನು ಪ್ರತೀಕಗಳ ಮೂಲಕ ಸರಕಾಗಿ ಮಾರಾಟ ಮಾಡುತ್ತಿರುವ, ಸ್ತ್ರೀಮುಕ್ತಿಯ ಪಥವನ್ನು ತನ್ನ ನಿರ್ದೇಶನ ದಲ್ಲೇ ಚಾಣಾಕ್ಷತೆಯಿಂದ ಇಟ್ಟುಕೊಂಡಿರುವ ಬಂಡವಾಶಾಹಿ ಪುರುಷ ಪ್ರಧಾನ ಸಂಸ್ಕೃತಿಗೆ ಸಮರ್ಥ ಪ್ರತಿಭಟನೆ ತೋರುವ ಅನ್ಯಮಾರ್ಗಗಳ ಶೋಧವೂ ಇಂದಿನ ಮಹಿಳಾವಾದದ ಅಗತ್ಯವಾಗಿದೆ.

❑

.....ಭಾರತೀಯ ಸ್ತ್ರೀವಾದಿ ಚಳವಳಿಯ ಪ್ರಮುಖ ನಿಲುವು ಕೆಲವು ಪಾಶ್ಚಾತ್ಯ ಸ್ತ್ರೀ ಮಾದರಿಗಳ ಹಾಗೆ ಸ್ತ್ರೀಪ್ರಧಾನತೆಯ ಅಂಶಗಳನ್ನು ಹೊಂದಿರದೇ, ಸ್ತ್ರೀ-ಪುರುಷರಿಬ್ಬರಿಗೂ ಸಮಾನ ಅವಕಾಶಗಳನ್ನು ಕಲ್ಪಿಸುವ ಸಾಮಾಜಿಕ ವ್ಯವಸ್ಥೆಯ ಗುರಿಯನ್ನು ಹೊಂದಿದೆ. ಆದ್ದರಿಂದ ಈಗ ನಮ್ಮ ಚಿಂತನೆ ಏನಿದ್ದರೂ ಪುರುಷ ಪ್ರಧಾನ ಸಾಮಾಜಿಕ ನಿಲುವನ್ನು ಪರಿವರ್ತಿಸಿ ಸಮಾನಗೊಳಿಸುವ ಸದುದ್ದೇಶವನ್ನು ಹೊಂದಿರಬೇಕು. ಯಾವ ವ್ಯಕ್ತಿಯ ಶೋಷಣೆಯೂ ಆಗದಂತಿರುವ ವ್ಯವಸ್ಥೆಯನ್ನು ಸ್ಥಾಪಿಸುವ ಗುರಿಯುಳ್ಳದ್ದಾಗಿರಬೇಕು. ಅಥವಾ ಇನ್ನೊಂದು ಅರ್ಥದಲ್ಲಿ, ಮುಖ್ಯವಾಗಿ ಕೌಟುಂಬಿಕ ಹಾಗೂ ಸಾಮಾಜಿಕ ಹಿನ್ನೆಲೆಯಲ್ಲಿ ಹೆಣ್ಣಿಗಾಗುತ್ತಿರುವ ಅನ್ಯಾಯ, ಶೋಷಣೆಗಳನ್ನು ಪ್ರತಿಭಟಿಸುವಂತಹದಾಗಿರಬೇಕು...."

- ಡಾ. ಶಾಲಿನಿ ರಘುನಾಥ *(ಮಹಿಳಾ ಅಧ್ಯಯನ, ಕ.ವಿ.ವಿ., ಹಂಪಿ)*

Edited, Printed, Published and owned by Rajeshwari H.S., No. 114/5, 9th Cross 2nd Main, Chamarajpet, Bangalore - 560 018.
Printed at ILA Mudrana, No. 36, 40 Ft. Road, Raghavanagara, New Timberyard Layout, Bangalore - 560 026.
Published at No. 114/5, 9th Cross, 2nd Main, Chamarajpet, Bangalore - 560 018. Editor : Rajeshwari H.S.

ಕೆ.ಪಿ.ಸಿ.ಎಲ್. : ಕರ್ನಾಟಕವನ್ನು ಶಕ್ತಿಯುತಗೊಳಿಸುತ್ತಿದೆ

ಕರ್ನಾಟಕ ವಿದ್ಯುತ್
ನಿಗಮ ನಿಯಮಿತ

ವಿದ್ಯುತ್ ಕ್ಷೇತ್ರದ ಬಹಳಷ್ಟು ಉದ್ದಿಮೆಗಳು ಸುಧಾರಣೆಗಳ ಒತ್ತಡಗಳಿಗೆ ಪ್ರತಿಕ್ರಿಯಿಸುತ್ತಿರುವ ಕಾಲದಲ್ಲಿ, ಕೆ.ಪಿ.ಸಿ.ಎಲ್. ನಿಜಕ್ಕೂ ಮುಂಚೂಣಿಯಾಗಿ ಸ್ಪಂದಿಸಿದೆ. ಕಠಿಣ ಸುಧಾರಣೆಗಳಿಂದಾಗಿ ಈ ಕ್ಷೇತ್ರದ ಮೇಲಿರುವ ಒತ್ತಡಗಳ ನಡುವೆಯೂ ಸಹ, ಕೆ.ಪಿ.ಸಿ.ಎಲ್. ಪರಿಸ್ಥಿತಿಗೆ ಹೊಂದಿಕೊಳ್ಳುವ ನೂತನ ಉಪಕ್ರಮಗಳ ಮೂಲಕ ತನ್ನ ಕಾರ್ಯಾಚರಣೆಯನ್ನು ಬದಲಿಸಿಕೊಂಡು, ಮುನ್ನುಗ್ಗಿ ಇಂದು ಇತರ ಉಪಯುಕ್ತತೆಗಳಿಗೆ ಮಾದರಿಯಾಗಿ ನಿಂತಿದೆ. ಕೆಪಿಸಿಎಲ್‌ನ ನವೀನ ತಂತ್ರಜ್ಞಾನ ಮತ್ತು ಹೊಸ ಯೋಜನೆಗಳಿಗೆ ಹಣಹೂಡಿಕೆ, ಪರಿಣಾಮಕಾರಿ ಹಣಕಾಸು, ಗುತ್ತಿಗೆ, ಕಲ್ಲಿದ್ದಲು, ಬೂದಿ ಹಾಗೂ ಪರಿಸರ ಸಂರಕ್ಷಣೆ, ವ್ಯವಸ್ಥಾಪನೆ, ಇವೆಲ್ಲಕ್ಕೂ ಮಿಗಿಲಾಗಿ ಯೋಜನಾಭಿವೃದ್ಧಿ, ಚಾಲನೆ, ಪಾಲನೆ ಮತ್ತು ಇತರ ಉಪಯುಕ್ತತೆಗಳಿಗೆ ಸಲಹಾ ಸೇವೆ ಇವೆಲ್ಲವು ರಾಷ್ಟ್ರದ ವಿದ್ಯುತ್ ಕ್ಷೇತ್ರದ ವರ್ಚಸ್ಸಿಗೆ ಕೊಡುಗೆಗಳಾಗಿವೆ.

1970ರಲ್ಲಿ 746 ಮೆಗಾವಾಟ್ (ಮೆ.ವಾ.) ಸಾಮರ್ಥ್ಯದೊಂದಿಗೆ ರಚಿತಗೊಂಡು ಕೆ.ಪಿ.ಸಿ.ಎಲ್. ಇಂದು ಒಟ್ಟಾರೆ 4995 ಮೆ.ವಾ. ಹೊಂದಿದ್ದು, ಪ್ರಸ್ತುತ ನಿರ್ಮಾಣ ಹಂತದಲ್ಲಿರುವ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರದ ಮೊದಲ ಹಂತ ಮತ್ತು ನಾಗಝರಿ ಘಟಕಗಳ ನವೀಕರಣ ಸೇರಿದಂತೆ ನೂತನ ಯೋಜನೆಗಳಾದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರದ ಎರಡನೇ ಹಂತ, ಬಿಡದಿ, ವಾರಾಹಿ ಜಲವಿದ್ಯುತ್ ಯೋಜನೆ ಹಂತ-2 ಮತ್ತು ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರ (ಘಟಕ-8) ಯೋಜನೆಗಳಿಂದ ಮುಂದಿನ 5 ವರ್ಷಗಳಲ್ಲಿ ಸುಮಾರು 3000 ಮೆ.ವಾ.ಗಳಿಗೂ ಹೆಚ್ಚಿನ ವಿದ್ಯುತ್ ಸಾಮರ್ಥ್ಯವನ್ನು ವಿದ್ಯುತ್ ಜಾಲಕ್ಕೆ ಸೇರಿಸಿ ಕರ್ನಾಟಕವನ್ನು ಶಕ್ತಿಯುತಗೊಳಿಸುತ್ತಿದೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
82, ಶಕ್ತಿಭವನ, ರೇಸ್‌ಕೋರ್ಸ್ ರಸ್ತೆ
ಬೆಂಗಳೂರು - 560 001

ದೂರವಾಣಿ : 2225 6568, ಫ್ಯಾಕ್ಸ್ : 2225 2144
ಇಮೇಲ್ : cccm@karnatakapower.com
ವೆಬ್‌ಸೈಟ್ : www.karnatakapower.com

ಸುಂದರ ಕರ್ನಾಟಕಕ್ಕೆ ಸುವರ್ಣ ಮಹೋತ್ಸವ

ಸುಮಾರು 2000 ವರ್ಷಗಳ ಇತಿಹಾಸ ಕನ್ನಡಿಗರದು. ನಾನಾ ಕಾರಣಗಳಿಂದಾಗಿ ಬೇರೆಬೇರೆ ಭಾಗಗಳಲ್ಲಿ ಚದುರಿ ಹೋಗಿದ್ದ ಕನ್ನಡಿಗರು ಮತ್ತೆ ನವೆಂಬರ್ 1, 1956ರಂದು ಒಂದಾದರು. ಇದು ಏಕೀಕೃತ ಕರ್ನಾಟಕ ಉದಯವಾದ ಸುದಿನ. ಈ ಸಾಧನೆಗಾಗಿ ಆಲೂರು ವೆಂಕಟರಾಯರಾದಿಯಾಗಿ ಅಸಂಖ್ಯಾತ ಸಾಹಿತಿಗಳು, ಕಲಾವಿದರು ಮತ್ತು ವಿವಿಧ ರಂಗಗಳ ಗಣ್ಯರು ಹಾಗೂ ಜನಸಮುದಾಯದ ಪರಿಶ್ರಮ ಮತ್ತು ತ್ಯಾಗವಿದೆ. ಇವರೆಲ್ಲರಿಗೂ ಇಂದು ನಮ್ಮ ನಮನ.

ಕರ್ನಾಟಕ - 50 ವರ್ಷಗಳ ಒಂದು ಅವಲೋಕನ

* ಸರ್ಕಾರದ ಆಡಳಿತ ನಿರ್ವಹಣೆಗಾಗಿ ವಿನೂತನ ಶೈಲಿಯ ವಿಧಾನಸೌಧದ ನಿರ್ಮಾಣ.
* "ಉಳುವವನಿಗೇ ಭೂಮಿ" ಕಾಯಿದೆಯನ್ನು ಜಾರಿಗೊಳಿಸಿದ ಭಾರತದ ಮೊದಲ ರಾಜ್ಯ.
* ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪ್ರತ್ಯೇಕ ಆಯೋಗ ರಚಿಸಿ, ರಾಷ್ಟ್ರಕ್ಕೆ ಮಾದರಿಯಾದ ರಾಜ್ಯ.
* ಆಡಳಿತ ವಿಕೇಂದ್ರೀಕರಣದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಯಶಸ್ವಿಯಾಗಿ ಜಾರಿಗೆ ತಂದ ಮೊಟ್ಟಮೊದಲ ಮಾದರಿ ರಾಜ್ಯ.
* ಸಾಕ್ಷರತೆಯಲ್ಲಿ ಗಣನೀಯ ಸಾಧನೆ - ಕೇವಲ ಶೇ. 24ರಷ್ಟಿದ್ದ ಸಾಕ್ಷರತೆ ಈಗ ಶೇ. 71ಕ್ಕೆ ಏರಿಕೆ.
* ಮಹಿಳೆಯರಿಗೆ ಉದ್ಯೋಗ ಮತ್ತು ಆಡಳಿತದಲ್ಲಿ ಮೀಸಲಾತಿ.
* ನೀರಾವರಿ ಸಾಮರ್ಥ್ಯ - 23.84 ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ.
* ವಿಶ್ವ ಸಂಸ್ಥೆಯ ಪ್ರಶಂಸೆ ಮತ್ತು ಪ್ರಶಸ್ತಿಗೆ ಪಾತ್ರವಾದ "ಭೂಮಿ" ಯೋಜನೆಯಡಿ ರೈತರಿಗೆ ಕಂಪ್ಯೂಟರ್ ಮೂಲಕ ಪಹಣಿ ವಿತರಿಸಿದ ಪ್ರಪ್ರಥಮ ರಾಜ್ಯ.
* ಮಾಹಿತಿ ತಂತ್ರಜ್ಞಾನದಲ್ಲಿ ಇಡೀ ರಾಷ್ಟ್ರದಲ್ಲಿ ಪ್ರಥಮ ಸ್ಥಾನ ಪಡೆದ ರಾಜ್ಯ.

ಕರ್ನಾಟಕ ಸುವರ್ಣ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ನಮ್ಮ ನಾಡಿನ ಅಪೂರ್ವ ಸಂಸ್ಕೃತಿ ಮತ್ತು ಭವ್ಯ ಪರಂಪರೆಯನ್ನು ಎತ್ತಿ ಹಿಡಿಯೋಣ. ಅದರ ಉಜ್ವಲ ಬೆಳಕಿನಲ್ಲಿ ರಾಜ್ಯದ ಭವ್ಯ ಭವಿಷ್ಯವನ್ನು ರೂಪಿಸಲು ಕಂಕಣಬದ್ಧರಾಗೋಣ.

ಕರ್ನಾಟಕ ವಾರ್ತೆ